Editor: S.Y.GURUSHANTH Publisher: G.N.NAGARAJ RNI No. KARKAN/2006/17926

# ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–19 | ಸಂಚಿಕೆ–16 | ಏಪ್ರಿಲ್ 14–20, 2025 | ಪುಟ 16 | ರೂ.10/–
Volume-19 | Issue-16 | April 14-20, 2025 | Pages 16 | Price. Rs 10/-



## CPI(M) 24 ನೆಯ ಮಹಾಧಿವೇಶನ ಯಶಸ್ವಿ ಸಮಾರೋಪ:

## ಬೆವರ ಲೋಕದೆಡೆ ಸೆಳೆದ ಜನಮಾನಸ ಶ್ರಮಿಕರ ಕೆಂಬಾವುಟದಲ್ಲಿ ಕೆಂಪಾದ ತಮಿಳುನಾಡ ಇಳೆ

## ರಾಜ್ಯಪಾಲರ ಪಾತ್ರ: ಸಂವಿದಾನ ಎತ್ತಿ ಹಿಡಿದು ಕಪಾಳಮೋಕ್ಷ ಮಾಡಿದ ಸುಪ್ರಿಂ ಕೋರ್ಟ್

## ಸಂವಿದಾನಾತ್ಮಕ ಅಡಚಣೆ ನಿವಾರಣೆ:



## ಒಳ ಮೀಸಲಾತಿ ಜಾರಿಯೇ ಈಗಿರುವ ದಾರಿ

## ಯುರೋಪಿನಲ್ಲಿ ರಷ್ಯಾ ವಿರೋಧಿ ಯುದ್ಧೋನ್ಮಾದ ಯಾಕೆ?

# ಅಪಾರ ಪ್ರಮಾಣದ ರೈತ ಸಂಘರ್ಷಗಳು, ಅರಣ್ಯವಾಸಿ ದಂಗೆಗಳು, ಆಹಾರ ದೊಂಬಿಗಳು

ಜಿ.ಎಸ್. ನಾಗರಾಜ್

ಇಂಗ್ಲೆಂಡಿನ ಪೂರ್ವ ಭಾಗದ ಒಂದು ಪ್ರದೇಶದಲ್ಲಿ, ಆ ಭಾಗದ ಒಬ್ಬ ಲಾರ್ಡ್ ವಿಶಾಲ ಕುರಿಗಾವಲು ಮಾಡಲು ಅಲ್ಲಿಯ ಊರೊಟ್ಟಿನ ಭೂಮಿ, ಗೋಮಾಳಗಳ ಸುತ್ತ ದೊಡ್ಡ ಬೇಲಿ ಹಾಕಿ, ತನಗೆ ರಾಜನಿಂದ ಜಹಗೀರಾಗಿ ದೊರೆತಿದ್ದ ಭೂಮಿಗೆ ಸೇರಿಸಿಕೊಂಡ. ಅದರಿಂದ ಅಲ್ಲಿಯ ನೂರಾರು ಭೂಹೀನ ಕೂಲಿಕಾರರಿಗೆ ಮತ್ತು ಸಣ್ಣ ರೈತರಿಗೆ ತಮ್ಮ ರಾಸುಗಳನ್ನು ಮೇಯಿಸಲು, ನಿತ್ಯದ ಅಗತ್ಯ ಸೊಪ್ಪು, ಸೌದೆ ತರಲು ತೊಂದರೆಯಾಯಿತು. ಇದರಿಂದ ರಾಬರ್ಟ್ ಕೆಟ್ ಎಂಬ ಒಬ್ಬ ಸಣ್ಣ ಇನಾಮುದಾರನಿಗೂ ತೊಂದರೆಯಾಯಿತು. ಅವನು ಉಳಿದ ರೈತ, ಕೂಲಿಕಾರರ ಜೊತೆ ಸೇರಿ ಆ ಬೇಲಿಯನ್ನು ಕಿತ್ತು ಹಾಕಿದ. ಇದು ರೈತರ ನಡುವೆ ಜನಪ್ರಿಯವಾಯಿತು. ಇದೇ ರೀತಿ ಆ ಪ್ರದೇಶದ ಹಲವು ಲಾರ್ಡ್‌ಗಳು, ಇತರ ನೊಬಲ್‌ಗಳು ಇಂತಹುದೇ ಕೃತ್ಯ ನಡೆಸಿದಾಗ ಅದರಿಂದ ಬಾಧಿತರಾದವರು ರಾಬರ್ಟ್ ಕೆಟ್ ಸುತ್ತ ಅಣಿನೆರೆದರು.

ಈ ಕುಕೃತ್ಯಗಳಿಗೆ ತಡೆ ಹಾಕಲು ಈ ಲಾರ್ಡ್‌ಗಳು, ನೊಬಲ್‌ಗಳು ವಾಸವಿದ್ದ ನಗರ, ಆಗಿನ ಬ್ರಿಟನ್‌ನ ಎರಡನೇ ದೊಡ್ಡ ನಗರ ನಾರ್ವಿಚ್‌ನ ಕಡೆಗೆ ನಡೆದರು. ದಾರಿಯಲ್ಲಿ ವಿವಿಧ ಹಳ್ಳಿಗಳ ಸಾವಿರಾರು ಜನ ಸೇರುತ್ತಾ ಹೋದರು. ನಗರದ ಹೊರಭಾಗದ ಬಳಿ ಒಂದು ಕಾಡಿನಲ್ಲಿ ಬೀಡು ಬಿಟ್ಟರು. ಆಗ ಇದೇ ರೀತಿ ಬದುಕು ಕಳೆದುಕೊಂಡು ಪಟ್ಟಣದಲ್ಲಿ ಒದ್ದಾಡುತ್ತಿದ್ದ ಸಾವಿರಾರು ಜನ, ನಗರದ ಕುಶಲಕರ್ಮಿಗಳು ಪಟ್ಟಣದಿಂದ ಹೊರಗೆ ಬಂದು ಇವರನ್ನು ಸೇರಿದರು. ರೈತ ಕೂಲಿಕಾರರ ಸೇನೆ 16,000–20,000 ದಷ್ಟು ಬೆಳೆಯಿತು. ಪಟ್ಟಣದ ಕಾವಲು ಸೈನ್ಯವನ್ನು ಸೋಲಿಸಿ ಪಟ್ಟಣವನ್ನು ವಶಪಡಿಸಿಕೊಂಡರು.



ಈ ಹೋರಾಟವನ್ನು ಮುನ್ನಡೆಸಲು ಅದರಲ್ಲಿ ಭಾಗವಹಿಸಿದ ವಿವಿಧ ಭಾಗಗಳ ರೈತರನ್ನು ಒಳಗೊಂಡು ಒಂದು ನಿರ್ವಹಣಾ ಮಂಡಳಿಯನ್ನು ರಚಿಸಿಕೊಂಡರು. ರೈತರ ಸಮಾವೇಶದಲ್ಲಿ ಚರ್ಚಿಸಿ ಆ ಭಾಗದ ಡ್ಯೂಕ್ (ರಾಜನ ಪರವಾಗಿ ಆಡಳಿತ ಮಾಡುವ ಮಾಂಡಲಿಕ/ಸಾಮಂತ)ನಿಗೆ 29 ಹಕ್ಕೊತ್ತಾಯಗಳ ಅರ್ಜಿ ಸಲ್ಲಿಸಿದರು.

ಊರೊಟ್ಟಿನ ಭೂಮಿಯನ್ನು ಆಕ್ರಮಣದಿಂದ ತೆರವು ಮಾಡಿಸಬೇಕು, ನಾಲೆಗಳು, ಹಳ್ಳಗಳು, ಅವುಗಳ ಪಕ್ಕದ ಭೂಮಿಯನ್ನು ವಶಪಡಿಸಿಕೊಳ್ಳಲು ಅವಕಾಶ ನೀಡಬಾರದು. ಗೇಣಿ ಧಾನ್ಯದ ಅಳತೆ, ವ್ಯಾಪಾರ ವ್ಯವಹಾರಗಳ ಅಳತೆಗಳು ಹಿಂದಿನಿಂದ ನಿಗದಿತವಾದ ರೀತಿಯಲ್ಲಿಯೇ ಮುಂದುವರೆಯಬೇಕು, ಇತ್ಯಾದಿ.

**"ಕುರಿಗಳು ಮನುಷ್ಯರನ್ನು ತಿಂದು ಹಾಕಿದವು" ಇಂಥಹ ವಿಶೇಷ ವಿದ್ಯಮಾನ ಬ್ರಿಟನ್‌ನಲ್ಲಿ ಯಥೇಚ್ಛವಾಗಿ ನಡೆಯಿತು. ಇದು ಅಂದಿನ ಬ್ರಿಟನ್‌ನಲ್ಲಿ ಜನಜನಿತವಾದ ಗಾದೆ. ಕೋಟಿಗಟ್ಟಲೆ ರೈತರ ಹಲವು ಹತ್ತು ಲಕ್ಷ ಎಕರೆ ಭೂಮಿ ಲೂಟಿ ಮಾಡಲಾಯಿತು. ಈ ಲೂಟಿ ಮತ್ತು ಕ್ರೌರ್ಯದ ವಿರುದ್ಧ ರೈತರು ಹಲವೆಡೆ ಕೇವಲ ಪ್ರತಿಭಟನೆಯಲ್ಲ, ಸಂಘರ್ಷವನ್ನೇ ನಡೆಸಿದರು.**

ಈ ಸಂಘರ್ಷ ನಡೆದ ಸಮಯ 1549. ಅಂದರೆ ವಿಜಯನಗರ ಸಾಮ್ರಾಜ್ಯದ ಕಾಲ. ಕೃಷ್ಣದೇವರಾಯನ ಎರಡು ದಶಕಗಳ ನಂತರದ ಕಾಲ. ಆ ಸಮಯದಲ್ಲಿಯೇ ರೈತರು ತಮಗಾದ ಅನ್ಯಾಯದ ವಿರುದ್ಧ ಈ ಪರಿಯ ಸಶಸ್ತ್ರ ಸಂಘರ್ಷ ಮಾಡಲು ಸಂಘಟಿತರಾದರು. ಅಷ್ಟೇ ಅಲ್ಲ, ಸ್ಪಷ್ಟವಾಗಿ ತಮ್ಮ ಒತ್ತಾಯಗಳನ್ನು ಆಳುವವರ ಮುಂದೆ ಮಂಡಿಸಿದರು ಎಂಬುದನ್ನು ಗಮನಿಸಬೇಕು.

ರಾಜನ ಕಡೆಯಿಂದ ಕ್ಷಮಾದಾನದ ಭರವಸೆ ನೀಡಿ ಶರಣಾಗಲು ತಿಳಿಸಲಾಯಿತು. ಆದರೆ ಕೆಟ್ ಮತ್ತು ಸಂಗಡಿಗರು ಇದಕ್ಕೆ ಒಪ್ಪಲಿಲ್ಲ. ನಾವು ಯಾವ ತಪ್ಪೂ ಮಾಡದಿರುವುದರಿಂದ ಕ್ಷಮೆಯ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಶರಣಾಗುವ ಮಾತೇ ಇಲ್ಲ. ನಮ್ಮ ಭೂಮಿ ಬಿಟ್ಟುಕೊಡಿ. ನಮ್ಮ ಇತರ ಒತ್ತಾಯ ಈಡೇರಿಸಿ ಎಂದು ಉತ್ತರ ಕೊಟ್ಟರು.

ರಾಜ ಒಬ್ಬ ಸೇನಾಧಿಪತಿಯ ನೇತೃತ್ವದಲ್ಲಿ ಸೈನ್ಯವನ್ನು, ಯುರೋಪಿನ ಬೇರೆ ದೇಶಗಳಿಂದ ನೇಮಿಸಿಕೊಂಡ ಬಾಡಿಗೆ ಸಿಪಾಯಿಗಳನ್ನು ಕಳಿಸಿದ. ಬಿರುಸಿನ ಯುದ್ಧ ನಡೆದು 3,500 ರೈತ ಬಂಡಾಯಗಾರರ ಹತ್ಯೆಯಾಯಿತು. ಅದರ ಜೊತೆಗೆ ನೂರಾರು ಜನರನ್ನು ಬಂಧಿಸಿ ನಂತರ ವಧಿಸಲಾಯಿತು. ರಾಬರ್ಟ್ ಕೆಟ್ ಮತ್ತು ಅವನ ಸೋದರನಿಗೆ ರಾಜನೇ ಮರಣದಂಡನೆ ವಿಧಿಸಿದ. ಕೆಟ್‌ನನ್ನು ಅವನು ವಶಪಡಿಸಿಕೊಂಡಿದ್ದ ಪಟ್ಟಣದ ಜಹಗೀರುದಾರನ ಮಹಲಿನ ತುದಿಯಲ್ಲಿ ನೇಣಿಗೇರಿಸಲಾಯಿತು. ಅವನ ಸೋದರನನ್ನು ಅಲ್ಲಿಯ ಚರ್ಚ್‌ನ ಗೋಪುರದಲ್ಲಿ ನೇಣಿಗೇರಿಸಲಾಯಿತು.



ಈ ಕೃಷಿ ಸಮುದಾಯ ಈ ಸಂಘರ್ಷವನ್ನು ಸುಮಾರು ಎರಡು ತಿಂಗಳ ಕಾಲ ನಡೆಸಲು ಶಕ್ತರಾದರು. ಇದು ಬ್ರಿಟನ್‌ನ ಅತ್ಯಂತ ದೊಡ್ಡ ಬಂಡವಾಳಶಾಹಿ ವಿರೋಧಿ ಸಂಘರ್ಷವೆಂದು ಹೆಸರಾಗಿದೆ.

ಸಾಮಂತರುಗಳಾದ ಲಾರ್ಡ್‌ಗಳು ಮಾತ್ರವಲ್ಲ ಇಂಗ್ಲೆಂಡ್ ಚರ್ಚ್‌ನ ಮುಖ್ಯಸ್ಥನೇ ಈ ರೈತರು ಮತ್ತು ನಾಯಕರನ್ನು ದೇಶ ದ್ರೋಹಿಗಳು, ಗದ್ದಲ ಎಬ್ಬಿಸುವವರು ಎಂದು ಕರೆದ. ದೇವರು ರಾಜ ಮತ್ತು ಆಡಳಿತಗಾರರನ್ನು ಅವರಿಗೆ ಜನ ವಿಧೇಯರಾಗಿರಬೇಕೆಂದು ಇಚ್ಛಿಸಿದ್ದಾನೆ ಎಂದು ಹೇಳಿದ. ಅವರ ಬಾಳಿನ ಸಂಕಟಗಳಿಗೆ ಇವರ್ಯಾರೂ ಗಮನವನ್ನೇ ನೀಡಲಿಲ್ಲ.

**ರೈತರ ನೂರಾರು ಪ್ರತಿಭಟನೆಗಳು**

ಕೆಟ್ ನಾಯಕತ್ವದ ಸಂಘರ್ಷಕ್ಕಿಂತ ಮೊದಲೇ ಆರಂಭವಾಗಿ 1640ರ ರಾಜಪ್ರಭುತ್ವದ ವಿರುದ್ಧದ ಅಂತರಿಕ ಯುದ್ಧದವರೆಗೆ ಊರೊಟ್ಟಿನ ಭೂಮಿ ಆಕ್ರಮಿಸುವುದು, ಗೇಣಿದಾರರನ್ನು ಒಕ್ಕಲೆಬ್ಬಿಸುವುದು ನಿರಂತರವಾಗಿ ನಡೆಯಿತು. ಅದರ ಜೊತೆಗೆ ರೈತ ಕೂಲಿಕಾರರ ಪ್ರತಿಭಟನೆಗಳೂ ಕೂಡಾ ಬೇಲಿಗಳನ್ನು ಕಿತ್ತೊಗೆಯುವುದು, ಬೇಲಿ ಹಾಕಿಕೊಂಡ ಊರೊಟ್ಟಿನ ಜಾಗಗಳನ್ನು ಮರಳಿ ಪಡೆಯುವುದು, ಅದರಲ್ಲಿ ದನಗಳನ್ನು ಮೇಯಿಸುವುದು ಮತ್ತಿತರ ಬಡ ಜನರ ಬದುಕಿನ ಕೆಲಸಗಳಿಗೆ ಬಳಸುವ ಪ್ರಯತ್ನ ಮಾಡುವುದು. ಈ ರೈತರ ಮೇಲೆ ಜಹಗೀರುದಾರರ ಖಾಸಗಿ ಪಡೆಗಳ ದಾಳಿ ನಿರಂತರವಾಗಿ ಸಾಗಿತು. 1540–1640ರ ಒಂದು ಶತಮಾನದ ಅವಧಿಯಲ್ಲಿ ಬ್ರಿಟನ್‌ನ ದಾಖಲೆಗಳಲ್ಲಿ ದೊಂಬಿಗಳು (ರಯಟ್) ಎಂದು ಕರೆಯಲಾಗಿರುವ ಪ್ರತಿಭಟನೆಗಳು ನೂರಕ್ಕಿಂತ ಹೆಚ್ಚು ನಡೆದಿವೆ. ಇದು ಬ್ರಿಟನ್‌ನ ಪ್ರಜಾಪ್ರಭುತ್ವ ಕ್ರಾಂತಿ – ರಾಜ ಪ್ರಭುತ್ವದೊಡನೆ ನಡೆದ ಯುದ್ಧಕ್ಕಿಂತ ಒಂದು ಶತಮಾನ ಮೊದಲಿನಿಂದಲೇ ಕೃಷಿ ಭೂಮಿ ವಶಪಡಿಸಿಕೊಳ್ಳುವ ಕೆಲಸ ಮತ್ತು ಅದರ ವಿರುದ್ಧ ಪ್ರತಿಭಟನೆಗಳು ನಡೆದಿವೆ ಎಂಬುದನ್ನು ಗಮನಿಸಬೇಕು.

ಈ ಪ್ರತಿಭಟನೆಗಳು ಹಲವು ರೀತಿಯಲ್ಲಿ ನಡೆದಿವೆ. ಮಧ್ಯರಾತ್ರಿಯಲ್ಲಿ ನುಗ್ಗಿ ಬೇಲಿ ಕತ್ತರಿಸಿಹಾಕುವುದು ಒಂದು ವಿಧಾನ. ಹಾಡುಹಗಲೇ ತಮಟೆ, ಡೋಲು ಬಾರಿಸುತ್ತಾ, ಹಾಡುತ್ತಾ, ಕುಣಿಯುತ್ತಾ, ಅಲ್ಲಲ್ಲಿಯ ಜಹಗೀರುದಾರರ ಪ್ರತಿಕೃತಿ ಸುಡುತ್ತಾ ಗಂಡಸರು, ಹೆಂಗಸರು ಮೆರವಣಿಗೆ ಬೇಲಿಯನ್ನು ಕಿತ್ತೊಗೆಯುವುದು ಸಾಮಾನ್ಯವಾಗಿತ್ತು.

**ಮಿಡ್‌ಲ್ಯಾಂಡ್ ದಂಗೆ**

ಈ ರೈತ ಪ್ರತಿಭಟನೆಗಳು ಅಲ್ಲಲ್ಲಿ ಪ್ರತ್ಯೇಕವಾಗಿ ನಡೆಯುತ್ತಿದ್ದವು. ಆದರೆ 1607ರಲ್ಲಿ ವಿವಿಧ ಪ್ರದೇಶಗಳ ರೈತರು ತಮ್ಮ ನಡುವೆ ಸಂಪರ್ಕ ಸಾಧಿಸಿ ಒಂದು ದೊಡ್ಡ ಸಂಘಟಿತ ಹೋರಾಟ ಮಾಡಿದರು. ತಮ್ಮನ್ನು ಲೆವೆಲರ್ಸ್, ಡಿಗ್ಗರ್ಸ್ ಎಂದು ಕರೆದುಕೊಂಡು ಪತ್ರಗಳ ಮೂಲಕ ವಿವಿಧ ಪ್ರದೇಶಗಳ ರೈತ, ಕೂಲಿಕಾರರಿಗೆ ಪ್ರತಿಭಟಿಸಲು ಮನವಿ ಮಾಡಿದರು. ಈ ಪ್ರತಿಭಟನೆಯಲ್ಲಿ ವಿವಿಧ

ಪುಟ 4 ಕ್ಕೆ

ಬಹು ದೊಡ್ಡ ಪ್ರಮಾಣದಲ್ಲಿ ಹೊಲಗಳಿಂದ ರೈತ, ಕೂಲಿಕಾರರನ್ನು ಹೊರ ಹಾಕಿ ಕುರಿಗಾವಲು, ಜಿಂಕೆ ಕಾವಲುಗಳು, ರಫ್ತಿಗಾಗಿ ಬೆಳೆಯುವುದು ಆರಂಭವಾಯಿತು.

ಹಿಂದೆ ಬ್ರಿಟನ್‌ನ ವಿವಿಧ ಪ್ರದೇಶಗಳಲ್ಲಿ ಹುಲ್ಲುಗಾವಲು ಕೃಷಿಯ ಭೂಮಿಯ ಅರ್ಧ ಭಾಗ, ಮೂರನೇ ಒಂದು ಭಾಗ, ಕೆಲವು ಪ್ರದೇಶಗಳಲ್ಲಿ ಕಾಲು ಭಾಗ ಮಾತ್ರ ಇತ್ತು. ಈ ಭೂಲೂಟಿ ಹಾಗೂ ಕುರಿಗಾವಲುಗಳಾಗಿ ಪರಿವರ್ತಿಸಿದ ಪರಿಣಾಮವಾಗಿ 1550ರಷ್ಟರ ವೇಳೆಗೇ ಅದು ತಿರುಗು ಮುರುಗಾಗಿ ಹುಲ್ಲುಗಾವಲು ಕೃಷಿ ಭೂಮಿಯ ಮೂರು ಪಟ್ಟಾಗಿತ್ತು ಎಂದು ಮಾರ್ಕ್ಸ್ ದಾಖಲಿಸಿದ್ದಾರೆ. 18ನೇ ಶತಮಾನದ ವೇಳೆಗೆ ಇನ್ನೆಷ್ಟಾಗಿರಬಹುದು!

ಹೀಗೆ ಕೃಷಿ ಭೂಮಿ ಕುಗ್ಗಿದ ಪರಿಣಾಮವಾಗಿ ಆಹಾರದ ಉತ್ಪಾದನೆ ತೀವ್ರವಾಗಿ ಕುಸಿಯಿತು. ಬಡ ರೈತರಿಗೆ, ಕೂಲಿಕಾರರಿಗೆ ಭೂಮಿಯಿಂದ ಹೇಗೋ ಒಂದಿಷ್ಟು ಆಹಾರ ದಕ್ಕಿಸಿಕೊಳ್ಳಲು ಇದ್ದ ಅವಕಾಶ ಕಿತ್ತುಕೊಳ್ಳಲಾಗಿತ್ತು. ಅದೇ ಸಮಯದಲ್ಲಿ ಅಮೆರಿಕಾ ಖಂಡದಿಂದ ಯುರೋಪಿಗೆ ಸುರಿಯಲ್ಪಟ್ಟ ಚಿನ್ನ ಬೆಳ್ಳಿಗಳ ಪ್ರಮಾಣದಿಂದಾದ ಹಣದುಬ್ಬರದ ಫಲವಾಗಿ ಆಹಾರದ ಬೆಲೆ ಆರು ಪಟ್ಟು ಏರಿತು.

ಈ ಎಲ್ಲವುಗಳ ಫಲವಾಗಿ ನಗರ ಪಟ್ಟಣಗಳಿಗೆ ವಲಸೆ ಬಂದು ಉದ್ಯೋಗಕ್ಕಾಗಿ ಅಲೆಯುತ್ತಿದ್ದ ಕೋಟ್ಯಾಂತರ ಜನರ ಹಸಿವಿನ ಸಂಕಟ ಮುಗಿಲಿಗೇರಿತು. ಇವುಗಳ ಫಲವಾಗಿ ಆಹಾರದ ದೊಂಬಿಗಳು ಆರಂಭವಾದವು. ಆ ಕಡೆ ಭೂ ಲೂಟಿಯ ವಿರುದ್ಧ ನೂರಾರು ಪ್ರತಿಭಟನೆಗಳು. ಈ ಕಡೆ 1620ರ ಸಮಯದಲ್ಲಿ ಹಲವಾರು ಜಿಲ್ಲೆಗಳಲ್ಲಿ ಆಹಾರದ ದೊಂಬಿಗಳು ನಡೆದವು. 1660 ರವರೆಗೂ 40ರಷ್ಟು ದೊಡ್ಡ ದೊಂಬಿಗಳಾದವು.

ಆಹಾರದ ದೊಂಬಿಗಳೆಂದರೆ ಬ್ರಿಟನ್‌ನ ಮುಖ್ಯ ಆಹಾರವಾದ ಬ್ರೆಡ್‌ನ ಬೆಲೆ, ಗೋಧಿಯ ಬೆಲೆ ವಿಪರೀತ ಏರುತ್ತಿತ್ತು. ಜನರು ಇಂತಹ ಅಂಗಡಿಗಳಲ್ಲಿ ಅದನ್ನು ಕಡಿಮೆ ಬೆಲೆಗೆ ಮಾರಬೇಕೆಂದು ಒತ್ತಾಯಿಸುತ್ತಿದ್ದರು. ಹಾಗೆ ಕಡಿಮೆ ಬೆಲೆಗೆ ಮಾರಲೊಪ್ಪದಿದ್ದರೆ ಅದರ ದಾಸ್ತಾನು ವಶಪಡಿಸಿಕೊಂಡು ಜನರೇ ಹಂಚಿಬಿಡುತ್ತಿದ್ದರು. ಗೋಡೌನುಗಳ ಲೂಟಿ ಮಾಡುತ್ತಿದ್ದರು. ಆಹಾರದ ವಸ್ತುಗಳನ್ನು ರಫ್ತು ಮಾಡುತ್ತಿದ್ದ ಬಂದರುಗಳಿಗೆ ಹೋಗಿ ತಡೆಯುತ್ತಿದ್ದರು. ಆಹಾರದ ಧಾನ್ಯಗಳನ್ನು ಹಂಚುತ್ತಿದ್ದರು. ಆಹಾರ ಧಾನ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುವ ಕೃಷಿ ಫಾರಂಗಳಿಗೆ ಹೋಗಿ ಆಹಾರ ಧಾನ್ಯ ವಶಪಡಿಸಿಕೊಳ್ಳುತ್ತಿದ್ದರು.

## ಹಸಿವಿನ, ಆಹಾರದ ದಂಗೆಗಳು

ಮುಂದಿನ ಶತಮಾನಗಳಲ್ಲಿ ಬರಗಾಲ ಮತ್ತು ಇತರ ಕಾರಣಗಳಿಗಾಗಿ ಆಹಾರದ ಉತ್ಪಾದನೆ ಸ್ವಲ್ಪ ಕೊರತೆಯಾದರೂ, ಆಮದು ರಫ್ತು ವ್ಯತ್ಯಾಸಗಳಿಂದಲೂ ಆಹಾರದ ಕೊರತೆಯ ಪರಿಣಾಮ ತೀವ್ರವಾಗಿ, ಹಸಿವಿನ ಸಂಭಾವ್ಯತೆ ಬಹಳ ಹೆಚ್ಚಾಗುತ್ತಿತ್ತು. ಉದಾಹರಣೆಗೆ 1766ರಲ್ಲಿ ಆಹಾರದ ದೊಂಬಿಗಳು ಆರಂಭವಾಗಲು ಮುಖ್ಯ ಕಾರಣವೇ ದೇಶದಲ್ಲಿ ಉಂಟಾಗಿದ್ದ ತೀವ್ರ ಕೊರತೆಯನ್ನು ಲೆಕ್ಕಿಸದೇ ವಿದೇಶಗಳಿಗೆ ಗೋಧಿಯ ಬೆಲೆಯ ಹೆಚ್ಚಳದ ಅಪಾರ ಲಾಭ ಗಳಿಸಲು ಬಂಡವಾಳಶಾಹಿ ಮುಂದಾಗಿದ್ದು.

ಅದರಿಂದಾಗಿ 1740ರಲ್ಲಿ, 1755–56ರಲ್ಲಿ 1766ರಲ್ಲಿ ಆಹಾರದ ದೊಂಬಿಗಳಾದವು. 1770ರಿಂದ 74 ರವರೆಗೂ ಕೂಡಾ ಒಂದಷ್ಟು ಪ್ರಮಾಣದಲ್ಲಿ ಆಹಾರದ ದೊಂಬಿಗಳಾಗುತ್ತಿದ್ದವು.

ಬ್ರಿಟಿಷರು ಭಾರತವನ್ನು ವಶಪಡಿಸಿಕೊಂಡ ಮೇಲೆ ಇಲ್ಲಿಯೂ, ಮಳೆ ಸ್ವಲ್ಪ ಹೆಚ್ಚು ಕಡಿಮೆಯಾದರೂ ಹಲವಾರು ಲಕ್ಷ ಸಾವುಗಳು ಉಂಟಾಗುತ್ತಿದ್ದವು. ಎರಡನೆಯ ಮಹಾಯುದ್ಧ ಕಾಲದಲ್ಲಿ ಬಂಗಾಲದಲ್ಲಿ ಐದು ಲಕ್ಷ ಜನರು ಸತ್ತರು ಎಂಬುದು ಆಹಾರದ ರಫ್ತಿನಿಂದ ಉಂಟಾದದ್ದು ಎಂಬ ಬಗ್ಗೆ ಅಮರ್ತ್ಯ ಸೇನ್ ವಿಷದವಾಗಿ ಬರೆದಿದ್ದಾರೆ.

ಬ್ರಿಟಿಷರು ಬರುವ ಮೊದಲೂ ಭಾರತದಲ್ಲಿ ಕ್ಷಾಮಗಳು, ಸಾವುಗಳು ಸಂಭವಿಸುತ್ತಿದ್ದವು, ಆದರೆ ಭೂಮಿಯಿಂದ ರೈತರು ಕೂಲಿಕಾರರನ್ನು ಒಕ್ಕಲೆಬ್ಬಿಸುವ ಕಾರಣ, ಹತ್ತಿ ಮೊದಲಾದ ರಫ್ತಿಗಾಗಿ ಕೃಷಿ, ಜನರ ಅಗತ್ಯಗಳನ್ನು ನಿರ್ಲಕ್ಷಿಸಿ ಆಹಾರದ ಧಾನ್ಯಗಳ ರಫ್ತು ಇತ್ಯಾದಿ ಲಾಭಕೋರ ಬಂಡವಾಳಶಾಹಿ ಧೋರಣೆ ಮತ್ತು ಕ್ರಮಗಳು ಇಂತಹ ಪರಿಸ್ಥಿತಿಗೆ ಕಾರಣವಾಗಿದ್ದವು.

ಸಂಪಾದಕೀಯ

# ರಾಜ್ಯಪಾಲರ ವರ್ತನೆ: ನ್ಯಾಯಾಲಯದ ಕಪಾಳ ಮೋಕ್ಷ
## ಕರ್ನಾಟಕದ ರಾಜ್ಯಪಾಲರು ಪಾಠ ಕಲಿಯುವರೇ?

ತಮಿಳುನಾಡಿನ ವಿಧಾನ ಸಭೆ ಅಂಗೀಕರಿಸಿ ಅನುಮೋದನೆಗೆ ಕಳಿಸಲ್ಪಟ್ಟ 10 ಮಸೂದೆಗಳನ್ನು ತಮ್ಮ ಬಳಿಯೇ ಇರಿಸಿಕೊಂಡು ಸರ್ಕಾರಕ್ಕೆ ಮೇಲೆ ಸಮರ ಸಾರಿದ್ದ ರಾಜ್ಯಪಾಲರ ವರ್ತನೆಯನ್ನು ಸರ್ವೋಚ್ಛ ನ್ಯಾಯಾಲಯ ತೀವ್ರವಾಗಿ ಟೀಕಿಸಿ ನೀಡಿರುವ ತೀರ್ಪು ಅತ್ಯಂತ ಮಹತ್ವದ್ದಾಗಿದೆ. ರಾಜ್ಯಪಾಲರ ಅಧಿಕಾರ ವ್ಯಾಪ್ತಿಯನ್ನು, ಅವರ ಸ್ಥಾನ ಮತ್ತು ಪಾತ್ರವನ್ನು ನಿರ್ದಿಷ್ಟವಾಗಿ, ನಿಷ್ಠುರವಾಗಿ ಗುರುತಿಸಿರುವ ಸರ್ವೋಚ್ಛ ನ್ಯಾಯಾಲಯವು ತಮಿಳು ನಾಡಿನ ರಾಜ್ಯಪಾಲ ಆರ್.ಎನ್.ರವಿಯವರಿಗೆ ಚಾಟಿ ಬೀಸಿದೆ. ವಿಧಾನಸಭೆ ಅಂಗೀಕರಿಸಿದ, ಮರು ಅಂಗೀಕರಿಸಿದ ಬಳಿಕ ಯಾವುದೇ ಮಸೂದೆಯನ್ನು ಏನೇ ಕಾರಣ ಹೇಳಿ ತಮ್ಮ ಬಳಿಯೇ ಇರಿಸಿಕೊಳ್ಳುವಂತಿಲ್ಲ, ಜನತೆಯ ತೀರ್ಪಿಗೆ ಗೌರವ ನೀಡಬೇಕು, ಆಕ್ಷೇಪ ಅಥವಾ ಸ್ಪಷ್ಟನೆ ಕೇಳುವುದಿದ್ದರೆ ಒಂದು ತಿಂಗಳ ಕಾಲಮಿತಿಯೊಳಗೆ ವಾಪಾಸು ಕಳಿಸಬಹುದು, ಮರು ಮಂಡನೆಯಾಗಿ ಅಂಕಿತಕ್ಕೆ ಮಂಡಿಸಲ್ಪಟ್ಟರೆ ಅಂಗೀಕರಿಸಲೇಬೇಕು ಎಂದಿರುವ ಸುಪ್ರಿಂ ಕೋರ್ಟ್ ತಮಿಳುನಾಡಿನ ರಾಜ್ಯಪಾಲರ ಕ್ರಮ ಸಂವಿಧಾನ ವಿರೋಧಿ, ಕಾನೂನು ಬಾಹಿರ ಮತ್ತು ಲೋಪಗಳಿಂದ ಕೂಡಿದೆ ಎಂದು ಟೀಕಿಸಿದೆ. ಸಂವಿಧಾನದ 200 ನೆಯ ವಿಧಿಯಂತೆ ರಾಜ್ಯಪಾಲರಿಗೆ ಯಾವುದೇ ವಿವೇಚನಾಧಿಕಾರವಾಗಲೀ, ವಿಟೋ ಚಲಾವಣೆಯ ಅಧಿಕಾರವಾಗಲೀ ಇಲ್ಲ ಎಂದೂ ಸ್ಪಷ್ಟ ಪಡಿಸಿರುವ ಜಸ್ಟೀಸ್ ಜೆ.ಬಿ.ಪರ್ದಿವಾಲಾ, ಜಸ್ಟೀಸ್ ಆರ್.ಮಹಾದೇವನ್ ರವರ ಪೀಠ ರಾಜ್ಯಪಾಲ ಆರ್.ಎನ್. ರವಿಯವರ ನಿರ್ಧಾರವನ್ನು ಬದಿಗೆ ತಳ್ಳಿದೆ. ಮುಂದೆ ಮಂಡಿಸಲಾಗುವ ಮಸೂದೆಗಳನ್ನು ಒಂದು ತಿಂಗಳ ಒಳಗಡೆಯಲ್ಲಿ ಅಂಗೀಕರಿಸಿ ಕಳುಹಿಸದಿದ್ದಲ್ಲಿ ಆ ಬಗ್ಗೆ ನ್ಯಾಯಾಲಯದ ಪರಿಶೀಲನೆಗೆ ಒಳಪಡಿಸಬೇಕಾಗುತ್ತದೆ ಎಂದು ಎಚ್ಚರಿಸಿದೆ.

2021 ರಲ್ಲಿ ಆರ್.ಎನ್ ರವಿಯವರನ್ನು ತಮಿಳುನಾಡಿನ ರಾಜ್ಯಪಾಲರನ್ನಾಗಿ ಭಾರತ ಒಕ್ಕೂಟ ಸರ್ಕಾರ ನೇಮಕ ಮಾಡಿತ್ತು. ಅಲ್ಲಿಂದಲೂ ಬಿಜೆಪಿಯೇತರ ಸರ್ಕಾರವಾಗಿರುವ ಡಿ.ಎಂ.ಕೆ ಪಕ್ಷದ ಸರ್ಕಾರದ ವಿರುದ್ಧ ನಿರಂತರ ಕಿರುಕುಳ, ಹದ ತಪ್ಪಿದ ಬಹಿರಂಗ ಟೀಕೆಗಳ ಧಾಳಿಯನ್ನು, ಪ್ರತಿ ಹೆಜ್ಜೆಯಲ್ಲೂ ಅಸಹಕಾರವನ್ನು ತೋರುವ ಮೂಲಕ ವಿರೋಧ ಪಕ್ಷದ ಆಡಳಿತಕ್ಕೆ ಅಡ್ಡಿ ಉಂಟು ಮಾಡಲಾಗುತ್ತಿತ್ತು. ಮತ್ತು ಚುನಾಯಿತ ಸರ್ಕಾರ ಮತ್ತು ಕೇಂದ್ರದಿಂದ ನೇಮಕಗೊಂಡ ರಾಜ್ಯಪಾಲರ ನಡುವೆ ಭಾರೀ ಬಹಿರಂಗ ಸಮರವೇ ನಡೆದಿತ್ತು. ಮುಖ್ಯಮಂತ್ರಿ ಸ್ಟಾಲಿನ್ ನೇತೃತ್ವದ ಸಚಿವ ಸಂಪುಟದ ಸಚಿವರೊಬ್ಬರನ್ನು ರಾಜ್ಯಪಾಲ ಆರ್.ಎನ್.ರವಿಯವರು ವಜಾಗೊಳಿಸಿದ್ದರು. ವಿಧಾನಸಭೆಯ ಅಧಿವೇಶನ ಉದ್ದೇಶಿಸಿ ಮಾತನಾಡಬೇಕಿದ್ದ ಭಾಷಣವನ್ನು ಪರಿಪಾಠವನ್ನು ಮೀರಿ ತಿದ್ದುಪಡಿ ಮಾಡಿದ್ದರು. ವಿಧಾನ ಸಭೆ, ಪರಿಷತ್ ಅಂಗೀಕರಿಸಿದ ಹತ್ತು ಮಸೂದೆಗಳನ್ನು ಅಂಕಿತ ಹಾಕದೇ ತಮ್ಮ ಬಳಿಯೇ ಇರಿಸಿಕೊಂಡಿದ್ದರು. ಹೀಗಾಗಿ, 2023 ರಲ್ಲಿ ತಮಿಳುನಾಡ ಸರ್ಕಾರ ಸರ್ವೋಚ್ಛ ನ್ಯಾಯಾಲಯದ ಮೊರೆ ಹೋಗುವುದು ಅನಿವಾರ್ಯವಾಗಿತ್ತು.

ರಾಜ್ಯಪಾಲ ರವಿಯವರ ವರ್ತನೆ, ಕ್ರಮಗಳ ಹಿಂದೆ ಭಾರತದ ಒಕ್ಕೂಟ ಸರ್ಕಾರದ, ಮೋದಿ ಶಾ ರವರ ಪಾತ್ರ ಈ ಎಲ್ಲಾ ಪ್ರತಿಕ್ರಿಯೆಗಳ ಹಿಂದಿರುವುದನ್ನು ತಳ್ಳಿ ಹಾಕುವಂತಿಲ್ಲ. ಕೇಂದ್ರ ಸರ್ಕಾರ ರಾಜ್ಯಪಾಲರ ಮೂಲಕ ತನ್ನ ಅಜೆಂಡಗಳನ್ನ ಜಾರಿಗೊಳಿಸಲು ಯತ್ನಿಸುತ್ತಿರುವುದು ಕಾಣದ್ದೇನಲ್ಲ. ರಾಜ್ಯಪಾಲ ರವಿಯವರು ಆಯಾ ಸಂದರ್ಭದಲ್ಲಿರಾಜ್ಯ ಸರ್ಕಾರಕ್ಕೆ ಇಂತಹ ಅಡ್ಡಿ ಉಂಟು ಮಾಡುವ ಮತ್ತು ಅವಮಾನಿಸುವ ಕ್ರಮಗಳನ್ನು ಕೈಗೊಂಡ ಕೂಡಲೇ ಕೇಂದ್ರ ಸರ್ಕಾರ ಅದನ್ನು ನಿಯಮಾನುಸಾರ ಸರಿಪಡಿಸಬೇಕಾಗಿತ್ತು. ಆದರೆ ಬಿಜೆಪಿಯೇತರ ಸರ್ಕಾರಕ್ಕೆ ನಿರಂತರ ಕಿರುಕುಳ ಮುಜುಗರ ಮತ್ತು ಅಡ್ಡಿ ಉಂಟು ಮಾಡುವ ಧೋರಣೆಯನ್ನೇ ಭಾರತ ಒಕ್ಕೂಟ ಸರ್ಕಾರ ಅನುಸರಿಸಿತು. ಇದರಿಂದಾಗಿ ತಪ್ಪೆಸಗುತ್ತಿದ್ದ ರಾಜ್ಯಪಾಲರಿಗೆ ಮತ್ತಷ್ಟು ಕುಮ್ಮಕ್ಕು ನೀಡಿದಂತೆ ಆಯಿತು.

ಈ ಪ್ರವೃತ್ತಿ ಕೇವಲ ತಮಿಳುನಾಡಿಗೆ ಮಾತ್ರವಲ್ಲ, ಬಿಜೆಪಿಯೇತರ ವಿರೋಧ ಪಕ್ಷಗಳ ಆಡಳಿತವಿರುವ ಎಲ್ಲ ರಾಜ್ಯ ಸರ್ಕಾರಗಳ ವಿರುದ್ಧವು ಇಂತಹದೇ ಸಂವಿಧಾನ ಬಾಹಿರವಾದ ಸೇಡಿನ ದಾಳಿಗಳನ್ನು ನಡೆಸಲಾಗುತ್ತಿದೆ. ಕೆಲವೇ ದಿನಗಳ ಹಿಂದೆ ದೆಹಲಿಯ ಆಮ್ ಆದ್ಮಿ ಪಕ್ಷದ ಕೇಜ್ರಿವಾಲ್ ಸರ್ಕಾರಕ್ಕೆ ಲೆ.ವಿನಯ್ ಸಕ್ಸೇನಾ, ಪ.ಬಂಗಾಳ ದಲ್ಲಿ ಜಗದೀಪ್ ಧನಕರ್, ಪಿಣರಾಯಿ ಯವರ ನೇತೃತ್ವದ ಕೇರಳದ ಎಲ್.ಡಿ.ಎಫ್. ಸರ್ಕಾರಕ್ಕೆ ರಾಜ್ಯಪಾಲ ಅರೀಫ್ ಮಹಮದ್ ಖಾನ್, ಕರ್ನಾಟಕದಲ್ಲಿ ಥಾವರ್ ಚಂದ್ ಗೆಹ್ಲೋಟ್ ಹೀಗೆ ಉದಾಹರಿಸಬಹುದು. ಈಗಲೂ ಕರ್ನಾಟಕದ ರಾಜ್ಯಪಾಲರು ಕಾಂಗ್ರೆಸ್ ಸರ್ಕಾರದ ಜೊತೆಯಲ್ಲಿ ಬೀದಿ ರಂಪಾಟಕ್ಕೆ ಇಳಿದಿಲ್ಲವಾದರೂ, ನೇರ ಮುಖಾಮುಖಿಯಾಗಿಲ್ಲ ಎಂಬಂತೆ ಕಂಡು ಬಂದರೂ ರಾಜ್ಯ ಸರ್ಕಾರದ ಪ್ರಮುಖ ಹಲವಾರು ಪ್ರಸ್ತಾವಗಳಿಗೆ ತೀವ್ರವಾದ ಅಡ್ಡಿಯನ್ನು ಉಂಟು ಮಾಡಿದ್ದಾರೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿ ನೇಮಕಾತಿಯ ಅಧಿಕಾರವನ್ನು ರಾಜ್ಯ ಸರ್ಕಾರದ ಮುಖ್ಯಮಂತ್ರಿಗೆ ವರ್ಗಾಯಿಸುವ ವಿಷಯದಲ್ಲಿ ಸ್ಪಷ್ಟೀಕರಣದ ನಂತರವೂ ರಾಜ್ಯಪಾಲರು ಅದಕ್ಕೆ ಅಂಗೀಕಾರವನ್ನು ಕೊಡುತ್ತಿಲ್ಲ. ಹಾಗೆಯೇ ಕರ್ನಾಟಕ ಸಹಕಾರಿ ಸೊಸೈಟಿಗಳ ವಿಧೇಯಕ 2024, ಗದಗ್-ಬೆಟಗೇರಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ 2023, ಕರ್ನಾಟಕ ಧರ್ಮದಾಯಕ ಸಂಸ್ಥೆಗಳ ತಿದ್ದುಪಡಿ ವಿಧೇಯಕ 2024, ಗ್ರೇಟರ್ ಬೆಂಗಳೂರು ಆಡಳಿತ ವಿಧೇಯಕ, ಇವುಗಳಿಗೆ ಅಂಗೀಕಾರ ಕೊಡುವಲ್ಲಿ ರಾಜ್ಯಪಾಲರು ಬೇಕೆಂದೇ ವಿಳಂಬವನ್ನು ಮಾಡುತ್ತಿದ್ದಾರೆ. ಹಾಗೆಯೇ ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ ಅಂಗೀಕರಿಸಿದ ಮಸೂದೆಗಳನ್ನು ಪರಿಗಣಿಸಿ ಅಂಕಿತ ಹಾಕದೆ ಎರಡು ವರ್ಷಗಳಿಂದಲೂ ಹಾಗೆ ತಮ್ಮ ಬಳಿ ಇರಿಸಿಕೊಂಡಿರುವ ಬಗ್ಗೆ ಸುಪ್ರೀಂ ಕೋರ್ಟ್ ಮೆಟ್ಟಲನ್ನು ಏರಲಾಗಿದೆ. ಸುಪ್ರೀಂಕೋರ್ಟಿನ ತೀರ್ಪು ಪ್ರಕಟಗೊಂಡಿರುವ ಈ ಸಂದರ್ಭದಲ್ಲಿಯೇ ಅರ್ಜಿಯನ್ನು ಕೂಡಲೇ ಇತ್ಯರ್ಥ ಪಡಿಸಬೇಕೆಂದು ಕೇರಳ ಸರ್ಕಾರ ಸುಪ್ರೀಂಕೋರ್ಟಿಗೆ ಮನವಿ ಮಾಡಿರುವುದು ನ್ಯಾಯಯುತವಾಗಿದೆ. ತಮಿಳುನಾಡು ಸರ್ಕಾರ ಮಾಡಿದ ಮನವಿಯನ್ನು ಪುರಸ್ಕರಿಸಿ ಕೊಟ್ಟಿರುವ ತೀರ್ಪನ್ನು ಅನುಲಕ್ಷಿಸಿ ನ್ಯಾಯಾಲಯದ ಎದುರಿಗಿರುವ ಎಲ್ಲಾ ಪ್ರಕರಣಗಳನ್ನು ಇತ್ಯರ್ಥ ಪಡಿಸುವುದು ಅತ್ಯಗತ್ಯ.

ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಕೇವಲ ತಮಿಳುನಾಡಿನ ರಾಜ್ಯಪಾಲರಾದ ಆರ್.ಎನ್. ರವಿಯವರ ವರ್ತನೆ ಕುರಿತಾಗಿ ಮಾತ್ರವೇ ನೀಡಲಾಗಿದೆ ಎನ್ನುವುದು ಪೂರ್ಣ

ಪುಟ 6 ಕ್ಕೆ

# ಗಾಜಾದಲ್ಲಿ ನರಮೇಧ ತಕ್ಷಣ ನಿಲ್ಲಬೇಕು,
## ಇಸ್ರೇಲನ್ನು ಜನಾಂಗ ದ್ವೇಷ ನೀತಿಯ ರಾಷ್ಟ್ರವೆಂದು ಘೋಷಿಸಿ ಕ್ರಮ ಕೈಗೊಳ್ಳಬೇಕು

**ಗಾಜಾದ ಮೇಲೆ ಇಸ್ರೇಲ್ ನರಮೇಧದ ದಾಳ ನಡೆಸುತ್ತಿದೆ ಎಂದು ಮಹಾಧಿವೇಶನ ಖಂಡಿಸಿದೆ. ಈ ಕುರಿತು ಅದು ಒಂದು ನಿರ್ಣಯವನ್ನು ಅಂಗೀಕರಿಸಿದೆ. ಅದರಲ್ಲಿ ತಕ್ಷಣದ ಮತ್ತು ಶಾಶ್ವತ ಕದನ ವಿರಾಮಕ್ಕೆ ಅದು ಒತ್ತಾಯ ಮಾಡಿದೆ.**

ಅಕ್ಟೋಬರ್ 7, 2023ರಂದು ಹಮಾಸ್ ದಾಳಿಯ ನಂತರ ಇಸ್ರೇಲ್ ಪ್ಯಾಲೆಸ್ತೈನ್‌ನ ಗಾಜಾದ ಮೇಲೆ ನರಮೇಧದ ಯುದ್ಧವನ್ನು ಪ್ರಾರಂಭಿಸಿತು. ಈ ಬರ್ಬರ ದಾಳಿಯಲ್ಲಿ 50,021 ಕ್ಕೂ ಹೆಚ್ಚು ಪ್ಯಾಲೆಸ್ತೀನಿಯನ್ನರು ಸಾವನ್ನಪ್ಪಿದ್ದಾರೆ ಮತ್ತು ಸಾವಿರಾರು ಜನರು ಗಾಯಗೊಂಡಿದ್ದಾರೆ.

ಮೊದಲ ಹಂತದ ಕದನ ವಿರಾಮ ಮುಗಿದ ತಕ್ಷಣ ಇಸ್ರೇಲ್ ಗಾಜಾದ ಮೇಲೆ ತನ್ನ ದಾಳಿಯನ್ನು ಪುನರಾರಂಭಿಸಿದೆ. ಅಂದಿನಿಂದ ಅದು ಗಾಜಾಗೆ ಆಹಾರ, ನೀರು, ಇಂಧನ, ನೆರವು ಮತ್ತು ಇತರ ಎಲ್ಲಾ ಅಗತ್ಯ ವಸ್ತುಗಳ ಸರಬರಾಜನ್ನು ಕಡಿತಗೊಳಿಸಿದೆ. ಇಸ್ರೇಲ್ ಗಾಜಾವನ್ನು ಕತ್ತು ಹಿಸುಕಿ ಹಸಿವಿನತ್ತ ತಳ್ಳಲು ಉದ್ದೇಶಿಸಿದೆ. ಅದು ಆಸ್ಪತ್ರೆಗಳು, ನೆರವು ದಳಗಳು, ವಿಶ್ವಸಂಸ್ಥೆಯ ನಿರಾಶ್ರಿತರ ತಾಣಗಳು, ಶಾಲೆಗಳು, ಮಸೀದಿಗಳು ಮತ್ತು ಚರ್ಚ್‌ಗಳ ಮೇಲೆ ದಾಳಿಗಳನ್ನು ನಡೆಸಿತು, ಗಾಜಾದಲ್ಲಿ ಯಾವುದೇ ಸುರಕ್ಷಿತ ಸ್ಥಳವನ್ನು ಬಿಡಲಿಲ್ಲ. ಇಸ್ರೇಲ್ ದಾಳಿಯಲ್ಲಿ ಸಾವನ್ನಪ್ಪಿದವರಲ್ಲಿ ಶೇಕಡ 60ರಷ್ಟು ಮಂದಿ ಮಹಿಳೆಯರು ಮತ್ತು ಮಕ್ಕಳು. ಪತ್ರಕರ್ತರು ಮತ್ತು ವಿಶ್ವಸಂಸ್ಥೆಯ ನೆರವು ಕಾರ್ಯಕರ್ತರನ್ನು ಸಹ ಗುರಿಯಾಗಿಸಿಕೊಂಡು ಕೊಲ್ಲಲಾಯಿತು. ಬೆಳೆಗಳನ್ನು ನಾಶಪಡಿಸಲಾಯಿತು. ಈ ಎಲ್ಲಾ ದಾಳಿಗಳು ಇಸ್ರೇಲ್ ಪ್ರಭುತ್ವದ ನರಮೇಧದ ಸ್ವರೂಪವನ್ನು ಪ್ರದರ್ಶಿಸುತ್ತವೆ. ಇದನ್ನು ಗಮನದಲ್ಲಿಟ್ಟುಕೊಂಡು ಅಂತರರಾಷ್ಟ್ರೀಯ ನ್ಯಾಯಾಲಯ (ಐಸಿಜೆ) ಪ್ರಧಾನ ಮಂತ್ರಿ ಬೆಂಜಮಿನ್ ನೆತನ್ಯಾಹು ಮತ್ತು ಇತರ ಇಸ್ರೇಲಿ ನಾಯಕರ ಮೇಲೆ ಬಂಧನ ವಾರಂಟ್‌ಗಳನ್ನು ಹೊರಡಿಸಿತು.

ಜಿಯೋನಿಸ್ಟ್ ವಸಾಹತುಗಾರರನ್ನು ಪಶ್ಚಿಮ ದಂಡೆಯಲ್ಲಿರುವ ಪ್ಯಾಲೆಸ್ತೀನಿಯನ್ ಭೂಮಿಯನ್ನು ಆಕ್ರಮಿಸಿಕೊಳ್ಳಲು ಮತ್ತು ಯಹೂದಿ ವಸಾಹತುಗಳನ್ನು ಸ್ಥಾಪಿಸಲು ಇಸ್ರೇಲ್ ಸಕ್ರಿಯವಾಗಿ ಪ್ರೋತ್ಸಾಹಿಸುತ್ತಿದೆ. ಈ ರೀತಿಯಾಗಿ, ಅದು ಪಶ್ಚಿಮ ದಂಡೆಯಲ್ಲಿರುವ ಪ್ಯಾಲೆಸ್ತೀನಿಯನ್ ಪ್ರದೇಶವನ್ನು ನಿಧಾನವಾಗಿ ಸ್ವಾಧೀನಪಡಿಸಿಕೊಳ್ಳುತ್ತಿದೆ. ಈ ಎಲ್ಲಾ ಕೃತ್ಯಗಳು ಪ್ಯಾಲೆಸ್ತೀನಿಯನ್ನರನ್ನು ಅವರ ತಾಯ್ನಾಡಿನಿಂದ ಓಡಿಸಲು ಮತ್ತು ಪ್ಯಾಲೆಸ್ತೀನ್ ಅನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿವೆ, ಇದು ಗ್ರೇಟರ್ ಇಸ್ರೇಲ್ ಅನ್ನು ಸ್ಥಾಪಿಸುವ ಅದರ ಕಾರ್ಯಸೂಚಿಯನ್ನು ಈಡೇರಿಸಿಕೊಳ್ಳುವುದರ ಭಾಗವಾಗಿದೆ.

ಅಮೆರಿಕ ಮತ್ತು ಪಶ್ಚಿಮ ಯುರೋಪಿನ ಇತರ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಪ್ಯಾಲೆಸ್ತೈನ್ ಮೇಲಿನ ದಾಳಿಯಲ್ಲಿ ಇಸ್ರೇಲ್ ಅನ್ನು ಶಸ್ತ್ರಸಜ್ಜಿತಗೊಳಿಸುವ ಮತ್ತು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಬೆಂಬಲಿಸುವ ಮೂಲಕ ಸಕ್ರಿಯವಾಗಿ ಬೆಂಬಲಿಸುತ್ತಿವೆ. ಅಲ್ಲಿ ವಾಸಿಸುವ ಎಲ್ಲಾ ಪ್ಯಾಲೆಸ್ತೀನಿಯನ್ನರನ್ನು ಹೊರಹಾಕಿ, ಗಾಜಾವನ್ನು ಪ್ರವಾಸಿ ಸ್ವರ್ಗವನ್ನಾಗಿ ಪರಿವರ್ತಿಸುವ ಟ್ರಂಪ್ ಘೋಷಣೆಯು ಒಂದು ಖಂಡನೀಯ ಯೋಜನೆ ಎಂದಿರುವ ಮಹಾಧಿವೇಶನ ಟ್ರಂಪ್ ಘೋಷಣೆ ಇಸ್ರೇಲ್‌ನ ಹಿತಾಸಕ್ತಿಗಳಿಗೆ ಸರಿಹೊಂದುತ್ತದೆ ಎಂದು ಹೇಳಿದೆ.

ಬಿಜೆಪಿ ಕೇಂದ್ರ ಸರ್ಕಾರವು ಪ್ಯಾಲೆಸ್ತೈನ್ ಕುರಿತಂತೆ ಭಾರತವು ದೀರ್ಘಕಾಲದಿಂದ ತಳೆದಿದ್ದ ಅಧಿಕೃತ ನಿಲುವನ್ನು ದುರ್ಬಲಗೊಳಿಸಿದೆ. ಪ್ಯಾಲೆಸ್ತೈನ್ ಜನರೊಂದಿಗೆ ದೃಢವಾಗಿ ನಿಂತು ಇಸ್ರೇಲ್ ಮೇಲೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುವ ಬದಲು, ಬಿಜೆಪಿ ಸರ್ಕಾರ ಈಗ ಇಸ್ರೇಲ್ ಪರವಾಗಿ ನಿಂತಿದೆ. ಇದರ ಪರಿಣಾಮವಾಗಿ, ಭಾರತ ಮೊದಲ ಬಾರಿಗೆ ಯುದ್ಧ ವಿರಾಮವನ್ನು ಕೋರುವ ಮತ್ತು ಇಸ್ರೇಲ್ ಅನ್ನು ಖಂಡಿಸುವ ವಿಶ್ವಸಂಸ್ಥೆಯ ನಿರ್ಣಯಗಳ ವಿರುದ್ಧ ಮತ ಚಲಾಯಿಸಿತು ಅಥವಾ ಗೈರುಹಾಜರಾಯಿತು. ಇಂತಹ ನಿಲುವುಗಳು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಭಾರತದ ವಿಶ್ವಾಸಾರ್ಹತೆಯನ್ನು ಕುಗ್ಗಿಸಿವೆ ಮತ್ತು ಈಗ ಭಾರತವನ್ನು ಇಸ್ರೇಲ್ ಮತ್ತು ಅಮೆರಿಕದ ಮಿತ್ರನೆಂದು ನೋಡಲಾಗುತ್ತಿದೆ.

ತನ್ನ ನಿಲುವುಗಳನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ಬಿಜೆಪಿ, ಸಂಘ ಪರಿವಾರದ ಜೊತೆಗೆ ಗಾಜಾದ ಮೇಲಿನ ಇಸ್ರೇಲ್ ದಾಳಿಯನ್ನು ಧಾರ್ಮಿಕ ಯುದ್ಧವೆಂದು ಬಿಂಬಿಸುತ್ತಿದೆ. ರಾಷ್ಟ್ರೀಯತೆಯನ್ನು ಧರ್ಮದೊಂದಿಗೆ ಗುರುತಿಸುವಲ್ಲಿ ಮತ್ತು ಮುಸ್ಲಿಮರ ಮೇಲಿನ ದ್ವೇಷದಲ್ಲಿ ಆರ್‌ಎಸ್‌ಎಸ್ ಮತ್ತು ಝಿಯೋನಿಸ್ಟರ ನಡುವೆ ನಿಕಟ ಸೈದ್ಧಾಂತಿಕ ಬಾಂಧವ್ಯವಿದೆ. ಬಿಜೆಪಿ ಸರ್ಕಾರವು ಇಸ್ರೇಲ್‌ಗೆ ಬೆಂಬಲ ನೀಡುವುದರ ಹಿಂದೆ ಇರುವುದು ಈ ಸೈದ್ಧಾಂತಿಕ ಬಾಂಧವ್ಯವೇ.

ಗಾಜಾದಲ್ಲಿ ತಕ್ಷಣದ ಕದನ ವಿರಾಮ ಉಂಟಾಗಬೇಕು ಎಂದು ಮಹಾಧಿವೇಶನ ಆಗ್ರಹಿಸಿದೆ. ಇಸ್ರೇಲ್ ಅನ್ನು ಜನಾಂಗ ದ್ವೇಷ ನೀತಿಯ ರಾಷ್ಟ್ರವೆಂದು ಘೋಷಿಸಬೇಕು ಮತ್ತು ಅದಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸಬೇಕು. ಬಿಜೆಪಿ ಸರ್ಕಾರವು ಇಸ್ರೇಲ್‌ಗೆ ಬೆಂಬಲ ನೀಡುವುದನ್ನು ನಿಲ್ಲಿಸಿ ಪ್ಯಾಲೆಸ್ತೈನ್ ಅನ್ನು ಬೆಂಬಲಿಸುವ ಬಹುವರ್ಷಗಳಿಂದ ಸ್ಥಾಪಿತಗೊಂಡಿರುವ ಭಾರತದ ನೀತಿಗೆ ಮರಳಬೇಕೆಂದು ಅದು ಒತ್ತಾಯಿಸಿದೆ. ಪೂರ್ವ ಜೆರುಸಲೆಮ್ ಅನ್ನು ರಾಜಧಾನಿಯಾಗಿ ಮತ್ತು 1967ರ ಹಿಂದಿನ ಗಡಿಗಳನ್ನು ಹೊಂದಿರುವ ಪ್ಯಾಲೆಸ್ತೈನ್ ಪ್ರಭುತ್ವವನ್ನು ಸ್ಥಾಪಿಸುವುದರಿಂದ ಮಾತ್ರ ಈ ಪ್ರದೇಶದಲ್ಲಿ ಶಾಶ್ವತ ಶಾಂತಿ ಸಾಧ್ಯ ಎಂದು ಮಹಾಧಿವೇಶನ ಅಭಿಪ್ರಾಯ ಪಟ್ಟಿದೆ.

ಪ್ಯಾಲೆಸ್ತೈನ್ ಜನರೊಂದಿಗೆ ತನ್ನ ಸೌಹಾರ್ದವನ್ನು ವ್ಯಕ್ತಪಡಿಸುತ್ತ ಮಹಾಧಿವೇಶನ ತಮ್ಮ ತಾಯ್ನಾಡಿಗಾಗಿ ಪ್ಯಾಲೆಸ್ತೈನ್ ಜನತೆಯ ಜೊತೆಗೆ ನ್ಯಾಯಯುತ ಹೋರಾಟದಲ್ಲಿ ದೃಢವಾಗಿ ನಿಲ್ಲಬೇಕು ಎಂದು ಭಾರತೀಯ ಜನತೆಗೆ ಕರೆ ನೀಡಿದೆ.

# ಸಮಾನತೆಯನ್ನು ಬೆಂಬಲಿಸುವ ಎಲ್ಲ ಅತ್ಯುತ್ತಮ ಜನರು ಕಮ್ಯೂನಿಸ್ಟರು–ಚಲನಚಿತ್ರ ನಿರ್ದೇಶಕ ರಾಜುಮುರುಗನ್

ಮಧುರೈ: ಏಪ್ರಿಲ್ 3– "ಎಲ್ಲರಿಗೂ ಸಮಾನತೆಯನ್ನು ಪ್ರತಿಪಾದಿಸುವ ಎಡಪಂಥೀಯರು ಮಾತ್ರ ದೇಶವನ್ನು ರಕ್ಷಿಸಬಲ್ಲರು. ನಾನು ವೇದಿಕೆಯ ಮೇಲೆ ಬಂದ ತಕ್ಷಣ, ಚಲನಚಿತ್ರ ನಟ ಶಶಿಕುಮಾರ್ ನನ್ನನ್ನು ನೋಡಿ, 'ನೀನು ಕಮ್ಯೂನಿಸ್ಟನೇ' ಎಂದು ಕೇಳಿದರು. ಅದಕ್ಕೆ ನಾನು, 'ನೀನೂ ಒಬ್ಬ ಕಮ್ಯೂನಿಸ್ಟ್ ಅಂತ ನನಗೆ ಗೊತ್ತು' ಅಂದೆ. ಶಶಿಕುಮಾರ್ ತಮಿಳು ಚಿತ್ರರಂಗದ ಅತ್ಯುತ್ತಮ ವ್ಯಕ್ತಿಗಳಲ್ಲಿ ಒಬ್ಬರು. ಉತ್ತಮ ಜನರು ಮಾತ್ರ ಕಮ್ಯೂನಿಸ್ಟರಾಗಲು ಸಾಧ್ಯ. ಕಮ್ಯೂನಿಸ್ಟ್ ಒಂದು ಪಕ್ಷವಲ್ಲ. ಅದು ಎಲ್ಲರಿಗೂ ಒಂದು ತತ್ವಶಾಸ್ತ್ರ (ಮಾನವೀಯತೆ). ಸಮಾನತೆಯನ್ನು ಬೆಂಬಲಿಸುವ ಎಲ್ಲ ಅತ್ಯುತ್ತಮ ಜನರು ಕಮ್ಯೂನಿಸ್ಟರು" ಹೀಗೆಂದವರು ಚಲನಚಿತ್ರ ನಿರ್ದೇಶಕ ರಾಜು ಮುರುಗನ್. ಅವರು ಮಧುರೈನಲ್ಲಿ ನಡೆದ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ 24ನೇ ಅಖಿಲ ಭಾರತ ಸಮ್ಮೇಳನದ ಸಂದರ್ಭದಲ್ಲಿ ನಡೆದ ಕಲಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

**ದೇಶದ ದಿಕ್ಕನ್ನು ನಿರ್ಧರಿಸುವ ಸಮ್ಮೇಳನ**

ಈ ಸಮ್ಮೇಳನವು ಮುಂದಿನ ಕೆಲವು ವರ್ಷಗಳಲ್ಲಿ ಭಾರತೀಯ ಸಂವಿಧಾನ ಮತ್ತು ಜನರ ಪ್ರಜಾಪ್ರಭುತ್ವವನ್ನು ನಿರ್ಧರಿಸುತ್ತದೆ. ಈ ಐತಿಹಾಸಿಕ ಸಮ್ಮೇಳನವು ರಾಜಕೀಯ ಮಹತ್ವದ್ದಾಗಿದೆ. ನನ್ನಂತಹ ಜನರಿಗೆ ಇದರ ಬಗ್ಗೆ ಮಾತನಾಡಲು ಅವಕಾಶ ನೀಡಿದ ಸಂಗಾತಿಗಳಿಗೆ ನಾನು ಧನ್ಯವಾದ ಹೇಳಲು ಬಯಸುತ್ತೇನೆ. ಎಡಪಂಥೀಯ ಚಳುವಳಿಗಳು ಮಾತ್ರ ಸಾಮಾನ್ಯ ಜನರಿಗೆ ಮಾತನಾಡಲು ಅವಕಾಶ ನೀಡುತ್ತವೆ.

**ನಾನು ಕಮ್ಯೂನಿಸ್ಟ್ ಎಂದು ಅರಿತುಕೊಂಡ ಕ್ಷಣ**

ನಾನು ಮೊದಲು ಕಮ್ಯೂನಿಸ್ಟ್ ಎಂದು ಭಾವಿಸಿದಾಗ ನನಗೆ ಆಶ್ಚರ್ಯವಾಯಿತು. ನನ್ನ ಸ್ವಂತ ಊರು ತಂಜಾವೂರು ಜಿಲ್ಲೆಯಲ್ಲಿ, ಬಿತ್ತನೆಯಿಂದ ಹಿಡಿದು ಭತ್ತದ ಕೊಯ್ಲು ಮಾಡುವವರೆಗೆ ಕೆಲಸಗಳನ್ನು ನಿರ್ವಹಿಸುವ ಕೃಷಿ ಕಾರ್ಮಿಕ, ಪ್ರಬಲ ಜಾತಿಯ ಮನೆಯಲ್ಲಿ ಅಕ್ಕಿ ಚೀಲಗಳನ್ನು ಜೋಡಿಸಿರುವ ಸ್ಥಳಕ್ಕೆ ಮಾತ್ರ ಬರುತ್ತಾನೆ. ಅವನು ಮನೆಯೊಳಗೆ ಏಕೆ ಪ್ರವೇಶಿಸಲು ಸಾಧ್ಯವಿಲ್ಲ? ಅಥವಾ ತನ್ನನ್ನು ಬರಲು ಅವರು ಬಿಡಲಿಲ್ಲ ಹಾಗೆ ಅನಿಸಿದರೆ ಸಾಕೇ? ತಂಜಾವೂರು ಕಾರಂತೈ ತಮಿಳು ಸಂಘದಿಂದ ನನ್ನ ಅಣ್ಣ ತಂದ ಸೆಮ್ಮಲರ್ ನಿಯತಕಾಲಿಕೆಗಳಲ್ಲಿ ಬರಹಗಾರ ಜಯಕಾಂತನ್ ಬರೆದ 'ನಾನು ಕಮ್ಯೂನಿಸ್ಟ್ ಆದದ್ದು ಏಕೆ' ಸರಣಿಯನ್ನು ಓದಿದ್ದರಿಂದಲೇ? "ಬಂದೂಕಿನ ಕೈಯಿಂದಲೂ ತನ್ನ ಜನರಿಗಾಗಿ ಹೋರಾಡಿದ ತಮಿಜರಸನ ಪೊನ್ಪರಪ್ಪಿಯಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಮಡಿದನು" ಎಂಬ ಕವಿತೆಯನ್ನು ಓದಿದ್ದೀರಾ? ಚಾರ್ಲಿ ಚಾಪ್ಲಿನ್ ನಟಿಸಿದ 'ಮಾಡರ್ನ್ ಟೈಮ್ಸ್' ಚಿತ್ರದಲ್ಲಿ, ಒಂದು ಕಡೆ, ಜನರು ಕಾರ್ಖಾನೆಗೆ ಗುಂಪು ಗುಂಪಾಗಿ ಹೋಗುತ್ತಿದ್ದರು, ಇನ್ನೊಂದು ಕಡೆ, ಕುರಿಗಳು ಹಿಂಡು ಹಿಂಡಾಗಿ ಹೋಗುವುದನ್ನು ತೋರಿಸುತ್ತಿದ್ದರು. ಈ ಪರಿಸ್ಥಿತಿ ಏಕೆ ಎಂದು ಅವರು ಯೋಚಿಸಿದ್ದಾರೆಯೇ?

**ತಾಯ್ತನವೇ ಕಮ್ಯೂನಿಸಂ**

ಇದೆಲ್ಲವನ್ನೂ ಮೀರಿ, ನನ್ನ ತಾಯಿ ನನ್ನೊಂದಿಗೆ ಜನಿಸಿದ ನಾಲ್ಕು ಮಕ್ಕಳಿಗೆ ತನ್ನ ಎದೆ ಹಾಲನ್ನು ಸಮಾನವಾಗಿ ಹಂಚಿಕೊಂಡರು, ನನ್ನ ತಾಯಿ ಹೊಂದಿದ್ದ ಸಮಾನತೆಯನ್ನು ನಾನು ಅರಿತುಕೊಂಡಾಗ ಮಾತ್ರ ನಾನು ಕಮ್ಯೂನಿಸ್ಟ್ ಆದೆ. ಎಲ್ಲರಿಗೂ ಎಲ್ಲವೂ ಲಭ್ಯವಾಗಬೇಕು ಎಂಬುದು ನನ್ನ ತಾಯಿಯ ಕಲ್ಪನೆ. ತಾಯ್ತನವೇ ಕಮ್ಯೂನಿಸಂ. ನಾನು ಇಪ್ಪತ್ತು ವರ್ಷಗಳಿಗೂ ಹೆಚ್ಚು ಕಾಲ ಪತ್ರಕರ್ತ, ಬರಹಗಾರ ಮತ್ತು ಚಲನಚಿತ್ರ ನಿರ್ಮಾಪಕನಾಗಿ ಕೆಲಸ ಮಾಡಿದ್ದೇನೆ. ಆಗ ಅವರು ನನ್ನನ್ನು ಬರಹಗಾರ ಮತ್ತು ಚಲನಚಿತ್ರ ನಿರ್ಮಾಪಕ ಎಂದು ಕರೆದರು. ಆಗ ನನಗೆ ಹೆಮ್ಮೆ ಇರಲಿಲ್ಲ. ಅವರು ನನ್ನನ್ನು ಕಾಮ್ರೇಡ್, ಕಾಮ್ರೇಡ್ ರಾಜುಮುರುಗನ್ ಎಂದು ಕರೆದಿದ್ದಕ್ಕೆ ನನಗೆ ಹೆಮ್ಮೆ ಇದೆ. ನಾನು ಕಾಮ್ರೇಡ್ ಆಗಿರುವುದಕ್ಕೆ ಯಾವಾಗಲೂ ಹೆಮ್ಮೆಪಡುತ್ತೇನೆ.

**ಪೆರಿಯಾರ್ ಮತ್ತು ಅಂಬೇಡ್ಕರ್ ಇಬ್ಬರೂ ಕಮ್ಯೂನಿಸ್ಟರು**

ತಮಿಳು ಸಿನಿಮಾ ರಂಗದಲ್ಲಿ ಒಬ್ಬ ಕಮ್ಯೂನಿಸ್ಟ್ ಆಗಿದ್ದುಕೊಂಡು ಕಾರ್ಯನಿರ್ವಹಿಸುವುದು ಸಾಧ್ಯವೇ? ಎಲ್ಲರಂತೆ ನನಗೂ ಸಿನಿಮಾ ಮಾಡುವುದನ್ನು ಮುಂದುವರಿಸಬಹುದೇ ಎಂಬ ಚಿಂತೆಯೂ ಇದೆ. ನಾನು ಕಮ್ಯೂನಿಸ್ಟ್ ಆಗಬೇಕು. ಇಂದು ದೇಶ ಸಂಕಷ್ಟದ ಪರಿಸ್ಥಿತಿಯಲ್ಲಿದೆ. ನಾವು ಬದಲಾವಣೆಯನ್ನು ತರಬೇಕಾಗಿದೆ. ಅದಕ್ಕೆ ಮಾರ್ಕ್ಸ್‌ವಾದಿ ತತ್ವಶಾಸ್ತ್ರ ಮಾತ್ರ ಪರ್ಯಾಯ ತತ್ವಜ್ಞಾನವನ್ನು ಪ್ರಸ್ತುತಪಡಿಸಬಲ್ಲದು. ಇದು ಮಾತ್ರವೇ ಪರ್ಯಾಯ ರಾಜಕೀಯಕ್ಕೆ ಮಾರ್ಗದರ್ಶಿ. ಪೆರಿಯಾರ್ ಮತ್ತು ಅಂಬೇಡ್ಕರ್ ಕಮ್ಯೂನಿಸ್ಟರಾಗಿದ್ದರು ಮತ್ತು ವರ್ಣಾಶ್ರಮ ತತ್ವಶಾಸ್ತ್ರವನ್ನು ವಿರೋಧಿಸಿದರು. ವರ್ಗ ವಿಭಜನೆಗಳ ವಿರುದ್ಧ ಹೋರಾಡಬಲ್ಲ ಏಕೈಕ ಚಳುವಳಿ ಕಮ್ಯೂನಿಸ್ಟ್ ಚಳುವಳಿ. ನಾನು ಅಂಬೇಡ್ಕರ್ ಮತ್ತು ಫಾದರ್ ಪೆರಿಯಾರ್ ಅವರನ್ನು ಕಮ್ಯೂನಿಸ್ಟರಂತೆ

ಪುಟ 6 ಕ್ಕೆ

## ಅಪಾರ ಪ್ರಮಾಣದ ರೈತ ಸಂಘರ್ಷಗಳು....... ಪುಟ 2 ರಿಂದ

ಪ್ರದೇಶಗಳಲ್ಲಿ ಐದು ಸಾವಿರ, ಮೂರು ಸಾವಿರಕ್ಕಿಂತ ಹೆಚ್ಚು ಜನರು ಸೇರಿ ಸುತ್ತಾಡುತ್ತಾ ಬೇಲಿಗಳನ್ನು ಕಿತ್ತೊಗೆಯುತ್ತಿದ್ದರು. ಇಂತಹ ಪ್ರತಿಭಟನೆಗಳು ಹಬ್ಬುತ್ತಾ ಇಡೀ ಇಂಗ್ಲೆಂಡ್‌ನ ಅರ್ಧದಷ್ಟು ಜಿಲ್ಲೆಗಳಿಗೆ ವ್ಯಾಪಿಸಿತು. ಈ ಪ್ರತಿಭಟನೆಗಳನ್ನು ಹತ್ತಿಕ್ಕಲು ಮೇಲೆ ಜಹಗೀರುದಾರರ ಪಡೆಗಳ ಜೊತೆಗೆ ರಾಜನ ಸೈನ್ಯವನ್ನು ಬಳಸಲಾಯಿತು.

ಈ ಪಡೆಗಳ ವಿರುದ್ಧ, ಸೈನ್ಯದ ವಿರುದ್ಧ ರೈತ ಕೂಲಿಕಾರರು ಧೀರತನದಿಂದ ಹೋರಾಡಿದರು. ಹಸಿವಿನಿಂದ ನರಳುತ್ತಾ, ಭಿಕ್ಷೆ ಬೇಡುವ ಸ್ಥಿತಿಗೆ ಬರುವ ಬದಲಾಗಿ, ಗುಲಾಮರಂತೆ ಬಾಳುವುದರ ಬದಲಾಗಿ ನಮ್ಮ ಭೂಮಿಗಾಗಿ ಹೋರಾಡಿ ಪ್ರಾಣ ಅರ್ಪಿಸುವುದು ಒಳ್ಳೆಯದು ಎಂದು ಈ ಹೋರಾಟಗಾರರುಗಳು ಇತರ ಹಳ್ಳಿಗಳ ಹೋರಾಟಗಾರರಿಗೆ ಬರೆದ ಪತ್ರಗಳಲ್ಲಿ ಬರೆದಿದ್ದಾರೆ.

ನ್ಯೂಟನ್ ಎಂಬ ನಗರದ ಬಳಿಯ ಇಂತಹ ಒಂದು ಪ್ರತಿಭಟನೆಯಲ್ಲಿ ಐವತ್ತು ಜನರನ್ನು ಕೊಂದು ಹಾಕಿದರು. ನೂರಾರು ಜನರು ಗಾಯಗೊಂಡರು. ಈ ಹುತಾತ್ಮರಿಗೆ ಸ್ಥಾಪಿಸಿದ ಸ್ಮಾರಕವನ್ನು ಇಂದೂ ನೋಡಬಹುದಾಗಿದೆ.

ಹೀಗೆಯೆ ತಗ್ಗು ಪ್ರದೇಶಗಳಲ್ಲಿ ನೀರಾವರಿ ಕೃಷಿ ಮಾಡುತ್ತಿದ್ದ ಭೂಮಿಯಲ್ಲಿ ನೀರು ಹರಿಯದಂತೆ, ನಿಲ್ಲದಂತೆ ಮೇಲುಗಡೆ ಅಣೆಗಳನ್ನು ನಿರ್ಮಿಸುವ, ನೀರು ಬಸಿಯುವ ಡ್ರೈನೇಜ್ ಯೋಜನೆಗಳನ್ನು ಸಾವಿರಾರು ಚದರ ಕಿಮಿ ವಿಸ್ತೀರ್ಣದಲ್ಲಿ ಕೈಗೊಂಡರು. ಹೀಗೆ "ಅಭಿವೃದ್ಧಿ"ಪಡಿಸಿದ ಭೂಮಿಯನ್ನು ಕುರಿಗಾವಲು, ರಫ್ತು ಬೆಳೆಗಳನ್ನು ಬೆಳೆಯಲು ಮಾರಬೇಕೆಂಬುದು ಅವರ ಗುರಿಯಾಗಿತ್ತು. ಈ ಭೂಮಿಯ ಬಹುಭಾಗ ಊರೊಟ್ಟಿನ ಭೂಮಿಯಾಗಿತ್ತು. ಆಗ ರೈತ, ಕೂಲಿಕಾರರು ಅಣೆಗಳನ್ನು, ಬಸಿಗಾಲುವೆಗಳನ್ನು ಒಡೆದು ಹಾಕಿದರು. ಈ ರೀತಿ ನಿತ್ಯ ಹೋರಾಟ ನಡೆಯುತ್ತಿತ್ತು.

ಈ ಅಸಂಖ್ಯ ಪ್ರತಿಭಟನೆಗಳ ಪರಿಣಾಮವಾಗಿ ಹಳ್ಳಿಗಳ ನಾಶ, ಇಡೀ ಒಂದು ದೊಡ್ಡ ಪ್ರದೇಶವನ್ನು ನಿರ್ಜನ ಮಾಡುವುದರ ವಿರುದ್ಧ ಹಲವು ಜನ ಧ್ವನಿ ಎತ್ತಿದರು. ಗೋಲ್ಡ್ ಸ್ಮಿತ್‌ರಂತಹ ಕವಿಗಳು "ಜನಶೂನ್ಯ ಹಳ್ಳಿ"ಯಂತಹ ಕವನಗಳನ್ನು ಬರೆದರು. ರಾಜರು ಬೇಲಿ ಹಾಕುವುದರ (ಎನ್‌ಕ್ಲೋಷರ್) ವಿರುದ್ಧ ಒಂದಲ್ಲ ಹತ್ತು ಹಲವು ಕಾಯಿದೆಗಳನ್ನು ತಂದರು. ಆದರೆ ಈ ಕಾಯಿದೆಗಳಿಂದ ಯಾವ ಪ್ರಯೋಜನವೂ ಆಗಲಿಲ್ಲ. ಅವುಗಳನ್ನು ಮಾಡಿದವರೇ ಎಲ್ಲೆಂದರಲ್ಲಿ ಉಲ್ಲಂಘಿಸಿ ಭೂಮಿಯನ್ನು ಆಕ್ರಮಿಸಿದರು.

**ಕಾಡುಗಳ ಹಕ್ಕುಗಳಿಗಾಗಿ ಸಂಘರ್ಷ**

ಕೃಷಿ ಭೂಮಿಯನ್ನು ಮಾತ್ರವೇ ಅಲ್ಲದೆ ಸರ್ವರ ಅಥವಾ ಸರ್ಕಾರದ ಆಸ್ತಿಯಾಗಿದ್ದ ಅರಣ್ಯ ಪ್ರದೇಶವನ್ನು ರಾಜ ತನ್ನ ರಾಜ ವಂಶದ ಹಿಂಬಾಲಕರಿಗೆ ಹಂಚಿ ಕೊಟ್ಟುಬಿಟ್ಟ. ಈ ರೀತಿ ಅರಣ್ಯ ಪ್ರದೇಶ ಪಡೆದವರು ಅದನ್ನು ಆಕ್ರಮಿಸಿಕೊಂಡು ಬೇಲಿ ಹಾಕಿಕೊಳ್ಳಲಾರಂಭಿಸಿದರು. ಕಾಡು ಕಡಿದು ಲಾಭಕರ ಕುರಿಗಾವಲು ಮಾಡುವುದು, ಜಿಂಕೆ ವನಗಳನ್ನಾಗಿ ಮಾಡುವುದು ಇವರ ಉದ್ದೇಶ. ಈ ಕಾಡುಗಳ ಒಳಗೇ ಸಾವಿರಾರು ಕುಟುಂಬಗಳು ಜೀವಿಸುತ್ತಿದ್ದರು. ಅವರನ್ನು ಓಡಿಸಲಾಯಿತು. ನೆರೆಯ ಹಳ್ಳಿ ಪಟ್ಟಣಗಳ ರೈತ, ಕೂಲಿಕಾರರು, ಬಡಗಿ ಮೊದಲಾದ ಕುಶಲಕರ್ಮಿಗಳಿಗೆ ಪರಂಪರಾಗತವಾಗಿ ಸಾವಿರಾರು ವರ್ಷಗಳಿಂದ ಇಲ್ಲಿಯ ಮರ ಮುಟ್ಟಿನ, ಇತರ ಉಪ ಉತ್ಪನ್ನಗಳ ಪ್ರಯೋಜನ ನಿರಾಕರಿಸಿದ್ದರಿಂದ ಕೂಡಾ ಸಾವಿರಾರು ಜನರ ಜೀವನಕ್ಕೆ ಭಂಗ ಬಂದಿತು. 1626ರಿಂದ 1632ರವರೆಗೆ ಕುಶಲಕರ್ಮಿಗಳು ಸೇರಿದಂತೆ ಹಲವರು ಸೇರಿ ಬ್ರಿಟನ್‌ನ ಹಲವೆಡೆ ಪ್ರತಿಭಟನೆ ನಡೆಸಿದರು.

**ಕಲ್ಲಿದ್ದಲು ಗಣಿಗಳ ಮೇಲೆ ಸಂಘರ್ಷ**

ಆ ಸಮಯದಲ್ಲಿ ಕೈಗಾರಿಕೆಗಳ ಬೆಳವಣಿಗೆಯ ಕಾರಣದಿಂದ ಕಲ್ಲಿದ್ದಲಿಗೆ ಬಹು ದೊಡ್ಡ ಬೇಡಿಕೆ. ಆದ್ದರಿಂದ ಕಲ್ಲಿದ್ದಲು ವಿಪುಲವಾಗಿ ಸಿಗುವ ಪ್ರದೇಶದಲ್ಲಿ ಜಹಗೀರುದಾರರು ಹಲವು ಸಾವಿರ ರೈತರನ್ನು ಒಕ್ಕಲೆಬ್ಬಿಸಿ ಕಲ್ಲಿದ್ದಲು ಗಣಿಗಳನ್ನು ಆರಂಭಿಸಿದರು. ಅಂತಹ ಸಂದರ್ಭದಲ್ಲಿ ಜಹಗೀರುದಾರರಿಗೆ, ಗಣಿ ಮಾಲಿಕರಿಗೆ ಅಪರಿಮಿತ ಲಾಭ. ಆದರೆ ರೈತರು ತಿರಿದುಣ್ಣುವ ಸ್ಥಿತಿ. ಆಗ ರೈತರು ತಮ್ಮ ಹೊಲಗಳಲ್ಲಿ ಕಲ್ಲಿದ್ದಲು ಸಿಗದಿರಲಿ ಎಂದು ಪ್ರಾರ್ಥನೆ ಮಾಡುತ್ತಿದ್ದರು.

ಅನೇಕ ಗಣಿಗಳ ಭೂಮಿಯ ಬೇಲಿ ಕತ್ತರಿಸಿ ಒಳ ನುಗ್ಗಿ ಗಣಿಯಲ್ಲಿ ತೋಡಿದ್ದ ಗುಂಡಿಗಳನ್ನು ಮುಚ್ಚುತ್ತಿದ್ದರು. ಕಲ್ಲಿದ್ದಲುಗಳನ್ನು ಒಯ್ಯುತ್ತಿದ್ದರು. ಇಂಗ್ಲೆಂಡ್‌ನ ಕಲ್ಲಿದ್ದಲು ಗಣಿಗಾರಿಕೆಗೆ ಪ್ರಸಿದ್ಧವಾದ ಲಂಕಾಶೈರ್ ಪ್ರದೇಶದಲ್ಲಿ ಒಂದು ದೊಡ್ಡ ಗಣಿಯ ವಿರುದ್ಧ ಹೀಗೆ 16 ಬಾರಿ ಪ್ರತಿಭಟನೆ ಮಾಡಿದರು. ಆದರೂ ಆ ಕಲ್ಲಿದ್ದಲು ಗಣಿಗಳ ಅಪಾರ ಲಾಭದಲ್ಲಿ ಅಲ್ಲಿ ತಲೆತಲಾಂತರದಿಂದ ಬೇಸಾಯ ಮಾಡುತ್ತಿದ್ದ ರೈತರಿಗೆ ಯಾವ ಪಾಲೂ ದೊರಕಲಿಲ್ಲ. ಕಲ್ಲಿದ್ದಲು ಗಣಿಗಳ ಆಳದಲ್ಲಿ ಕಠಿಣ ದುಡಿಮೆಯ ಕೆಲಸ ಒಂದೇ ಇವರಿಗೆ ದಕ್ಕಿದ್ದು.

**ಪಾರ್ಲಿಮೆಂಟ್‌ನಿಂದ ಕಾನೂನುಬದ್ಧಗೊಳಿಸಿದ ಭೂ ಲೂಟಿ– ಎನ್‌ಕ್ಲೋಷರ್ ಕಾಯಿದೆಗಳು**

1600ರ ಶತಮಾನದ ಆರಂಭದವರೆಗೆ ಜಹಗೀರುದಾರರು, ಇತರ ಭೂಮಾಲಕರು ಲಾಭದಾಹದಿಂದ ಭೂ ಆಕ್ರಮಣ ಮಾಡುತ್ತಾ ಬಂದರು. ರಾಜಪ್ರಭುತ್ವ ಇದನ್ನು ನಿಯಂತ್ರಿಸುವ ಕಾಯಿದೆಗಳನ್ನು ಮಾಡುತ್ತಲೇ ಈ ಆಕ್ರಮಣಕ್ಕೆ ಒಳಬೆಂಬಲ ನೀಡುತ್ತಾ ಬಂದಿತ್ತು. ಈ ಆಕ್ರಮಣಗಳಿಗೆ ರೈತರು ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆ ಮಾಡುವುದನ್ನು ಹದ್ದುಬಸ್ತಿನಲ್ಲಿಡಲು ಹೊಲಗಳಿಗೆ ಬೇಲಿ ಹಾಕಿಕೊಳ್ಳಲು ಅವಕಾಶ ನೀಡುವ ಎನ್‌ಕ್ಲೋಷರ್ ಕಾಯಿದೆಗಳನ್ನು ತರಲು ಅಂದಿನ ಭೂಮಾಲಿಕ ಹಿಡಿತದ ಪಾರ್ಲಿಮೆಂಟ್ ತೀರ್ಮಾನಿಸಿತು. ಇದರ ಆಧಾರದ ಮೆಲೆ ನಿರ್ದಿಷ್ಟ ಜಹಗೀರು ಅಥವಾ ಭೂಮಿಯಲ್ಲಿ ಇದ್ದ ಗೇಣಿದಾರ ರೈತರಿಗೆ ಒಂದಿಷ್ಟು ಪರಿಹಾರ ನೀಡಿ ಅವರನ್ನು ಒಕ್ಕಲೆಬ್ಬಿಸಲು ಅವಕಾಶ ನೀಡುವ 4000 (!) ಎನ್‌ಕ್ಲೋಷರ್ ಕಾಯಿದೆಗಳನ್ನು 1750 ಮತ್ತು 1820ರ ನಡುವೆ ಅಂಗೀಕರಿಸಲಾಯಿತು. ಈ ಕಾಯಿದೆಗಳ ಮೂಲಕ 68 ಲಕ್ಷ ಎಕರೆಗಳಷ್ಟು ಬೃಹತ್ ಪ್ರಮಾಣದ ಭೂಮಿಗೆ ಬೇಲಿ ಹಾಕಿಕೊಂಡು ದೊಡ್ಡ ಫಾರಂಗಳ ಮೂಲಕ ಬಂಡವಾಳಶಾಹಿ ಕೃಷಿ ಮಾಡಲು ಅವಕಾಶ ನೀಡಲಾಯಿತು. ಈ ಅವಧಿಗೆ ಮೊದಲೇ ರೈತರನ್ನು ಓಡಿಸಲಾಗಿದ್ದ ಬೃಹತ್ ಪ್ರಮಾಣದ ಭೂಮಿಯ ಜೊತೆಗೆ ಈ 68 ಲಕ್ಷ ಎಕರೆ ಎಂಬುದನ್ನು ನೆನಪಿಸಿಕೊಳ್ಳಬೇಕು. ಅಂದರೆ ಒಟ್ಟಾರೆ ಕೋಟ್ಯಾಂತರ ಎಕರೆ ಭೂಮಿ ರೈತರ, ಕೂಲಿಕಾರರ ಕೈ ತಪ್ಪಿತು.

ಮಾರ್ಕ್ಸ್‌ರವರು ಬಂಡವಾಳ ಗ್ರಂಥದಲ್ಲಿ ಪಾರ್ಲಿಮೆಂಟ್‌ನ ಅಧೀನದ ರಾಜಪ್ರಭುತ್ವ ಸ್ಥಾಪನೆಯಾದ ಮೇಲಿನ ಈ ಭೂ ಲೂಟಿಯ ಬಗ್ಗೆ ಹೀಗೆ ಹೇಳುತ್ತಾರೆ: 'ಇಲ್ಲಿಯವರೆಗೆ ಅಲ್ಲಲ್ಲಿ ಸಾಧಾರಣವಾಗಿ ನಡೆಯುತ್ತಿದ್ದ ಸಾರ್ವಜನಿಕ ಭೂಗಳ್ಳತನ ಬೃಹತ್ ಪ್ರಮಾಣದಲ್ಲಿ ನಡೆಯುವ ಹೊಸ ಯುಗದ ಉದ್ಘಾಟನೆಯಾಯಿತು. ಮೂರು ಕಾಸು, ಆರು ಕಾಸಿಗೆ ಅವುಗಳನ್ನು ಎಸೆಯಲಾಯಿತು. ಈ ರೀತಿ ಭೂ ಮಾರುಕಟ್ಟೆ, ದೊಡ್ಡ ಫಾರಂಗಳ ಕೃಷಿ ಬೆಳವಣಿಗೆಯನ್ನು ಬಂಡವಾಳಶಾಹಿಗಳು ಪ್ರೋತ್ಸಾಹಿಸಿದರು. ಹೀಗೆ ಹೊಸ ಆಢ್ಯ ಭೂಮಾಲಕ ವರ್ಗ, ಹೊಸದಾಗಿ ಆರಂಭವಾಗಿದ್ದ ಹಣಕಾಸು ಬಂಡವಾಳದ ಬ್ಯಾಂಕ್ ಪ್ರಭುಗಳು ಮತ್ತು ಆಮದು ಸುಂಕದ ರಕ್ಷಣೆಯ ಬೆಂಬಲದಿಂದ ಬೆಳೆಯುತ್ತಿದ್ದ ದೊಡ್ಡ ಕೈಗಾರಿಕೋದ್ಯಮಿಗಳ ಸಹಚರನಾಯಿತು.'

ಹಲವು ರಾಜ ಪ್ರಭುತ್ವಗಳು, ಅವುಗಳನ್ನು ಸೋಲಿಸಿ ಪಾರ್ಲಿಮೆಂಟ್‌ನ ಪ್ರಭುತ್ವ ಸ್ಥಾಪನೆಯಾದರೂ ಎನ್‌ಕ್ಲೋಷರ್‌ಗಳ ಆಕ್ರಮಣ ತಗ್ಗಲಿಲ್ಲ. ಸ್ವತಃ ಪಾರ್ಲಿಮೆಂಟ್ 4000 ಕಾನೂನುಗಳ ಮೂಲಕ ಈ ಭೂ ಆಕ್ರಮಣಕ್ಕೆ ಸುಭದ್ರ ಬೆಂಬಲ ನೀಡಲು ಮುಂದಾದ ಮೇಲೆ ರೈತರ ಬಹಿರಂಗ ತೀವ್ರ ಪ್ರತಿಭಟನೆಗಳು ತಗ್ಗಿದವು. ಆದರೂ ಕೂಡಾ ತಣ್ಣಗಿನ ಪ್ರತಿಭಟನೆಗಳು ಮುಂದುವರೆದವು.

ಈ ಎಲ್ಲ ಪ್ರಕ್ರಿಯೆಗಳ ಫಲವಾಗಿ ಇಡೀ ಬ್ರಿಟನ್‌ನ ಗ್ರಾಮೀಣ ಪ್ರದೇಶದ ಬಹಳಷ್ಟು ಭಾಗ ಬೇಲಿಯೊಳಗೆ ಸಿಕ್ಕಿ ಹಾಕಿಕೊಂಡಿತ್ತು. ಭೂಮಿ ಬಂಡವಾಳಿಗರ ಕೈ ಸೇರಿ ಬಂಡವಾಳಶಾಹಿ ಕೃಷಿಗೆ ಒಳಗಾಯಿತು. ಈ ಭೂಮಿಯಿಂದ ಓಡಿಸಲ್ಪಟ್ಟ ರೈತ, ಕೂಲಿಕಾರರ ಗತಿ ಏನಾಯಿತು ಎಂಬುದನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

# ಸಂವಿಧಾನಾತ್ಮಕ ಅಡಚಣೆ ನಿವಾರಣೆ: ಒಳ ಮೀಸಲಾತಿ ಜಾರಿಯೇ ಈಗಿರುವ ದಾರಿ

ಕೆ.ಮಹಾಂತೇಶ



ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಯ ಒಳ ಮೀಸಲಾತಿಗೆ ಸಂಬಂಧಿಸಿ ನ್ಯಾ.ನಾಗಮೋಹನ ದಾಸ್ ಆಯೋಗವು ಮಧ್ಯಂತರ ವರದಿಯನ್ನು ನೀಡಿದೆ. ಸಮಿತಿಯು ಪ್ರಧಾನವಾಗಿ ನಾಲ್ಕು ಶಿಫಾರಸ್ಸುಗಳನ್ನು ನೀಡಿದೆ. ಈ ಶಿಫಾರಸ್ಸುಗಳನ್ನು ರಾಜ್ಯ ಸಚಿವ ಸಂಪುಟವು ಅಂಗೀಕರಿಸಿದೆ. ಈ ಹಿನ್ನೆಲೆಯಲ್ಲಿ ಒಳ ಮೀಸಲಾತಿಗೆ ಅಗತ್ಯವಾದ ವೈಜ್ಞಾನಿಕ ಸಮೀಕ್ಷೆಯನ್ನು ನಿಗದಿತ ಎರಡು ತಿಂಗಳ ಅವಧಿಯ ಗಡುವಿನಲ್ಲಿ ಪೂರ್ಣಗೊಳಿಸಬೇಕು ಎಂದು ಸರ್ಕಾರ ಜಸ್ಟೀಸ್ ನಾಗಮೋಹನ್ ದಾಸ್ ಆಯೋಗಕ್ಕೆ ಸೂಚಿಸಿದೆ ಮತ್ತು ಅಲ್ಲಿಯವರೆಗೆ ಪರಿಶಿಷ್ಟ ಜಾತಿಗಳಿಗೆ ಅನ್ಯಾಯವಾಗದ ಹಾಗೆ ಎಲ್ಲ ನೇಮಕಾತಿಗಳನ್ನು ತಡೆಹಿಡಿದು ಮರು ಆದೇಶ ನೀಡಿದೆ.

ಏಪ್ರಿಲ್ 5ರಂದು ಡಾ. ಬಾಬು ಜಗಜೀವನ್ ರಾಮ್ ಜನ್ಮ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎರಡು ತಿಂಗಳ ಒಳಗೆ ಯಾವ ಜಾತಿಗೂ ಅನ್ಯಾಯವಾಗದ ರೀತಿಯಲ್ಲಿ ಒಳ ಮೀಸಲಾತಿಯನ್ನು ಜಾರಿಗೊಳಿಸಲಾಗುವುದು ಎನ್ನುವ ಭರವಸೆಯನ್ನು ಸ್ಪಷ್ಟವಾದ ಮಾತುಗಳಲ್ಲಿ ಹೇಳಿದ್ದಾರೆ. ಇದು ನಿಜವೇ ಆಗಿದ್ದಲ್ಲಿ ಹಲವು ದಶಕಗಳಿಂದ ಒಳ ಮೀಸಲಾತಿಗಾಗಿ ಸಂಘರ್ಷಾತ್ಮಕವಾಗಿ ಹೋರಾಟ ನಡೆಸಿದ್ದ ಮತ್ತು ಅವಕಾಶಗಳಿಂದ ವಂಚಿತವಾಗಿದ್ದ ರಾಜ್ಯದ ಪರಿಶಿಷ್ಠ ಜಾತಿಯಲ್ಲೇ ದೊಡ್ಡದಾದ ದಲಿತರ ವಿಭಾಗಕ್ಕೆ ಒಂದು ಭರವಸೆಯ ಬೆಳಕು ಮೂಡಿದಂತಾಗುತ್ತದೆ.

ನ್ಯಾಯಮೂರ್ತಿ ನಾಗಮೋಹನ್ ದಾಸ್ ನೇತೃತ್ವದ ಆಯೋಗವು ಪರಿಶಿಷ್ಟ ಜಾತಿಗಳ ವೈಜ್ಞಾನಿಕ ವರ್ಗೀಕರಣಕ್ಕೆ ಹೊಸ ಸಮೀಕ್ಷೆ ನಡೆಸಿ ದತ್ತಾಂಶ ಸಂಗ್ರಹಿಸಲು ಮಾಡಿರುವ ಶಿಫಾರಸ್ಸು, ಮುಂದಿನ ದಿನಗಳಲ್ಲಿ ಒಳಮೀಸಲಾತಿಯ ವಿವಿಧ ಪ್ರಶ್ನೆಗಳ ಮೇಲೆ ಕೋರ್ಟ್ ಮೆಟ್ಟಿಲೇರುವುದನ್ನು ತಡೆಗಟ್ಟಲು ಅಗತ್ಯವಾಗಿದೆ. ಸುಪ್ರೀಂ ಕೋರ್ಟಿನ ತೀರ್ಪು ಬಹಳ ಮುಖ್ಯವಾಗಿ ಈ ಅಂಶವನ್ನು ಆಧರಿಸಿದೆ. ಆದ್ದರಿಂದ ಆಯೋಗವು ಅಭಿಪ್ರಾಯಪಟ್ಟಿರುವ ಹಾಗೆ ಆಧುನಿಕ ಸಾಧನಗಳನ್ನು ಬಳಸಿ, ಸರ್ಕಾರವು ನಿಗದಿಪಡಿಸಿದ 60 ದಿನಗಳೊಳಗೆ, ಸಮೀಕ್ಷೆ ಕಾರ್ಯವನ್ನು ಪೂರ್ಣಗೊಳಿಸಬೇಕಾಗಿದೆ. ಸ್ವತಃ ಆಯೋಗವೇ ಮುಂದಿನ ನೇಮಕಾತಿಗಳಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಅನ್ಯಾಯವಾಗದ ಹಾಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಅದಕ್ಕಾಗಿ ಎರಡು ತಿಂಗಳ ಅವಧಿಗೆ ಪರಿಶಿಷ್ಟ ಜಾತಿಗಳ ಮೀಸಲು ನೇಮಕಾತಿಯನ್ನು ಮುಂದೂಡುವುದು ಅಗತ್ಯವಾಗಿದೆ ಎಂದು ಶಿಫಾರಸ್ಸು ಮಾಡಿತ್ತು.

**ಐವತ್ತು ವರ್ಷಗಳ ಹೋರಾಟದ ಇತಿಹಾಸ**

ಭಾರತದ ಒಳಮೀಸಲಾತಿ ಹೋರಾಟಕ್ಕೆ 50 ವರ್ಷಗಳ ಇತಿಹಾಸವಿದೆ. 1975ರ ಮುಂಚೆಯೇ ದಲಿತರು ಅಧಿಕವಿರುವ ಪಂಜಾಬ್‌ನಲ್ಲಿ ಪ್ರಬಲ ಚೆಮ್ಮಾರ್ ಸಿಖ್ ಕಮ್ಯೂನಿಟಿ ಮೀಸಲಾತಿಯ ಅತಿ ಹೆಚ್ಚು ಲಾಭ ಗಳಿಸುತ್ತಿದ್ದ ಸಂದರ್ಭದಲ್ಲಿ, ಮೀಸಲಾತಿ ಸೌಲಭ್ಯಗಳಿಂದ ವಂಚಿತರಾದ ಅಲ್ಲಿನ ವಾಲ್ಮೀಕಿ ಹಾಗೂ ಹಿಸ್ಬಾ ಸಮುದಾಯದ ದಲಿತರು ಮೊದಲ ಬಾರಿಗೆ ಒಳ ಮೀಸಲಾತಿ ಬೇಡಿಕೆಯನ್ನು ಮುನ್ನೆಲೆಗೆ ತಂದರು. ಹೀಗಾಗಿ ಅಂದಿನ ಮುಖ್ಯಮಂತ್ರಿ ಗ್ಯಾನಿ ಜೈಲ್ ಸಿಂಗ್ ನೇತೃತ್ವದ ಸರ್ಕಾರವು ಮೊದಲ ಬಾರಿಗೆ ಒಳ ಮೀಸಲಾತಿಯನ್ನು ವಾಲ್ಮೀಕಿ ಹಾಗೂ ಹಿಸ್ಬಾ ಸಮುದಾಯಕ್ಕೆ ಕಲ್ಪಿಸಿತ್ತು. ಇದೇ ಬೇಡಿಕೆಯನ್ನು ಹರಿಯಾಣದಲ್ಲಿ ವಾಲ್ಮೀಕಿ ಸಮುದಾಯ ಬೇಡಿಕೆ ಮಂಡಿಸಿ ಹಲವು ಹೋರಾಟಗಳನ್ನು ನಡೆಸಿದರು. ತಮಿಳುನಾಡಿನಲ್ಲಿ ಆರುಂಧತಿ ಸಮುದಾಯವು, ಇದಾದ ಬಳಿಕ ಅವಿಭಜಿತ ಆಂಧ್ರ ಪ್ರದೇಶದಲ್ಲಿ ಮಾದಿಗ ದಂಡೋರ ಹೋರಾಟ ಸಮಿತಿ ನೇತೃತ್ವದಲ್ಲಿ ಪ್ರಬಲವಾದ ಒಳ ಮೀಸಲಾತಿಗಾಗಿ ಹೋರಾಟಗಳು ನಡೆದ ಪರಿಣಾಮವಾಗಿ, ಆ ರಾಜ್ಯಗಳಲ್ಲಿ ಒಳ ಮೀಸಲಾತಿ ಜಾರಿಯಾಯಿತು.

ಆದರೆ, ಬಳಿಕ ತಮಿಳುನಾಡು ಹೊರತುಪಡಿಸಿ, ಉಳಿದೆಲ್ಲ ರಾಜ್ಯಗಳಲ್ಲಿ ನ್ಯಾಯಾಲಯದ ವ್ಯಾಜ್ಯಗಳಿಂದಾಗಿ ಈ ನಿರ್ಧಾರಗಳನ್ನು ಜಾರಿಗೆ ತರಲಾಗಲಿಲ್ಲ. ಆಂಧ್ರಪ್ರದೇಶ ರಾಜ್ಯದ ಉಪ–ವರ್ಗೀಕರಣದ ಮೇಲೆ ತೆಗೆದುಕೊಂಡ ನಿರ್ಧಾರವನ್ನು ಪ್ರಶ್ನಿಸಿ ಬಂದ ದಾವೆಯಲ್ಲಿ ಉಪ–ವರ್ಗೀಕರಣವು ಅಸಂವಿಧಾನಿಕ ಎಂದು ಸುಪ್ರೀಂ ಕೋರ್ಟ್ 2005ರಲ್ಲಿ ತೀರ್ಪು ನೀಡಿತು. ಈ ತೀರ್ಪನ್ನು ಪ್ರಶ್ನಿಸಿ ಬಂದ ಅನೇಕ ಅರ್ಜಿಗಳನ್ನು ಸೇರಿಸಿ ವಿಚಾರಣೆ ನಡೆಸಿದ ಏಳು ನ್ಯಾಯಾಧೀಶರ ಪೀಠವು ಆಗಸ್ಟ್ 1, 2024 ರಂದು ತನ್ನ ತೀರ್ಪನ್ನು ನೀಡಿದೆ.

**ಸುಪ್ರೀಂ ಕೋರ್ಟು ಹೇಳಿದ್ದೇನೆ?**

**ಸರ್ವೋಚ್ಚ ನ್ಯಾಯಾಲಯದ ಏಳು ನ್ಯಾಯಮೂರ್ತಿಗಳ ವಿಸ್ತೃತ ಪೀಠ 2024 ಆಗಸ್ಟ್ 1ರಂದು ನೀಡಿದ ತೀರ್ಪಿನ ಈ ಕೆಳಕಂಡ ಪ್ರಶ್ನೆಗಳನ್ನು ಹಾಕಿಕೊಂಡು ವಿಶ್ಲೇಷಿಸಿತು.**

1. ಇಂದ್ರಸಾಹ್ನಿ ಪ್ರಕರಣದಲ್ಲಿ ಹಿಂದುಳಿದ ವರ್ಗವನ್ನು 'ಹಿಂದುಳಿದ' ಮತ್ತು 'ಹೆಚ್ಚು ಹಿಂದುಳಿದ' ವರ್ಗಗಳು ಎಂದು ವರ್ಗೀಕರಿಸುವುದು ಸಾಂವಿಧಾನಿಕ ಎಂದು ಹೇಳಿದೆ. ಇದೇ ರೀತಿ ಅನುಸೂಚಿತ ಜಾತಿಗಳೊಳಗೆ ಉಪವರ್ಗೀಕರಣ ಮಾಡಲು ಏಕೆ ಸಾಧ್ಯವಿಲ್ಲ?
2. ಅನುಸೂಚಿತ ಜಾತಿಗಳು ಏಕರೂಪದ ವರ್ಗವಲ್ಲ. ಸಾಕಷ್ಟು ಪ್ರಾತಿನಿಧ್ಯವಲ್ಲದೆ ಈ ವರ್ಗದ ಜನರಿಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಈ ಜಾತಿಗಳ ಉಪವರ್ಗೀಕರಣ ಮೀಸಲಾತಿಯ ಉದ್ದೇಶ ಸಾಧಿಸಿದಂತೆ ಆಗುವುದಿಲ್ಲವೇ?
3. ಅನುಸೂಚಿತ ಜಾತಿಗಳಿಗೆ ಒಳ ಮೀಸಲಾತಿ ಒದಗಿಸುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಅನುಚ್ಛೇದ 16(4)ರಲ್ಲಿ ಇಲ್ಲವೆ?
4. ಅನುಸೂಚಿತ ಜಾತಿಗಳನ್ನು ಉಪವರ್ಗೀಕರಣ ಮಾಡಿದರೂ ಸಹ ಯಾರನ್ನು ಮೀಸಲಾತಿಯ ಸೌಲಭ್ಯದಿಂದ ಹೊರತುಪಡಿಸಿದಂತಾಗುವುದಿಲ್ಲ?

**ಮೇಲ್ಕಂಡ ವಿಶ್ಲೇಷಣೆ ಬಳಿಕ ಉತ್ತರವನ್ನು ಈ ರೀತಿ ಕಂಡುಕೊಂಡಿತು**

1. ಕಾನೂನಿನ ಉದ್ದೇಶದ ಪ್ರಕಾರ ಯಾವ ಒಂದು ವರ್ಗವು ಸಮಾನ ರೀತಿಯ ಸ್ಥಿತಿಯಲ್ಲಿ ಇರುವುದಿಲ್ಲವೋ, ಅಂತಹ ವರ್ಗದಲ್ಲಿ ಉಪವರ್ಗೀಕರಣ ಮಾಡುವುದಕ್ಕೆ ಸಂವಿಧಾನದ 14ನೇ ಅನುಚ್ಛೇದವು ಅನುಮತಿ ನೀಡುತ್ತದೆ.
2. ಇಂದ್ರಸಾಹ್ನಿ ಪ್ರಕರಣದಲ್ಲಿ ಈ ನ್ಯಾಯಾಲಯವು ಉಪವರ್ಗೀಕರಣದ ವಿಷಯದ ಅನ್ವಯವನ್ನು ಇತರೆ ಹಿಂದುಳಿದ ವರ್ಗಕ್ಕೆ ಮಾತ್ರ ಸೀಮಿತಗೊಳಿಸಲಿಲ್ಲ. ಅನುಚ್ಛೇದ 15(4) ಮತ್ತು 16(4) ರ ಫಲಾನುಭವಿ ವರ್ಗಗಳಿಗೆ ಈ ತತ್ವವನ್ನು ಅನ್ವಯಿಸುವುದನ್ನು ಈ ನ್ಯಾಯಾಲಯವು ಎತ್ತಿ ಹಿಡಿದಿದೆ.
3. ಅನುಸೂಚಿತ ಜಾತಿಗಳ ಒಳಗೆ ಉಪವರ್ಗೀಕರಣ ಮಾಡಿದರೆ ಅದು ಅನುಚ್ಛೇದ 341(2)ರ ಉಲ್ಲಂಘನೆ ಆಗುವುದಿಲ್ಲ. ಯಾರನ್ನು ಮೀಸಲಾತಿ ಸೌಲಭ್ಯದಿಂದ ಹೊರಗಿಡುವುದಿಲ್ಲ.
4. ಅನುಸೂಚಿತ ಜಾತಿಗಳು ಸಾಮಾಜಿಕವಾಗಿ ವಿವಿಧ ರೂಪಗಳ ವರ್ಗ ಎಂಬುದನ್ನು ಚಾರಿತ್ರಿಕ ಹಾಗೂ ಪ್ರಾಯೋಗಿಕ ಸಾಕ್ಷ್ಯವು ತೋರಿಸಿಕೊಟ್ಟಿದೆ. ಆದ್ದರಿಂದ ರಾಜ್ಯವು 15(4) ಮತ್ತು 16(4)ನೇ ಅನುಚ್ಛೇದಗಳ ಅಡಿಯಲ್ಲಿರುವ ಅಧಿಕಾರವನ್ನು ಬಳಸಿಕೊಂಡು (I) ಈ ಜಾತಿಗಳಲ್ಲಿ ವ್ಯತ್ಯಾಸ ಕಲ್ಪಿಸುವುದಕ್ಕೆ ತಾರ್ಕಿಕವಾದ ತತ್ವವಿದ್ದರೆ ಮತ್ತು (II) ಉಪವರ್ಗೀಕರಣದ ಉದ್ದೇಶದೊಂದಿಗೆ ಈ ತಾರ್ತಿಕ ತತ್ವವು ಸಂಬಂಧ ಹೊಂದಿದ್ದರೆ ಅನುಸೂಚಿತ ಜಾತಿಗಳನ್ನು ಮತ್ತಷ್ಟು ವರ್ಗೀಕರಿಸಬಹುದಾಗಿದೆ.
5. ಅನುಸೂಚಿತ ಜಾತಿಗಳಲ್ಲಿ ಉಪವರ್ಗೀಕರಣ ಮಾಡುವಂತಿಲ್ಲ ಎಂದು ಚಿನ್ನಯ್ಯ (ಮೇಲೆ ಹೇಳಿದ) ಪ್ರಕರಣದಲ್ಲಿ ಪ್ರತಿಪಾದಿಸಿದ್ದನ್ನು ರದ್ದುಗೊಳಿಸಲಾಗಿದೆ. ಅನುಸೂಚಿತ ಜಾತಿಗಳ ಉಪವರ್ಗೀಕರಣದ ಸಾರಾಂಶವು ಈ ಕೆಳಕಂಡಂತಿದೆ:

I. ಉಪವರ್ಗೀಕರಣವೂ ಸೇರಿದಂತೆ ಯಾವುದೇ ರೀತಿಯ ಸಕಾರಾತ್ಮಕ ಕ್ರಮದ ಆಧ್ಯೇಯವೇನೆಂದರೆ, ಹಿಂದುಳಿದ ವರ್ಗಗಳಿಗೆ ಸಾಕಷ್ಟು ಪ್ರಮಾಣದ ಸಮಾನ ಅವಕಾಶವನ್ನು ಒದಗಿಸುವುದು. ಈ ಮಧ್ಯೆ ಕೆಲವೊಂದು ಜಾತಿಗಳಿಗೆ ಸಾಕಷ್ಟು ಪ್ರಾತಿನಿಧ್ಯ ಇಲ್ಲದಿರುವುದನ್ನು ಆಧರಿಸಿ ಸರ್ಕಾರವು ಉಪ ವರ್ಗೀಕರಣ ಮಾಡಬಹುದು. ಆದರೂ ಒಂದು ಜಾತಿ/ಸಮೂಹಕ್ಕೆ ಸಾಕಷ್ಟು ಪ್ರಾತಿನಿಧ್ಯ ಇಲ್ಲದಿರುವುದಕ್ಕೆ ಅದರ ಹಿಂದುಳಿದಿರುವಿಕೆಯೇ ಕಾರಣವಾಗಿದೆ ಎಂಬುದನ್ನು ಸರ್ಕಾರವು ಸ್ಥಾಪಿಸಬೇಕು.

II. "ಸರ್ಕಾರದ ಸೇವೆಯಲ್ಲಿ" ಸಾಕಷ್ಟು ಪ್ರಾತಿನಿಧ್ಯವಿಲ್ಲ ಎಂಬುದನ್ನು ತೋರಿಸಲು ರಾಜ್ಯವು ದತ್ತಾಂಶವನ್ನು ಸಂಗ್ರಹಿಸಬೇಕು. ಏಕೆಂದರೆ ಇದನ್ನು ಹಿಂದುಳಿದಿರುವಿಕೆಯ ಸೂಚಕ ಎಂದು ಬಳಸಲಾಗುತ್ತದೆ.

III. 16(1) ಮತ್ತು 16(4)ನೇ ಅನುಚ್ಛೇದದ ಅಡಿಯಲ್ಲಿ ಅಧಿಕಾರವನ್ನು ಬಳಕೆ ಮಾಡುವುದಕ್ಕೆ ಸಂವಿಧಾನದ 335ನೇ ಅನುಚ್ಛೇದವು ಮಿತಿಯನ್ನೇನೂ ಹಾಕುವುದಿಲ್ಲ. ಅದಕ್ಕೆ ಬದಲು ಇದು

ಪುಟ 6 ಕ್ಕೆ

**ಸದಾಶಿವ ಆಯೋಗದ ವರದಿ– ಒಳ ಮೀಸಲಾತಿ ವರ್ಗೀಕರಣ**

| ಗುಂಪು | ಜಾತಿಗಳು | ಜನಸಂಖ್ಯೆ (ಲಕ್ಷಗಳಲ್ಲಿ) | ಜನಸಂಖ್ಯೆ (ಶೇ) |
|---|---|---|---|
| ಗುಂಪು–1 ಎಡಗೈ | ಮಾದಿಗ, ಆದಿದ್ರಾವಿಡ, ಬಂಬಿ, ಮತ್ತು ಸಂಬಂಧಿಸಿದ ಇತರ ಜಾತಿಗಳು | 32.25 | 33 |
| ಗುಂಪು–2 ಬಲಗೈ | ಹೊಲೆಯ, ಆದಿಕರ್ನಾಟಕ, ಛಲವಾದಿ, ಮತ್ತು ಸಂಬಂಧಿಸಿದ ಇತರ ಜಾತಿಗಳು | 30.93 | 32 |
| ಗುಂಪು–3 | ಆದಿ ಆಂಧ್ರ, ಅಡಿಯಾ, ಭಂಧಿ, ಬೇಡ ಜಂಗಮ, ಹೊಲಯದಾಸರಿ ಮತ್ತು ಸಂಬಂಧಿಸಿದ ಇತರ 42 ಜಾತಿಗಳು | 4.5 | 5 |
| ಗುಂಪು–4 | ಬಂಜಾರ, ಭೋವಿ, ಕೊರಚ, ಕೊರಮ ಮತ್ತು ಸಂಬಂಧಿಸಿದ ಇತರ ಜಾತಿಗಳು | 22.84 | 24 |

• ಆಯೋಗವು 2011ರಲ್ಲಿ ಸಂಗ್ರಹಿಸಿದ್ದ ಮಾಹಿತಿ ಪ್ರಕಾರ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ 96.66 ಲಕ್ಷ. ಆಯೋಗದ ವರದಿಯ ನಂತರ ಬಂದ 2011ರ ಜನಗಣತಿಯಲ್ಲಿ ಪರಿಶಿಷ್ಟ ಜಾತಿಯ ಜನಸಂಖ್ಯೆ 1,04,74,992 ಎಂದು ಇದೆ. ಇದರಲ್ಲಿ 7.29 ಲಕ್ಷ ಜನರು ಯಾವುದೇ ಉಪಜಾತಿ ತಿಳಿಸದೆ, ಕೇವಲ ಪರಿಶಿಷ್ಟ ಜಾತಿ ಎಂದು ಮಾತ್ರ ನಮೂದಿಸಿದ್ದಾರೆ.

**ರಾಜ್ಯದಲ್ಲಿ ಪರಿಶಿಷ್ಟ ಜಾತಿಯವರಿಗೆ ದೊರೆತಿರುವ ಸರ್ಕಾರಿ ಉದ್ಯೋಗ**

| ಗುಂಪು | ಮಂಜೂರಾದ ಹುದ್ದೆಗಳು | ಭರ್ತಿಯಾದ ಎಸ್‌ಸಿ ಹುದ್ದೆಗಳು |
|---|---|---|
| ವರ್ಷ: 2016 | | |
| ಎ | 26,600 | 2,892 (10.87%) |
| ಬಿ | 53,786 | 6,619 (12.30%) |
| ಸಿ | 5,64,400 | 59,313 (10.50%) |
| ಡಿ | 1,00,807 | 10,577 (10.49%) |
| ಒಟ್ಟು | 7,45,593 | 79,401 (10.64%) |
| ವರ್ಷ 2023 | | |
| ಎ | 34,550 | 4,970 (14.3%) |
| ಬಿ | 58,914 | 7,036 (11.94%) |
| ಸಿ | 6,02,630 | 77,779 (12.98%) |
| ಡಿ | 1,18,861 | 9,552 (8.03%) |
| ಒಟ್ಟು | 8,14,955 | 99,337 (12.18%) |

* ಆಯಾ ವರ್ಷದ ಮಾರ್ಚ್ 31ರಲ್ಲಿ ಇದ್ದಂತೆ

## 'ಕೆನೆಪದರ' ಅಗತ್ಯವಿಲ್ಲ

ಸುಪ್ರೀಂ ಕೋರ್ಟ್ ತಾನು ಪರಿಹರಿಸಬೇಕಾದ 'ಉಪ–ವರ್ಗೀಕರಣ' ವಿವಾದದ ಮೇಲೆ ತೀರ್ಪು ನೀಡುವಾಗ, 'ಕೆನೆಪದರ' (ಕ್ರೀಮಿ ಲೇಯರ್) ಕುರಿತೂ ವ್ಯಾಖ್ಯಾನಗಳನ್ನು ಮಾಡಿದೆ. ನಾಲ್ವರು ನ್ಯಾಯಮೂರ್ತಿಗಳು 'ಕೆನೆಪದರ'ವನ್ನು ಎಸ್ಸಿ ಮತ್ತು ಎಸ್ಟಿಗಳಿಗೂ ಅನ್ವಯಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಇದು ಕಾರ್ಯಗತಗೊಳಿಸಬೇಕಾದ ತೀರ್ಪಿನ ಭಾಗವಾಗಿರದೇ ಇದ್ದರೂ ಸಹ, ವಿವಾದಾತ್ಮಕ ಅಂಶವಾಗಿದೆ. ಎಸ್ಸಿ ಮತ್ತು ಎಸ್ಟಿಗಳಿಗೆ ಕೆನೆಪದರ ಇರಬಾರದು ಎಂಬುದನ್ನು ಸಿಪಿಐ(ಎಂ)ನ ಸ್ಪಷ್ಟ ಅಭಿಪ್ರಾಯವಾಗಿದೆ. ಐತಿಹಾಸಿಕವಾಗಿ ಯಾವುದೇ ಆಸ್ತಿಪಾಸ್ತಿಗಳನ್ನು ಹೊಂದಿರದ ಎಸ್ಸಿಗಳಲ್ಲಿ, ಇದುವರೆಗೂ ಸ್ಥಿರವಾದ ಆಸ್ತಿಪಾಸ್ತಿಗಳನ್ನು ಹೊಂದಿರುವ ಸ್ಪಷ್ಟವಾದ ಒಂದು ವರ್ಗ ರೂಪುಗೊಂಡಿಲ್ಲ. ಕೆಲವು ಮಂದಿ ರಾಜಕೀಯ ನಾಯಕರು, ಐಎಎಸ್, ಐಪಿಎಸ್ ಅಧಿಕಾರಿಗಳು, ಕೆಲವು ಕೈಗಾರಿಕಾ ಮಾಲೀಕರ ಹೆಸರನ್ನು ತೋರಿಸಿ ಕೆನೆಪದರವನ್ನು ಪ್ರತಿಪಾದಿಸುವುದು ಸರಿಯಲ್ಲ. ಈ ಕುಟುಂಬಗಳ ಕೈಯಲ್ಲಿ ಸಾಕಷ್ಟು ಸಂಪತ್ತು ಸಂಗ್ರಹವಾಗಿದೆ, ಅವರ ಸಾಮಾಜಿಕ ಸ್ಥಾನಮಾನ ಹೆಚ್ಚಾಗಿದೆ, ಇಂತಹ ಕುಟುಂಬಗಳ ಸಂಖ್ಯೆ ಸಾಕಷ್ಟಿದೆ ಎಂದು ಒಪ್ಪಿಕೊಂಡರೂ ಸಹಾ ಅವರ ಸಂಪತ್ತು, ಸಾಮಾಜಿಕ ಸ್ಥಾನಮಾನಗಳು ಮುಂದಿನ ಪೀಳಿಗೆಗೆ ದಕ್ಕುವ ಪರಿಸ್ಥಿತಿ ಇಲ್ಲ. ಹೀಗಿರುವಾಗ ಎಸ್ಸಿ ವರ್ಗದಲ್ಲಿರುವ ಕೆನೆಪದರದ ಬಗ್ಗೆ ಈಗ ಚರ್ಚೆ ಮಾಡುವುದು ಅಪ್ರಸ್ತುತ. ಎಂದು ಸಿಪಿಐ(ಎಂ) ಪ್ರತಿಪಾದಿಸುತ್ತದೆ.

## ಒಳ ಮೀಸಲಾತಿ ಜಾರಿಯೇ ಈಗಿರುವ ದಾರಿ... ಪುಟ 5 ರಿಂದ

ಸರ್ಕಾರದ ಸೇವೆಗಳಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಅಹವಾಲುಗಳನ್ನು ಪರಿಗಣಿಸಬೇಕಾದ ಅವಶ್ಯಕತೆ ಇರುವುದನ್ನು ಪುನರುಚ್ಚರಿಸುತ್ತದೆ. ಆಡಳಿತದ ಪರಿಣಾಮಿಕತೆಯನ್ನು ಅದು 16(1)ನೇ ಅನುಚ್ಛೇದದ ಪ್ರಕಾರ ಸಮಾವಿಷ್ಟಗೊಳಿಸುವಿಕೆ ಹಾಗೂ ಸಮಾನತೆಯನ್ನು ಹೇಗೆ ಪ್ರವರ್ಧಿಸುತ್ತದೆ ಎಂಬ ದೃಷ್ಟಿಯಿಂದ ನೋಡಬೇಕು.

ಸರ್ವೋಚ್ಚ ನ್ಯಾಯಾಲಯದ ಈ ತೀರ್ಪಿನಿಂದ ಪ.ಜಾ ಮತ್ತು ಪ.ಪಂ ಗಳಿಗೆ ಒಳಮೀಸಲಾತಿಯನ್ನು ಕಲ್ಪಿಸುವುದರಿಂದ ಯಾವ ಜಾತಿಗೂ ಮೀಸಲಾತಿ ವಂಚನೆಯಾಗುವುದಿಲ್ಲ ಮತ್ತು ಯಾರನ್ನು ಈ ವರ್ಗಗಳಿಂದ ಹೊರಗಿಡುವ ಪ್ರಶ್ನೆಯೇ ಇಲ್ಲ.


ಮೇಲ್ಕಂಡ ಅಂಶಗಳ ಆಧಾರದಲ್ಲಿ ಸುಪ್ರೀಂ ಕೋರ್ಟ್ ಉಪ–ವರ್ಗೀಕರಣವು ಸಂವಿಧಾನಬದ್ಧವಾಗಿದೆ ಎಂದೂ, ರಾಜ್ಯಗಳು ನಿರ್ಧಾರ ತೆಗೆದುಕೊಳ್ಳುವುದಕ್ಕೆ ಸಂವಿಧಾನವು ಅಡ್ಡಿಯಾಗುವುದಿಲ್ಲ ಎಂದೂ ಬಹುಮತದ ತೀರ್ಪು ನೀಡಿದೆ. ಏಳು ಸದಸ್ಯರ ಪೀಠದಲ್ಲಿ ಒಬ್ಬರು ಮಾತ್ರವೇ ಈ ಅಭಿಪ್ರಾಯವನ್ನು ಒಪ್ಪಲಿಲ್ಲ.

**ಕರ್ನಾಟಕದ ಮುನ್ನೆಲೆಗೆ ಬಂದ ಒಳ ಮೀಸಲಾತಿ ಪ್ರಶ್ನೆ**

ಒಳ ಮೀಸಲಾತಿ ಕುರಿತಂತೆ ಸುಪ್ರೀಂ ಕೋರ್ಟಿನ ಸಂವಿಧಾನ ಪೀಠದ ತೀರ್ಪು ಹೊರ ಬರುತ್ತಿದ್ದಂತೆ ಕರ್ನಾಟಕದಲ್ಲಿ ಒಳ ಮೀಸಲಾತಿ ಪ್ರಶ್ನೆಗಳು ಮರಳಿ ಮುಂಚೂಣಿಗೆ ಬಂದಿದೆ. ಪರಿಶಿಷ್ಠ ಜಾತಿ ಗುಂಪಲ್ಲಿ ತಮಗೆ ಸರಿಯಾದ ಪ್ರಾತಿನಿಧ್ಯ ಹಾಗು ಸೌಲಭ್ಯಗಳು ಸಿಕ್ಕಿಲ್ಲವೆಂದು ಮಾದಿಗ (ಎಡಗೈ) ಸಮುದಾಯದವರು ಹೋರಾಟವನ್ನು ಆರಂಭಿಸಿದರು. ಇದನ್ನು ಸಿಪಿಎಂ ಸೇರಿ ಬಹುತೇಕ ಎಲ್ಲ ಪಕ್ಷಗಳು ಬೆಂಬಲಿಸಿದವು. ಒಳ ಮೀಸಲಾತಿ ವರ್ಗೀಕರಣವು ಪರಿಶಿಷ್ಠ ಜಾತಿ ಸಮುದಾಯಗಳ ನಡುವೆ ವಿಭಜನೆಯನ್ನು ತಂದಿತ್ತು. ಈ ಗುಂಪಿನಲ್ಲಿರುವ ಸ್ಪೃಶ್ಯ ಸಮುದಾಯಗಳು ಇದನ್ನು ತೀವ್ರವಾಗಿ ವಿರೋಧಿಸಿದ್ದವು. ಈ ಭಿನ್ನತೆಯ ಕಾರಣದಿಂದ ರಾಜ್ಯ ಸರಕಾರ ರಚಿಸಿದ್ದ ಸದಾಶಿವ ಆಯೋಗದ ವರದಿ ಧೂಳು ತಿನ್ನುವಂತಾಗಿತ್ತು. ಇದೀಗ ಸುಪ್ರಿಂಕೋರ್ಟ್ ವರ್ಗೀಕರಣ ಅಥವಾ ಒಳ ಮೀಸಲಾತಿಯನ್ನು ರಾಜ್ಯ ಸರಕಾರಗಳು ಅವಲೋಕಿಸಿ ನಿರ್ಧರಿಸಬಹುದು ಎಂದು ತೀರ್ಪು ನೀಡಿದ ಬಳಿಕ ಬಹುತೇಕ ಪರಿಶಿಷ್ಠ ಜಾತಿಯೊಳಗಿನ ಎಲ್ಲ ಜಾತಿಗಳು ಒಳ ಮೀಸಲಾತಿಗೆ ಒಪ್ಪಿಗೆ ನೀಡಿವೆ.

**ಸಂಕೀರ್ಣ ಹಾಗೂ ಕಗ್ಗಂಟಾದ ಸಮಸ್ಯೆ**

ಕರ್ನಾಟಕದ ಮಟ್ಟಿಗೆ ಈ ಒಳ ಮೀಸಲಾತಿ ಪ್ರಶ್ನೆ ಅತ್ಯಂತ ಸಂಕೀರ್ಣ ಪ್ರಶ್ನೆಯಾಗಿದೆ. ಮೈಸೂರು ಭಾಗದಲ್ಲಿ ಆದಿ ಕರ್ನಾಟಕ (ಎ.ಕೆ) ಎಂದು ಗುರುತಿಸಲ್ಪಡುವ ಪರಿಶಿಷ್ಠ ಜಾತಿ ಬಲಗೈ ಹಳೆ ಮೈಸೂರಿನಾಚೇ ಆದಿ ದ್ರಾವಿಡ(ಎ.ಡಿ) ಚಲವಾದಿ ಎಂದು ದಾಖಲಾತಿಗಳಲ್ಲಿ ಗುರುತಿಸಿದೆ. ಹಾಗೆ ಮುಂಬೈ ಮತ್ತು ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ಆದಿಕರ್ನಾಟಕ (ಎ.ಕೆ) ಎಂದರೆ ಎಡಗೈ ಮಾದಿಗ ಸಮುದಾಯವಾಗಿದೆ. ಈ ಎರಡು ಗುಂಪುಗಳ ನಡುವೆ ಯಾವುದೇ ವೈವಾಹಿಕ ಸಂಬಂಧಗಳು ಏರ್ಪಡುವುದಿಲ್ಲ. ಆಚಾರ, ವಿಚಾರ, ಬೆಡಗುಗಳು, ಒಕ್ಕಲುಗಳು ಮತ್ತು ಆಹಾರ ಪದ್ಧತಿ ಕೂಡ ಭಿನ್ನವಾಗಿವೆ.




ಹಿಂದಿನ ಬಿಜೆಪಿ ಸರ್ಕಾರ ಒಳ ಮೀಸಲಾತಿಗೆ ಶಿಫಾರಸ್ಸು ಮಾಡಿ, ಪರಿಶಿಷ್ಠ ಜಾತಿಗಳಲ್ಲಿ ಬರುವ 101 ಜಾತಿಗಳನ್ನು 4 ವರ್ಗಗಳಾಗಿ ವಿಭಜಿಸಿ, ಒಳಮೀಸಲಾತಿಯನ್ನು ಕ್ರಮವಾಗಿ ಎಡಗೈ ಸಮುದಾಯಕ್ಕೆ ಶೇ. 6ರಷ್ಟು ಬಲಗೈ ಸಮುದಾಯಕ್ಕೆ ಶೇ. 5.5ರಷ್ಟು, ಸ್ಪೃಶ್ಯ ಸಮುದಾಯಗಳಿಗೆ ಶೇ. 4.5ರಷ್ಟು, ಇತರೆ ಸಮುದಾಯಕ್ಕೆ ಶೇ. 1ರಷ್ಟು ವಿಭಜಿಸಿ ಶಿಫಾರಸ್ಸು ಮಾಡಿತ್ತು. ಆದರೆ ಇಲ್ಲೂ ಎಡಗೈ ಬಲಗೈ ಒಳಗಿರುವ ಜಾತಿ, ಉಪ ಜಾತಿ ಪ್ರಶ್ನೆಗಳು ತುಂಬಾ ಗಂಭೀರವಾಗಿವೆ. ಉದಾಹರಣೆಗೆ: ಒಂದು ಕುಟುಂಬದಲ್ಲಿ ಆದಿ ದ್ರಾವಿಡ ಎಂದು ಸರ್ಟಿಫಿಕೇಟ್ ಪಡೆದವರು ಈಗಿನ ಹೊಸ ವರ್ಗೀಕರಣ ಪ್ರಕಾರ ಆದಿ ಕರ್ನಾಟಕ ಎಡಗೈ ಎಂದಾಗಿ, ಶೇ. 6.5ರ ಮೀಸಲಾತಿ ಅಡಿಯಲ್ಲಿ ಬಂದರೆ, ಅದೇ ಮನೆಯಲ್ಲಿ ಚಲವಾದಿ ಎಂದು ಜಾತಿ ಪ್ರಮಾಣ ಪತ್ರ ಪಡೆದವರು ಬಲಗೈ ಎಂದು ಪರಿಗಣಿಸಿ ಶೇ. 5.5ರ ಮೀಸಲಾತಿ ಅಡಿಯಲ್ಲಿ ಬರುವಂತಾಗುತ್ತದೆ. ಹೀಗಾಗಿ ಇಂದು ಯಾವುದೇ ಆಧುನಿಕ ತಂತ್ರಜ್ಞಾನ ಬಳಸಿ ಸರ್ವೆ ಮಾಡಿದರೂ ಜಾತಿ ಹಾಗೂ ಉಪ ಜಾತಿಯೊಳಗಿನ ಮನೋಸ್ಥಿತಿಗಳು ಬದಲಾಗುವುದಿಲ್ಲ ಮತ್ತು ಆಚಾರ ವಿಚಾರ ಹಾಗೂ ಆಹಾರ ಪದ್ದತಿಗಳು ಹಾಗೆ ಮುಂದುವರೆಯುತ್ತವೆ ಹೀಗಾಗಿ ಇದೊಂದು ದೊಡ್ಡ ಹಾಗೂ ಬಗೆಹರಿಸಲು ಅಸಾಧ್ಯವಾದ ಸಮಸ್ಯೆಯಾಗಿಯೇ ಉಳಿಯಲಿದೆ.

ನ್ಯಾಯಮೂರ್ತಿ ಸದಾಶಿವ ಆಯೋಗವು 2011 ರಲ್ಲಿ ಸಂಗ್ರಹಿಸಿದ ಮಾಹಿತಿ ಪ್ರಕಾರ ಪರಿಶಿಷ್ಠ ಜಾತಿಯ ಒಟ್ಟು ಜನಸಂಖ್ಯೆ 96.66 ಲಕ್ಷ, ಇದಾದ ಬಳಿಕ 2011 ರ ಜನಗಣತಿ ಪ್ರಕಾರ ಅದು 1,04,74,992 ಎಂದು ತಿಳಿದು ಬಂದಿತ್ತು. ಆದರೆ ಇದರಲ್ಲಿ 7.29 ಲಕ್ಷ ಜನರು ತಮ್ಮ ದಾಖಲಾತಿಗಳಲ್ಲಿ ಉಪ ಜಾತಿಗಳನ್ನು ನಮೂದಿಸದೇ ಕೇವಲ ಪರಿಶಿಷ್ಠ ಜಾತಿ ಎಂದು ನಮೂದಿಸಿದ್ದಾರೆ. ಇದು ಕೂಡ ಸಮಸ್ಯೆಯನ್ನು ಮತ್ತಷ್ಟು ಸಂಕೀರ್ಣಗೊಳಿಸಿದೆ.

**ಕಾಂಗ್ರೆಸ್–ಬಿಜೆಪಿ ಇಬ್ಬಗೆ ನೀತಿ**

ರಾಜ್ಯದ ಕಾಂಗ್ರೆಸ್ ಸರಕಾರ ಒಳ ಮೀಸಲಾತಿ ಜಾರಿ ಕುರಿತು ಇಬ್ಬಗೆಯ ನೀತಿಯನ್ನು ಅನುಸರಿಸಿತು. ಒಂದುಕಡೆ ಈ ಮೂಲಕ ತಾನು ದಲಿತರ ಪರವಾಗಿದ್ದೇನೆಂದು ಬಿಂಬಿಸಿಕೊಳ್ಳುತ್ತಿದೆ. ಆದರೆ, ಅದೇ ಸಂದರ್ಭದಲ್ಲಿ ಇದೇ ಮೀಸಲಾತಿಯ ಮೂಲಕ ಈ ಸಮುದಾಯಗಳು ಪಡೆಯುತ್ತಿದ್ದ ಶಿಕ್ಷಣ ಮತ್ತು ಉದ್ಯೋಗದ ಫಲಗಳು ಅವರಿಗೆ ಸಿಗದಂತೆ ತನ್ನ ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣದ ನೀತಿಗಳ ಜಾರಿಯ ಮೂಲಕ ಮಾಡುತ್ತಿದೆ. ಹೀಗಾಗಿ, ಶಿಕ್ಷಣದ ಖಾಸಗೀಕರಣವನ್ನು ಪ್ರೋತ್ಸಾಹಿಸುತ್ತದೆ. ಪ್ರಾಥಮಿಕ ಶಾಲೆಗಳನ್ನು ವಿದ್ಯಾರ್ಥಿಗಳ ಕೊರತೆಯ ಹೆಸರಿನಲ್ಲಿ ಮುಚ್ಚುತ್ತಿದೆ. ಸರಕಾರದ ವಿವಿಧ ಇಲಾಖೆಗಳಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ. ಮಾತ್ರವಲ್ಲಾ, ಒಳ ಮತ್ತು ಹೊರ ಗುತ್ತಿಗೆ ಹೆಸರಲ್ಲಿ ಮತ್ತು ಬಿಟ್ಟಿ ದುಡಿಮೆ ಹಾಗು ಗೌರವಧನಕ್ಕೆ ದುಡಿಯಲು ಯುವಜನತೆಯನ್ನು ತಳ್ಳುತ್ತಿದೆ. ಹೀಗಾಗಿ, ಇನ್ನೊಂದು ಕಡೆ ದಲಿತರ ಮೀಸಲಾತಿಯನ್ನೇ ಮೊದಲಿನಿಂದಲೂ ವಿರೋಧಿಸುತ್ತಾ ಬಂದ ಬಿಜೆಪಿಯು ಒಳ ಮೀಸಲಾತಿ ಪ್ರಶ್ನೆ ಬಂದಾಗ ಮಾದಿಗ ಎಡಗೈ ಸಮುದಾಯದ ಹತಾಶೆ ಹಾಗೂ ಅತೃಪ್ತಿಯನ್ನು ತನ್ನ ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿದೆ.

ಒಟ್ಟಿನಲ್ಲಿ ಒಳ ಮೀಸಲಾತಿ ವಿಚಾರವು ಪ್ರಮುಖ ಹಾಗೂ ಅತ್ಯಂತ ಸಂಕೀರ್ಣವಾದ ಪ್ರಶ್ನೆಯಾಗಿದೆ. ಒಮ್ಮೆ ಜಾರಿಗೊಳಿಸಿದ ನಂತರ, ಸೂಕ್ತ ದತ್ತಾಂಶಗಳ ಕೊರತೆ ಅಥವಾ ಅವೈಜ್ಞಾನಿಕ ಸಮೀಕ್ಷೆ ಇತ್ಯಾದಿ ಕಾರಣಗಳಿಗಾಗಿ ಕೋರ್ಟಿನಲ್ಲಿ ನಕಾರಾತ್ಮಕ ಪರಿಣಾಮ ಉಂಟಾಗದಂತೆ ನೋಡಿಕೊಳ್ಳುವುದು, ಅದೇ ವೇಳೆಗೆ ಅನ್ಯಾಯಕ್ಕೊಳಗಾದ ಜನರಿಗೆ ಸಾಮಾಜಿಕ ನ್ಯಾಯವನ್ನು ಖಾತ್ರಿಪಡಿಸುವುದು ಇವತ್ತು ತುರ್ತು ಅಗತ್ಯವೂ ಆಗಿದೆ.

**ಟೇಬಲ್‌ಗಳ ಕೃಪೆ: ಪ್ರಜಾವಾಣಿ**

### ವರ್ಗೀಕರಣವು ಸರ್ವರೋಗ ನಿವಾರಣೆ ಅಲ್ಲ

ಸರ್ವೋಚ್ಚ ನ್ಯಾಯಾಲಯವು ಉಪ–ವರ್ಗೀಕರಣಕ್ಕೆ ಅನುಕೂಲವಾಗಿ ತೀರ್ಪು ನೀಡಿರುವುದರಿಂದ, ಇನ್ನು ಎಸ್ಸಿಗಳಲ್ಲಿನ ಹಿಂದುಳಿದ ಉಪಜಾತಿಗಳ ಸಮಸ್ಯೆಗಳಿಗೆಲ್ಲಾ ಪರಿಹಾರ ದೊರಕಿದೆ ಎಂದು ಯಾರಾದರೂ ಭಾವಿಸಿದರೆ ಅವರಿಗೆ ನಿರಾಶೆ ಎದುರಾಗುತ್ತದೆ. ಹಾಗೆ ನೋಡಿದರೆ ಮೀಸಲಾತಿಯಿಂದ ಮಾತ್ರ ಸಾಮಾಜಿಕ ದಬ್ಬಾಳಿಕೆಯನ್ನು, ದಲಿತರ ಹಿಂದುಳಿದಿರುವಿಕೆಯ ಪರಿಸ್ಥಿತಿಯನ್ನು ಪರಿಹರಿಸಲಾಗದು. ಬದಲಾಗಿ ನಿಜವಾದ ಪರಿಹಾರವು ಹಿಂದುಳಿದಿರುವಿಕೆಗೆ ಕಾರಣವಾದ ಮೂಲ ಅಂಶಗಳನ್ನು ಪರಿಹರಿಸುವುದರಲ್ಲಿ ಇದೆ. ಇಂದಿಗೂ ದಲಿತರನ್ನು ತಳಮಟ್ಟದಲ್ಲಿ ಇರಿಸುವ ಭೂ ಸಂಬಂಧಗಳನ್ನು ಮುರಿಯಬೇಕು. ಭೂಮಿ ವಿತರಣೆ ನಡೆಯಬೇಕು. ಗುಣಮಟ್ಟದ ಶಿಕ್ಷಣ, ಆರೋಗ್ಯ, ಉದ್ಯೋಗ, ಆಹಾರ ಮತ್ತು ವಸತಿ ಇವುಗಳು ಹಕ್ಕುಗಳಾಗಿ ಬದಲಾಗಬೇಕು. ಖಾಸಗಿ ವಲಯದಲ್ಲಿ ಮೀಸಲಾತಿ ಬರಬೇಕು. ಇವುಗಳನ್ನು ಸಾಧಿಸಿದರೆ ಮಾತ್ರ ದಲಿತರು ಮತ್ತು ಇತರ ದುರ್ಬಲ ವರ್ಗಗಳು ಮೀಸಲಾತಿಯ ಮಿತಿಗಳನ್ನು ದಾಟಿ ತಮ್ಮ ಹಿಂದುಳಿದಿರುವಿಕೆಯನ್ನು ಹೋಗಲಾಡಿಸಲು ಶಕ್ತಿ ಬರುತ್ತದೆ.

## ಸಮಾನತೆಯನ್ನು ಬೆಂಬಲಿಸುವ ಎಲ್ಲ ಅತ್ಯುತ್ತಮ.... ಪುಟ 4 ರಿಂದ

ನೋಡುತ್ತೇನೆ. ಇವರಿಬ್ಬರೂ ಮಾರ್ಕ್ಸ್‌ವಾದಿ ಮತ್ತು ಎಡಪಂಥೀಯ ತತ್ವಶಾಸ್ತ್ರವನ್ನು ಸಂಪೂರ್ಣವಾಗಿ ಸ್ವೀಕರಿಸಿದ್ದಾರೆ. ಇಂದು, ನಮ್ಮ ಕಣ್ಣೆದುರೇ ಇರುವ ಪ್ರಮುಖ ಶತ್ರುವನ್ನು ಸೋಲಿಸಲು ಎಡಪಂಥೀಯರ ಒಗ್ಗಟ್ಟು ಅಗತ್ಯವಾಗಿದೆ. ಸಮಾಧಿಗಳನ್ನು ಅಗೆಯುವ ಬಿಜೆಪಿ ರಾಜಕೀಯವು, ಕಣ್ಮರೆಯಾಗಿರುವ ಔರಂಗಜೇಬ್ ಸೇರಿದಂತೆ ಅನೇಕ ಜನರ ಇತಿಹಾಸವನ್ನು ಅಗೆದು ನಮ್ಮನ್ನು ಸಮಾಧಿಗೆ ತಳ್ಳುವ ಕೆಲಸವನ್ನು ಮಾಡುತ್ತಿದೆ.

ಉದ್ಯೋಗ ಕೊಡುವ ಭರವಸೆ ಏನಾಯಿತು ಎಂದು ಕೇಳಿದರೆ, ಜೈಲಿನಲ್ಲಿದ್ದ ಭಗತ್ ಸಿಂಗ್ ಅವರನ್ನು ಕಾಂಗ್ರೆಸ್ಸಿಗರು ನೋಡಲಿಲ್ಲ ಎಂಬಂತಹ ಅಪ್ರಸ್ತುತ ಉತ್ತರಗಳನ್ನು ನೀಡುತ್ತಾರೆ. ಇದು ನಮ್ಮನ್ನು ಗೊಂದಲಗೊಳಿಸುತ್ತದೆ. ಚುನಾವಣೆ ಬಂದಾಗ ಕೆಲವು ಪಕ್ಷಗಳು ಜನರನ್ನು ಭೇಟಿ ಮಾಡಿ ತಮ್ಮ ನೀತಿಗಳನ್ನು ವಿವರಿಸಿ ಮತ ಕೇಳುವುದಿಲ್ಲ. ಬದಲಾಗಿ ತಂತ್ರಗಾರಿಕೆ ಮಾಡುವವರನ್ನು ಭೇಟಿ ಮಾಡಿ ಕೋಟಿಗಟ್ಟಲೆ ಹಣ ನೀಡುತ್ತಾರೆ. ಬಿಜೆಪಿ ಸಚಿವರು ಭ್ರಷ್ಟಾಚಾರದಲ್ಲಿ ಭಾಗಿಯಾಗಿಲ್ಲ ಎನ್ನುತ್ತಾರೆ. ಆದರೆ ಚುನಾವಣಾ ಬಾಂಡ್ ಮೂಲಕ ಸಾವಿರಾರು ಕೋಟಿ ಪಡೆದಿದ್ದಾರೆ. 25 ಸಾವಿರ ಕೋಟಿ ರೂಪಾಯಿಗಳನ್ನು ಚುನಾವಣೆಗೆ ಖರ್ಚು ಮಾಡುವ ಪಕ್ಷ ಗೆದ್ದರೆ ಜನರಿಗೆ ಏನು ಪ್ರಯೋಜನ? ಜನರಿಂದ ಹಣ ಸಂಗ್ರಹಿಸಿ, ಜನರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ, ಚಳುವಳಿಗಳ ಆಧಾರದ ಮೇಲೆ ಮಾತ್ರ ಕಮ್ಯೂನಿಸ್ಟರು ಚುನಾವಣೆಗಳನ್ನು ಎದುರಿಸುತ್ತಾರೆ. ಬಡವರು ಮತ್ತು ಸಾಮಾನ್ಯ ಜನರ ಮನಸ್ಸುಗಳನ್ನು ಎಡಪಂಥೀಯರ ಕಡೆಗೆ ತಿರುಗಿಸಬೇಕು. ಅದಕ್ಕಾಗಿ ನಾವು ಕಲಾ ಪ್ರಕಾರಗಳನ್ನು ಹೆಚ್ಚಾಗಿ ಬಳಸಿಕೊಳ್ಳಬೇಕು. ಜನರ ಹಕ್ಕುಗಳು ಮತ್ತು ಜಾತ್ಯತೀತತೆಯನ್ನು ರಕ್ಷಿಸುವುದು ನಮ್ಮದಾಗಿದೆ. ಕಮ್ಯೂನಿಸ್ಟರು ಮಾತ್ರ ಅದನ್ನು ಮಾಡಲು ಸಾಧ್ಯ. ನಾನು ಯಾವಾಗಲೂ ಕಮ್ಯೂನಿಸ್ಟರ ಪರವಾಗಿ ನಿಲ್ಲುತ್ತೇನೆ ಎಂದು ರಾಜು ಮುರುಗನ್ ಹೇಳಿದರು. ●

## ರಾಜ್ಯಪಾಲರ ವರ್ತನೆ: ಈ ಕಪಾಳ ಮೋಕ್ಷದಿಂದ... ಪುಟ 3 ರಿಂದ

ಸತ್ಯವಾಗುವುದಿಲ್ಲ. ಯಾಕೆಂದರೆ ವಿರೋಧ ಪಕ್ಷದ ಸರ್ಕಾರಗಳನ್ನು ಹಣಿಯಲು ಮತ್ತು ಅವು ಯಶಸ್ವಿಯಾಗಿ ಕಾರ್ಯನಿರ್ವಹಿಸದಂತೆ ಅಡ್ಡಗಾಲು ಹಾಕಿ ಪ್ರಗತಿಯನ್ನು ತಡೆಯಲು ಆ ಮೂಲಕ ಅದರಿಂದ ಉದ್ಭವಿಸುವ ಸನ್ನಿವೇಶದ ರಾಜಕೀಯ ದುರ್ಲಾಭವನ್ನು ಪಡೆಯಲು ಒಕ್ಕೂಟ ನಿರಂತರ ಪ್ರಯತ್ನಿಸುತ್ತಿರುವುದು ಅಷ್ಟೇ ಸತ್ಯವಾದದ್ದು. ಹೀಗಾಗಿ ಸುಪ್ರೀಂಕೋರ್ಟಿನ ತೀರ್ಪು ಕೇವಲ ಆರ್ ಎನ್ ರವಿಯವರಿಗೆ ಮಾತ್ರವಲ್ಲದೆ ಕೇಂದ್ರದ ಭಾರತ ಸರ್ಕಾರ ಮುಖ್ಯವಾಗಿ ಗೃಹ ಇಲಾಖೆಗೆ, ಸಚಿವರಾದ ಅಮಿತ್ ಶಾ ಮತ್ತು ಪ್ರಧಾನಿ ಮೋದಿಯವರಿಗೆ ನೇರವಾಗಿ ಕೊಟ್ಟ ಕಪಾಳ ಮೋಕ್ಷವಾಗಿದೆ. ಅತ್ಯಂತ ಕಠಿಣ ಶಬ್ದಗಳಲ್ಲಿ ರಾಜ್ಯಪಾಲರ ವರ್ತನೆಯನ್ನು ಟೀಕಿಸಿ ಎಚ್ಚರಿಸಿರುವ ಉಚ್ಚ ನ್ಯಾಯಾಲಯದ ಆದೇಶವನ್ನು ಲಕ್ಷಿಸಿ ತಮ್ಮ ಅಧಿಕಾರದ ಸ್ಥಾನದಿಂದ ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ ಅವರು ರಾಜೀನಾಮೆ ಕೊಟ್ಟು ಹೊರ ನಡೆಯುವುದು ಅಗತ್ಯವಾಗಿದೆ. ಅದು ನೈತಿಕ ಹೊಣೆ ನಿಲುವು ಆಗಿರಬೇಕು. ಅಷ್ಟು ಮಾತ್ರವಲ್ಲ ಈ ತೀರ್ಪಿನಿಂದ ಕರ್ನಾಟಕ, ಕೇರಳ ರಾಜ್ಯಗಳನ್ನು ಒಳಗೊಂಡಂತೆ ಎಲ್ಲ ರಾಜ್ಯಪಾಲರು ಸಂವಿಧಾನಕ್ಕೆ ಬದ್ಧವಾಗಿ ಕೆಲಸ ಮಾಡುವುದು ಕೂಡ ಅತ್ಯಗತ್ಯವಿದೆ. ಇದು ಎಚ್ಚರಿಕೆಯ ಗಂಟೆ.

ಸುಪ್ರೀಂಕೋರ್ಟಿನ ಈ ತೀರ್ಪು ಸಂವಿಧಾನಬದ್ಧ ಆಡಳಿತವನ್ನು ಎತ್ತಿ ಹಿಡಿದಿದೆ ಮಾತ್ರವಲ್ಲ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯ ಸರ್ಕಾರಗಳ ಮತ್ತು ವಿಶೇಷವಾಗಿ ಚುನಾಯಿತವಾದ ಸರ್ಕಾರಗಳ ಹಾಗೂ ಜನತೆಯ ಪ್ರಜಾಸತ್ತಾತ್ಮಕ ಸಾರ್ವಭೌಮತ್ವ ಹಕ್ಕಿನ ರಕ್ಷಣೆಯ ಪ್ರತಿಪಾದನೆ ಆಗಿದೆ. ಈ ಬೆಳಕಿನಲ್ಲಿ ಕೇಂದ್ರ ಮತ್ತು ರಾಜ್ಯಗಳ ಸಂಬಂಧಗಳು ಮತ್ತು ಒಕ್ಕೂಟ ಸರ್ಕಾರದ ಸರ್ವಾಧಿಕಾರತ್ವ ಮತ್ತು ದ್ವೇಷದ ರಾಜಕಾರಣಕ್ಕೆ ತಕ್ಕ ಪೆಟ್ಟು ಕೊಟ್ಟಂತಾಗಿದೆ. ಇದರಿಂದ ಮೋದಿ ಮತ್ತು ಶಾರವರ ಸರ್ಕಾರ ಪಾಠ ಕಲಿಯುವುದೇ? ●




# ಮುನ್ನಡೆಯ ದಾರಿ ತೋರಿದ ಪಕ್ಷದ ಮಹಾಧಿವೇಶನ

**ಪ್ರಕಾಶ್ ಕಾರತ್**

ಮಧುರೆಯಲ್ಲಿ ಏಪ್ರಿಲ್ 6ರಂದು ಬೃಹತ್ ರ‍್ಯಾಲಿಯೊಂದಿಗೆ ಮುಕ್ತಾಯವಾದ ಸಿಪಿಐ(ಎಂ) 24ನೇ ಮಹಾಧಿವೇಶನ ಅನೇಕ ದೃಷ್ಟಿಯಲ್ಲಿ ತುಂಬಾ ಮಹತ್ವದ್ದಾಗಿದೆ. ಕಾರ್ಯಸೂಚಿ ಮತ್ತು ಕಾಂಗ್ರೆಸ್‌ನ ಚರ್ಚೆಗಳ ವಿಷಯ ಎರಡರಲ್ಲೂ ಬದಲಾವಣೆಗಳಿದ್ದವು.

ಎಲ್ಲಕ್ಕಿಂತಲೂ ಮೊದಲು, 23ನೇ ಮಹಾಧಿವೇಶನ ಅಂಗೀಕರಿಸಿದ ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯ ಅನುಷ್ಠಾನವನ್ನು ಪರಿಶೀಲಿಸಿದ ರಾಜಕೀಯ ಪರಿಶೀಲನೆ ವರದಿಯನ್ನು (ಪೊಲಿಟಿಕಲ್ ರಿವ್ಯೂ ರಿಪೋರ್ಟ್) ಪ್ರತಿನಿಧಿಗಳಿಂದ ಚರ್ಚೆಗಾಗಿ ಕರಡು ರಾಜಕೀಯ ಗೊತ್ತುವಳಿಯೊಂದಿಗೆ ಮಂಡಿಸಲಾಗಿತ್ತು. ಸಾಮಾನ್ಯವಾಗಿ ರಾಜಕೀಯ ಪರಿಶೀಲನೆಯು ರಾಜಕೀಯ–ಸಂಘಟನಾತ್ಮಕ ವರದಿಯ ಭಾಗವಾಗಿರುತ್ತದೆ. ರಾಜಕೀಯ ಗೊತ್ತುವಳಿ ಅಂಗೀಕಾರವಾದ ನಂತರ ಅದನ್ನು ಚರ್ಚಿಸಲಾಗುತ್ತದೆ.

ರಾಜಕೀಯ ಪರಿಶೀಲನಾ ವರದಿಯು ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆಯನ್ನು ಹೇಗೆ ಅನುಷ್ಠಾನಗೊಳಿಸಲಾಗಿದೆ ಎನ್ನುವುದನ್ನು ಹಾಗೂ ಈ ಅನುಭವದ ಗಟ್ಟಿ ಹಾಗೂ ದುರ್ಬಲ ಅನುಭವಗಳನ್ನು ಆಳವಾಗಿ ಪರಿಶೀಲಿಸಿದೆ.

ಪಕ್ಷದ ಸ್ವತಂತ್ರ ಬಲದ ಬೆಳವಣಿಗೆಯನ್ನು ತಡೆಯುವ ಅಂಶಗಳು ಯಾವುದು ಎಂಬುದನ್ನು ಅರ್ಥಮಾಡಿಕೊಳ್ಳಲು ಅದು ಪಕ್ಷದ ಘಟಕಗಳು ಮತ್ತು ಕಾರ್ಯಕರ್ತರಿಗೆ ನೆರವಾಗಿದೆ. 23ನೇ ಮಹಾಧಿವೇಶನದ ನಂತರ ಪಕ್ಷದ ಸದಸ್ಯತ್ವವು 33,252 (ಶೇ. 3.37) ಹಾಗೂ ಎಲ್ಲ ಸಾಮೂಹಿಕ ಸಂಘಟನೆಗಳ ಸದಸ್ಯತ್ವವು 64 ಲಕ್ಷದಷ್ಟು ಹೆಚ್ಚಾಗಿದ್ದರೂ, ಪಕ್ಷದ ಸ್ವತಂತ್ರ ಬಲ ಮತ್ತು ರಾಜಕೀಯ ಪ್ರಭಾವ ಗಣನೀಯವಾಗಿ ಬೆಳೆದಿಲ್ಲ. ಆದ್ದರಿಂದ, ಪಕ್ಷದ ಬಲ ಮತ್ತು ಸಾಮೂಹಿಕ ನೆಲೆಗಟ್ಟನ್ನು ಹೆಚ್ಚಿಸುವ ವಿಚಾರವೇ ಕರಡು ರಾಜಕೀಯ ಗೊತ್ತುವಳಿ ಮತ್ತು ಸಂಘಟನಾ ಕರಡು ವರದಿ–ಇವೆರಡರ ಮೇಲಿನ ಚರ್ಚೆಯ ಮುಖ್ಯಾಂಶವಾಗಿತ್ತು.

ಬಿಜೆಪಿ–ಆರ್‌ಎಸ್‌ಎಸ್‌ಅನ್ನು ಪ್ರತ್ಯೇಕಿಸುವ ಹಾಗೂ ಸೋಲಿಸುವ ರಾಜಕೀಯ ಗೊತ್ತುವಳಿಯ ಪ್ರಮುಖ ಕಾರ್ಯಭಾರವು ಸಿಪಿಐ(ಎಂ) ಮತ್ತು ಎಡಪಕ್ಷಗಳ ಬಲವನ್ನು ಹೆಚ್ಚಿಸುವ ಈ ಅನಿವಾರ್ಯತೆಗೆ ಸಂಬಂಧಿಸಿದ್ದಾಗಿದೆ. ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಒಕ್ಕೂಟ ತತ್ವದ ರಕ್ಷಣೆಗಾಗಿ ಬಿಜೆಪಿ ವಿರುದ್ಧ ಹೋರಾಡಲು ವಿಶಾಲ ಏಕತೆಯನ್ನು ಕಟ್ಟಲು ಸಿಪಿಐ(ಎಂ) ಶ್ರಮಿಸುವುದನ್ನು ಮುಂದುವರಿಸುತ್ತದೆ ಹಾಗೂ ಎಲ್ಲ ಜನತಾಂತ್ರಿಕ ಮತ್ತು ಜಾತ್ಯತೀತ ಶಕ್ತಿಗಳೊಂದಿಗೆ ಸಹಕರಿಸುತ್ತದೆ. ಅದೇ ಹೊತ್ತಿಗೆ ಪಕ್ಷದ ರಾಜಕೀಯ, ಸೈದ್ಧಾಂತಿಕ ಮತ್ತು ಸಂಘಟನಾತ್ಮಕ ಕೆಲಸವನ್ನು ವಿಸ್ತರಿಸಲು ಅದು ಆದ್ಯತೆ ನೀಡುತ್ತದೆ.

ಈ ಸಂಬಂಧದಲ್ಲಿ, ಮಹಾಧಿವೇಶನದ ಚರ್ಚೆಗಳು ಮತ್ತು ಅಂಗೀಕರಿಸಲಾದ ರಾಜಕೀಯ ಗೊತ್ತುವಳಿಯು ಹಿಂದೂತ್ವ ಸಿದ್ಧಾಂತ ಮತ್ತು ಬಿಜೆಪಿ–ಆರ್‌ಎಸ್‌ಎಸ್‌ನ ಕೋಮುವಾದಿ ರಾಜಕೀಯದ ವಿರುದ್ಧ ಹೇಗೆ ಹೋರಾಟ ನಡೆಸಬೇಕು ಎನ್ನುವುದಕ್ಕೆ ಸೂಕ್ತ ಮಾರ್ಗದರ್ಶನ ನೀಡಿದೆ. ಪಕ್ಷವು ಎಲ್ಲ ಹಂತಗಳಲ್ಲಿ ರಾಜಕೀಯ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸೈದ್ಧಾಂತಿಕ ಕೆಲಸವನ್ನು ತೀವ್ರಗೊಳಿಸಲಿದೆ. ಹಿಂದೂತ್ವ–ಕಾರ್ಪೊರೇಟ್ ಆಡಳಿತವು ನವ–ಫ್ಯಾಸಿಸ್ಟ್‌ವಾದಿ ಲಕ್ಷಣಗಳನ್ನು ಪ್ರದರ್ಶಿಸುತ್ತಿದೆ. ಹಾಗಾಗಿ ಅದು ಈ ಹೋರಾಟದ ತುರ್ತನ್ನು ತೋರಿಸುತ್ತದೆ.

ಸುಸ್ಥಿರವಾದ ಆಧಾರದಲ್ಲಿ ಸ್ಥಳೀಯ ಹೋರಾಟಗಳನ್ನು ಬೆಳೆಸಲು ಒತ್ತು ನೀಡುವುದರೊಂದಿಗೆ ವರ್ಗ ಮತ್ತು ಸಾಮೂಹಿಕ ಹೋರಾಟಗಳನ್ನು ತೀವ್ರಗೊಳಿಸಬೇಕೆನ್ನುವುದು ರಾಜಕೀಯ–ಕಾರ್ಯತಂತ್ರಾತ್ಮಕ ಧೋರಣೆ ನೀಡಿದ ಇನ್ನೊಂದು ನಿರ್ದೇಶನವಾಗಿದೆ. ಈ ಸ್ಥಳೀಯ ಹೋರಾಟಗಳೇ ಜನಸಾಮಾನ್ಯರೊಂದಿಗೆ ಪಕ್ಷವನ್ನು ಬೆಸೆಯುವ ಸಾಧನವಾಗುತ್ತದೆ ಹಾಗೂ ತನ್ನ ಪ್ರಭಾವವನ್ನು ರಾಜಕೀಯವಾಗಿ ಗಟ್ಟಿಗೊಳಿಸಲು ನೆರವಾಗುತ್ತದೆ. ಭೂಮಾಲೀಕರು–ಶ್ರೀಮಂತ ಬಂಡವಾಳಶಾಹಿ ರೈತರು–ಗುತ್ತಿಗೆದಾರರು ಮತ್ತು ದೊಡ್ಡ ವರ್ತಕರನ್ನು ಒಳಗೊಂಡ ಗ್ರಾಮೀಣ ಶ್ರೀಮಂತರ ಮೈತ್ರಿಯ ವಿರುದ್ಧ ಗ್ರಾಮೀಣ ಬಡವರು ನಡೆಸುವ ಹೋರಾಟವು ಗ್ರಾಮೀಣ ಪ್ರದೇಶದಲ್ಲಿನ ಮೂಲ ವರ್ಗ ಹೋರಾಟವಾಗಿರುತ್ತದೆ.

ಸಂಘಟನಾ ವರದಿಯು ಪಕ್ಷದ ಸ್ವತಂತ್ರ ಬಲ ಮತ್ತು ಸಾಮೂಹಿಕ ನೆಲೆಯನ್ನು ಹೆಚ್ಚಿಸುವ ಕುರಿತ ಮುಖ್ಯ ವಿಚಾರವನ್ನು ಚರ್ಚಿಸಿದೆ. ಪಕ್ಷದ ಸದಸ್ಯತ್ವದ ಗುಣಮಟ್ಟವನ್ನು ಸುಧಾರಿಸಲು ಹಾಗೂ ಮೂಲ ಘಟಕ, ಅಂದರೆ ಶಾಖೆಗಳನ್ನು ಕ್ರಿಯಾಶೀಲಗೊಳಿಸಲು ಕ್ರಮಗಳನ್ನು ಕೈಗೊಳ್ಳುವುದು ಈ ನಿಟ್ಟಿನಲ್ಲಿನ ಪ್ರಮುಖ ಅಂಶಗಳಾಗಿವೆ. ಈ ಕಾರ್ಯಭಾರಗಳಲ್ಲಿ ಸ್ವಲ್ಪ ಪ್ರಗತಿ ಸಾಧಿಸಲಾಗಿದೆಯಾದರೂ ಮಾಡಬೇಕಾದ್ದು ಬಹಳಷ್ಟಿದೆ. ಹೆಚ್ಚು ಮಹಿಳೆಯರು ಮತ್ತು ಯುವಜನರನ್ನು ಪಕ್ಷಕ್ಕೆ ಸೇರ್ಪಡೆ ಮಾಡಬೇಕೆನ್ನುವುದು ಸದಸ್ಯತ್ವ ಗುಣಮಟ್ಟ ಸುಧಾರಣೆಯ ಒಂದು ಪ್ರಮುಖ ವಿಚಾರವಾಗಿದೆ. ಪಕ್ಷದ ಒಟ್ಟು ಸದಸ್ಯರಲ್ಲಿ ಮಹಿಳೆಯರ ಪಾಲು ಶೇ. 20.2 ಆಗಿದೆ. ಸಂಘಟನೆ ಕುರಿತ ಕೋಲ್ಕತಾ ಪ್ಲೀನಮ್ ನಿಗದಿಪಡಿಸಿದ ಶೇ. 25ನ್ನು ಸಾಧಿಸುವುದು ಮುಂದಿನ ಹೆಜ್ಜೆಯಾಗಿದೆ.

ಯುವಜನರನ್ನು ಪಕ್ಷದತ್ತ ದೊಡ್ಡ ಪ್ರಮಾಣದಲ್ಲಿ ಸೆಳೆಯುವುದು ಪಕ್ಷದ ಭವಿಷ್ಯದ ಬೆಳವಣಿಗೆಯಲ್ಲಿ ಒಂದು ನಿರ್ಣಾಯಕ ಅಂಶವಾಗಿದೆ. ಪಕ್ಷದ ಕೇರಳ ಘಟಕ ಈ ವಿಚಾರದಲ್ಲಿ ಅದ್ಭುತ ಕೆಲಸ ಮಾಡಿದೆ. ರಾಜ್ಯದ ಒಟ್ಟು ಸದಸ್ಯತ್ವದಲ್ಲಿ ಶೇ. 29ರಷ್ಟು ಮಂದಿ 31 ವರ್ಷ ಅಥವಾ ಅದಕ್ಕಿಂತ ಕೆಳಗಿನ ವಯಸ್ಸಿನವರಾಗಿದ್ದಾರೆ. ಯುವಜನ–ಕೇಂದ್ರಿತ ರಾಜಕೀಯ ವೇದಿಕೆಯನ್ನು ರೂಪಿಸಲು ಹಾಗೂ ಸಮಾಜವಾದವೇ ನಿಜವಾದ ಪರ್ಯಾಯ ಎನ್ನುವುದನ್ನು ಯುವಜನರ ನಡುವೆ ಪ್ರಚಾರ ಮಾಡಬೇಕೆಂದು ರಾಜಕೀಯ ಗೊತ್ತುವಳಿ ಮತ್ತು ಸಂಘಟನಾ ವರದಿಗಳೆರಡೂ ಕರೆ ನೀಡಿವೆ.

**30 ಹೊಸ ಮುಖಗಳು**

ಮಹಾಧಿವೇಶನ ಆಯ್ಕೆ ಮಾಡಿರುವ 85 ಸದಸ್ಯರ ಹೊಸ ಕೇಂದ್ರ ಸಮಿತಿಯಲ್ಲಿ 30 ಹೊಸಬರಿದ್ದಾರೆ. 17 ಮಹಿಳೆಯರನ್ನು ಆಯ್ಕೆ ಮಾಡುವ ಮೂಲಕ ಸಮಿತಿಯಲ್ಲಿ ಮಹಿಳೆಯರಿಗೆ ಶೇ. 20 ಮೀಸಲಾತಿ ಕಲ್ಪಿಸಬೇಕೆಂಬ ತತ್ವವನ್ನು ಕೂಡ ಪೂರೈಸಲಾಗಿದೆ. ಹೊಸ ಕೇಂದ್ರ ಸಮಿತಿಯು 18 ಸದಸ್ಯರ ಪಾಲಿಟ್‌ಬ್ಯೂರೋ ಮತ್ತು ಹೊಸ ಪ್ರಧಾನ ಕಾರ್ಯದರ್ಶಿಯಾಗಿ ಎಂ.ಎ.ಬೇಬಿಯವರನ್ನು ಆಯ್ಕೆ ಮಾಡಿದೆ. ಮಹಾಧಿವೇಶನ ನಿಗದಿಪಡಿಸಿದ ರಾಜಕೀಯ ಮತ್ತು ಸಂಘಟನಾತ್ಮಕ ಕಾರ್ಯಭಾರಗಳನ್ನು ಕಾರ್ಯಗತಗೊಳಿಸಲು ಈ ನವೀಕೃತ ನಾಯಕತ್ವ ಮತ್ತು ತಂಡದ ಮೇಲೆ ಅವಲಂಬಿಸಬಹುದಾಗಿದೆ.

ಪಕ್ಷದ ತಮಿಳುನಾಡು ರಾಜ್ಯ ಸಮಿತಿಯು 24ನೇ ಮಹಾಧಿವೇಶನವನ್ನು ಸಮರ್ಥವಾಗಿ ನಡೆಸಿಕೊಟ್ಟಿದೆ. ಮಹಾಧಿವೇಶನದ ಸಿದ್ಧತೆಗಾಗಿ ಪಕ್ಷದ ಸದಸ್ಯರು ಎಲ್ಲ ಮಟ್ಟಗಳಲ್ಲಿ ಉತ್ಸಾಹದಿಂದ ತೊಡಗಿಸಿಕೊಂಡಿದ್ದರು. ಈ ಮಹಾಧಿವೇಶನವು ಮುನ್ನಡೆಗೆ ಹಾದಿ ಮುಕ್ತವಾಗಿದೆ ಎಂದು ಪ್ರತಿನಿಧಿಗಳಲ್ಲಿ ವಿಶ್ವಾಸ ಮತ್ತು ದೃಢ ಸಂಕಲ್ಪವನ್ನು ತುಂಬಿದೆ.

*ಅನು: ವಿಶ್ವ*




**ಸಿಪಿಐ(ಎಂ) 24ನೇ ಮಹಾಧಿವೇಶನದ ಕರ್ನಾಟಕದ ಪ್ರತಿನಿಧಿಗಳು ಮತ್ತು ವೀಕ್ಷಕರು**

**ಪ್ರತಿನಿಧಿಗಳು:** 1.ಪ್ರಕಾಶ್ ಕೆ., 2.ನೀಲಾ ಕೆ. (ಮ), 3.ಮೀನಾಕ್ಷಿ ಸುಂದರಂ 4.ವರಲಕ್ಷ್ಮಿ ಎಸ್. (ಮ), 5.ಗೋಪಾಲಕೃಷ್ಣ ಅರಳಹಳ್ಳಿ, 6.ಸೈಯದ್ ಮುಜೀಬ್, 7.ಚಂದ್ರಪ್ಪ ಹೊಸ್ಕೇರಾ, 8.ಮುನೀರ್ ಕಾಟಿಪಳ್ಳ, 9.ಸಿದ್ದಗಂಗಪ್ಪ, 10.ಮಂಜುನಾಥ್ ಬಿ.ಎನ್. 11.ಯಶವಂತ್ ಟಿ.

**ವೀಕ್ಷಕರು:** 1.ದೇವಿ (ಮ), 2.ನಿರುಪಾದಿ ಬೆಣಕಲ್

# ಹಣದುಬ್ಬರದ ಅಡಿಯಲ್ಲಿ ನರಳುತ್ತಿರುವವರ ಮೇಲೆ ಈಗ ಅನಿಲ ಸಿಲಿಂಡರ್‌ಗಳ ಬೆಲೆ ಏರಿಕೆಯ ಹೊರೆ

ಕೇಂದ್ರ ಸರಕಾರವು ಅಡುಗೆ ಅನಿಲದ ಬೆಲೆಯನ್ನು ತೀವ್ರವಾಗಿ ಹೆಚ್ಚಳಗೊಳಿಸಿ ಜನತೆಯ ಮೇಲೆ ಬೆಲೆಯೇರಿಕೆಯ ಬರೆ ಎಳೆಯಲಾಗಿದೆ. ರೂ.50 ಪ್ರತಿ ಸಿಲಿಂಡರಿಗೆ ಹೆಚ್ಚಳಗೊಳಿಸಲಾಗಿದೆ. ಇದನ್ನು ಸಿಪಿಐಎಂ ಪಕ್ಷ ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ. ಈ ಬೆಲೆಯೇರಿಕೆಯು ಸಾಮಾನ್ಯ ಮತ್ತು ರಿಯಾಯಿತಿದಾರರಿಗೂ ಇಬ್ಬರಿಗೂ ಅನ್ವಯಿಸಲಾಗಿದೆ. ಇದು ಜನರ ಮೇಲೆ ರೂ.7000 ಕೋಟಿ ಹೊರೆ ಹೊರೆಸಿದೆ. ಪೆಟ್ರೋಲ್ ಮತ್ತು ಡಿಜೆಲ್ ಎರಡರ ಮೇಲೂ ರೂ.32000 ಕೋಟಿಯಷ್ಟು ಅಬಕಾರಿ ಸುಂಕವನ್ನು ಹೆಚ್ಚಳ ಮಾಡಿದೆ.

ಹಣದುಬ್ಬರದಿಂದ ಈಗಾಗಲೇ ಜನರ ಜೀವನವು ಕಷ್ಟದಲ್ಲಿದೆ. ಈ ಬೆಲೆಯೇರಿಕೆಯಿಂದ ಜನತೆಯ ಬದುಕು ಮತ್ತಷ್ಟು ಕಷ್ಟಕ್ಕೆ ಈಡಾಗಲಿದೆ. ತೈಲ ಮತ್ತು ಅನಿಲದ ಅಂತರರಾಷ್ಟ್ರೀಯ ಬೆಲೆ ಕುಸಿತದ ಲಾಭವನ್ನು ಜನರಿಗೆ ಮಾಡುವ ಬದಲು ಸರಕಾರವು ಆ ಲಾಭವನ್ನು ತಾನು ಪಡೆದು ಜನರಿಗೆ ಇನ್ನಷ್ಟು ಹೆಚ್ಚುವರಿ ಬೆಲೆಯೇರಿಕೆಯ ಹೊರೆಯನ್ನು ಹಾಕುತ್ತಿದೆ. ವಿಶೇಷ ಅಬಕಾರಿ ಸುಂಕದ ಹೆಸರಿನಲ್ಲಿ ಒಕ್ಕೂಟದ ತತ್ವಗಳನ್ನು ಗಾಳಿಗೆ ತೂರಿ ತನ್ನ ಲಾಭವನ್ನು ಹೆಚ್ಚು ಮಾಡಿಕೊಳ್ಳುವ ಕೇಂದ್ರ ಸರಕಾರದು ಧೋರಣೆಯು ಜನವಿರೋಧಿಯಾಗಿದೆ ಎಂದಿದೆ.

ರಾಜ್ಯ ಸರಕಾರವೂ ಹಾಲಿನ ಬೆಲೆಯನ್ನು ಏರಿಕೆ ಮಾಡಿದೆ. ಹಾಲು, ನೀರು, ತ್ಯಾಜ್ಯ ವಿಲೇವಾರಿ ಮತ್ತಿರ ನಾಗರೀಕ ಸೌಲಭ್ಯಗಳ ತೆರಿಗೆಯನ್ನು ಹೆಚ್ಚಳ ಮಾಡಿದೆ. ಈಗಾಗಲೆ ಮೆಟ್ರೊ ದರ ಹೆಚ್ಚಳ ಮಾಡಿದೆ. ಹೀಗೆ ಬಿಜೆಪಿ ಮತ್ತು ಕಾಂಗ್ರೆಸ್ ಸರಕಾರಗಳು ನವ ಉದಾರವಾದಿ ನೀತಿಗಳನ್ನು ವೇಗವಾಗಿ ಜಾರಿ ಮಾಡುತ್ತಿವೆ. ಇದು ಜನತೆಯನ್ನು ಆರ್ಥಿಕವಾಗಿ ಸುಲಿಗೆ ಮಾಡುವ ಜನವಿರೋಧಿ ಕ್ರಮವಾಗಿದೆ. ಆದರೆ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳೂ ಪರಸ್ಪರ ಬೆಲೆಯೇರಿಕೆಯ ಬಗ್ಗೆ ಕೆಸರೆರಚಾಟದಲ್ಲಿ ತಲ್ಲೀನವಾಗಿವೆ. ಮತ್ತು ಜನತೆಯ ಹಿತವನ್ನು ಮೂಲೆಗುಂಪು ಮಾಡುತ್ತಿವೆ. ಸಿಪಿಐಎಂ ಪಕ್ಷವು ಎರಡೂ ಪಕ್ಷಗಳ ಈ ಜನವಿರೋಧಿ ನಡೆಯನ್ನು ತೀವ್ರವಾಗಿ ಖಂಡಿಸುತ್ತದೆ ಮತ್ತು ಬೆಲೆ ಏರಿಕೆಗಳನ್ನು ಕೂಡಲೇ ಹಿಂಪಡೆಯಬೇಕೆಂದು ಆಗ್ರಹಿಸಿದೆ.

# ಬೆವರ ಲೋಕದೆಡೆಗೆ ಸೆಳೆದ ಜನಮಾನಸ ಶ್ರಮಿಕರ ಕೆಂಬಾವುಟದಲ್ಲಿ ಕೆಂಪಾದ ತಮಿಳುನಾಡ ಇಳೆ




**ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ವಾದಿ)ದ 24ನೇ ಚಾರಿತ್ರಿಕ ಮಹಾಧಿವೇಶನವು ತಮಿಳುನಾಡಿನ ಮಧುರೈನಲ್ಲಿ ಯಶಸ್ವಿಯಾಗಿ ಜರುಗಿತು. ಪ್ರತಿನಿಧಿಯಾಗಿ ಭಾಗವಹಿಸಿದ ಕಾಮ್ರೇಡ್ ಕೆ.ನೀಲಾ ಅವರ ನೇರ ಅನುಭವಗಳು ಮತ್ತು ಕಲಾಪಗಳ ಹೃದಯಸ್ಪರ್ಶಿ ಅವಲೋಕನ ಇಲ್ಲಿದೆ.**

"ಜಗತ್ತಿನ ಶ್ರಮಿಕರೆ ಒಂದಾಗಿ. ಹೋರಾಟ ಮಾಡಿದರೆ ಕಳೆದುಕೊಳ್ಳಲು ನಿಮ್ಮಲ್ಲೇನೂ ಇಲ್ಲ. ಕಳೆದುಕೊಳ್ಳುವಿರಿ ಗುಲಾಮಗಿರಿ ಬೇಡಿಗಳನ್ನು ಮತ್ತು ಗೆಲ್ಲಲೊಂದು ಜಗತ್ತೇ ನಿಮಗಿದೆ." ಮಾನವರ ಇತಿಹಾಸವು ಸಂಘರ್ಷದ ಇತಿಹಾಸವೇ ಆಗಿದೆ. ತ್ಯಾಗ ಬಲಿದಾನಗಳಲ್ಲಿ ಸ್ವಾತಂತ್ರ್ಯದ ಘಮವು ಹಬ್ಬಿದೆ. ದುಡಿಮೆಗಾರರ ಶ್ರಮದಿಂದ ಅರಳಿವೆ. ಜಗತ್ತಿನ ಬದಲಾವಣೆ ಸಕಲ ಕಾರ್ಯ ಕಾರಣಗಳು. ಶ್ರಮದ ಲೂಟಿಕೋರರನ್ನು ಗುರುತಿಸುವ ಮತ್ತು ಶ್ರಮಿಕರ ಧೀಶಕ್ತಿಯನ್ನು ಶ್ರಮಿಕರಿಗೆ ಮನನ ಮಾಡಿಸುವ ನಿತ್ಯ ನಿರಂತರ ಕಾಯಕದಲ್ಲಿ ತಲ್ಲೀನರಾದ ಸಂಗಾತಿಗಳ ಚರಿತ್ರೆಯು ಅಗಾಧವಾದದ್ದು. ಈ ಕ್ರಾಂತಿ ಕಾರ್ಯದಲ್ಲಿ ನೆಲಕ್ಕೆ ಹರಿದ ರಕ್ತವೆಷ್ಟೊ...

ತಮಿಳುನಾಡಿನ ನೆಲಕ್ಕೆ ಹೆಜ್ಜೆ ಇಡುವ ಮನ್ನ ಮೊದಲ ಮೇ ದಿನವನ್ನು ಆಚರಿಸಿದ ಕಾಂ. ಎಂ.ಸಿಂಗಾರವೇಲು ನೆನಪಾದರು. ತಾಷ್ಕೆಂಟ್‌ನಲ್ಲಿ 1920 ಅಕ್ಟೋಬರ್ 17ರಂದು ನಡೆದ ಸಭೆಯಲ್ಲಿ ಭಾಗವಹಿಸಿದ ಕಾಂ. ಎಂ.ಬಿ.ಟಿ.ಆಚಾರ್ಯ ನೆನಪಾದರು. ಎಲ್ಲಕ್ಕೂ ಮಿಗಿಲಾಗಿ 1968ರಲ್ಲಿ ಮೇಲ್ವರ್ಗದವರು ವೆನ್ಮಣಿ ಗ್ರಾಮದಲ್ಲಿ ಸಾಮೂಹಿಕವಾಗಿ 44 ಜನ ದಲಿತರನ್ನು ಸುಟ್ಟು ಭಸ್ಮ ಮಾಡಿದ ಪ್ರಕರಣವು ಮನಃಪಟಲದಲ್ಲಿ ಹಾಯ್ದು ಕಣ್ಣು ತೇವವಾಯಿತು. ಸುಟ್ಟು ಕರಕಲಾದವರಲ್ಲಿ ಹತ್ತು ಎಳೆ ಮಕ್ಕಳು ಮತ್ತು 20 ಜನ ಮಹಿಳೆಯರಿದ್ದರು. ಒಂದು ವರ್ಷದ ಎರಡು ಕೂಸುಗಳನ್ನೊಳಗೊಂಡು 44 ಜನರನ್ನು ಸುಟ್ಟು ಹಾಕಿದ ಕ್ರೌರ್ಯವನ್ನು ನೆನೆದು ಮನಸು ಭಾರವಾಯಿತು. ಅಮಾನವೀಯ ಪಾಳೇಗಾರಿಕೆ, ಅಸಹನೀಯ ಜಾತಿ ವ್ಯವಸ್ಥೆಯಿಂದ ತಮಿಳುನಾಡು ನರಳುವಾಗ ಕೆಂಬಾವುಟವು ಹೋರಾಟದ ಕಿಚ್ಚನ್ನು ಪ್ರಜ್ವಲಿಸುತ್ತಾ ಬದುಕುವ ಛಲವನ್ನು, ಸ್ವಾಭಿಮಾನದ ಕೆಚ್ಚನ್ನು, ಹೋರಾಡುವ ಬಲವನ್ನು ತುಂಬಿಕೊಟ್ಟಿತು.

ಜಗತ್ತನ್ನು ಸಮಾನತೆಯತ್ತ ಬದಲಾಯಿಸುವ ಮಾರ್ಗವನ್ನು ಅವಿರತ ಮತ್ತು ಯೋಜನಾಬದ್ಧ ಕ್ರಾಂತಿಕಾರಕತ್ವದ ಮೂಲಕ ತೆರೆದು ತೋರಿದ ಕಾಮ್ರೇಡ್ ಲೆನಿನ್ ಮತ್ತು ಸಂಗಾತಿಗಳು ಅಂದಿಗೆ ಭೂಮಂಡಲವನ್ನೇ ಸೆಳೆದಿದ್ದು ಹೌದು. ಇದರಿಂದ ಶೋಷಣೆ ಮಾಡುವವರಿಗೆ, ಅಸಮಾನತೆಯ ವ್ಯವಸ್ಥೆಯನ್ನು ಕಾಪಾಡುತ್ತಾ ಶ್ರಮವನ್ನು ಬಿಟ್ಟಿಯಾಗಿ ಪಡೆಯುವವರಿಗೆ ನಡುಕ ಹುಟ್ಟಿದ್ದರಿಂದ, ಶೋಷಣೆಯನ್ನು ವಿಭಿನ್ನ ಸ್ವರೂಪದಲ್ಲಿ ವಿವಿಧ ಆಯಾಮದಲ್ಲಿ ಹೆಚ್ಚೆಚ್ಚು ವ್ಯಾಪ್ರತೆಯಿಂದ ಮಾಡಲಾಯಿತು. ಆದರೆ ಎಂಥದೇ ಕ್ರೌರ್ಯದಿಂದ ಎರಗುವ ಶೋಷಣೆಯನ್ನು ಹಿಮ್ಮೆಟ್ಟಿಸಲು ಇರುವ ಏಕೈಕ ಮಾರ್ಗವೆಂದರೆ, ಅದು ಕಮ್ಯೂನಿಸಂ ತತ್ವ ಮತ್ತು ಶ್ರಮಿಕರನ್ನು ಒಗ್ಗಟ್ಟಾಗಿಸಿ ಹೋರಾಡುವ ಸಂಘಟನಾತ್ಮಕ ಶಕ್ತಿ.




ಭಾರತದ ಕಮ್ಯೂನಿಸ್ಟ್ ಚಳುವಳಿಯು ಈ ವಿಮೋಚನೆಯ ಅಸ್ತ್ರದಿಂದ ದೇಶದೆಲ್ಲೆಡೆ ಬೆವರಿಗೆ ಬೆಲೆಯನ್ನು ಪಡೆಯಲು ಕಲಿಸಿತು. ಉಳ್ಳವರು ಶ್ರಮಿಕರ ದನಿಯನ್ನು ದೌರ್ಜನ್ಯದಿಂದ ಅಡಗಿಸಿದ್ದರು. ಕಮ್ಯೂನಿಸ್ಟ್ ಅರಿವಿನಿಂದಾಗಿ ಅವರ ದನಿಯು ಗುಡುಗತೊಡಗಿತು. ಮೌನವನ್ನು ಮುರಿದು ಹೋರಾಟವು ಮಾರ್ದನಿಗೊಳ್ಳತೊಡಗಿತು. ಈ ಆವಾಜ್ ತಮಿಳುನಾಡಿನಲ್ಲಿ ಇನ್ನೂ ಎತ್ತರಕ್ಕೆ ಕೇಳಿಸುವುದು. ಭಾರತದ ಕಮ್ಯೂನಿಸ್ಟ್ ಚಳುವಳಿಯ ಆರಂಭದ ರಕ್ತಸಿಕ್ತ ಹೆಜ್ಜೆಗಳಲ್ಲಿ ತಮಿಳುನಾಡಿನ ಸಂಗಾತಿಗಳ ಹೆಜ್ಜೆಗಳೂ ಇವೆ. ಅವು ತ್ಯಾಗದ ಕತೆಯನ್ನು ಅರುಹುತ್ತವೆ. ಹೋರಾಟದ ಚರಿತ್ರೆಯನ್ನು ಬಿತ್ತರಿಸುತ್ತವೆ.

**ಹುತಾತ್ಮ ಸಂಗಾತಿಗಳ ಸ್ಥಂಭಕ್ಕೆ ನಮನ**

ಮಹಾಧಿವೇಶನದ ಅಂಗಳದಲ್ಲಿ ಹುತಾತ್ಮ ಸಂಗಾತಿಗಳ ಸ್ಥಂಭಕ್ಕೆ ಮುಷ್ಟಿಯೆತ್ತಿ ನಮಿಸುವಾಗ ತಮಿಳುನಾಡಿನ ಸಂಗಾತಿಗಳ ತ್ಯಾಗ ಬಲಿದಾನಗಳು ನೆನಪಾದವು. ಹುತಾತ್ಮ ಸಂಗಾತಿ ಬಾಲು ಅವರನ್ನು ಮಧುರೈ ಜೈಲಿನಲ್ಲಿ ನೇಣಿಗೆ ಹಾಕಲಾಗಿತ್ತು. ಹುತಾತ್ಮ ಸಂಗಾತಿಗಳಾದ ಪೊತ್ತುಂಬು, ಪೊನ್ನಯ್ಯ, ವೀರಯೀ, ಅವಳಿ ಹುತಾತ್ಮರಾದ ಮರಿ–ಮನವಲನ್, ವಿದ್ಯಾರ್ಥಿಗಳಾದ ಹುತಾತ್ಮ ಸೋಮು ಮತ್ತು ಸೆಂಬು, ಕುಟ್ಟಿ, ಜಯಪ್ರಕಾಶ, ಹುತಾತ್ಮ ನಾಯಕಿ ಲೀಲಾವತಿ ಮತ್ತು ಮದಕ್ಕುಲಮ ಕರುಪ್ಪು, ಕೊಚ್ಚಾಡೈ ಬಾಲಮುರುಗನ್ ಇವರೆಲ್ಲ ದುಡಿಯುವ ವರ್ಗದ ಚಳುವಳಿಗೋಸ್ಕರ ತಮ್ಮ ಅಮೂಲ್ಯ ಜೀವಗಳನ್ನು ತೆತ್ತು ಹುತಾತ್ಮರಾದವರು. ಇದು ಮಧುರೈ ಹುತಾತ್ಮ ಸಂಗಾತಿಗಳ ಗಾಥೆ.

ಈ ತ್ಯಾಗ ಬಲಿದಾನದಲ್ಲಿ ಅರಳಿದ ಕಮ್ಯೂನಿಸ್ಟ್ ಚಳುವಳಿಯ ನೆಲವು ತಮಿಳು ನಾಡಿನಲ್ಲಿ ಪಕ್ಷದ ಐದು ಮಹಾಧಿವೇಶನಗಳನ್ನು ನಡೆಸಿಕೊಟ್ಟಿದೆ. ಐದರಲ್ಲಿ ಮೂರು ಮಹಾಧಿವೇಶನಗಳನ್ನು ನಡೆಸಿದ ಹಿರಿಮೆಯು ಮಧುರೈಗೆ ಸೇರಿದೆ. ಸ್ವಾತಂತ್ರ್ಯ ಚಳುವಳಿಯಲ್ಲಿಯೂ ಪಕ್ಷವು ದೇಶಕ್ಕಾಗಿ ಅತ್ಯಂತ ಸಮರಧೀರತೆಯಿಂದ ತೊಡಗಲು ಸಾಧ್ಯವಾಗಿದ್ದು ಮಧುರೈನ ಜನತೆಯ ಅಮಿತವಾದ ಭಾಗವಹಿಸುವಿಕೆಯಿಂದ. ಇಂದಿಗೂ ಜನಬೆಂಬಲಕ್ಕೆ ಸಾಟಿ ಇಲ್ಲ ಎಂಬುದು ಮಹಾಧಿವೇಶನದ ಸಂದರ್ಭದಲ್ಲಿ ಗೋಚರವಾಯಿತು. ಈ ಜನಬೆಂಬಲವು 1952ರ ಸ್ವತಂತ್ರ ಭಾರತದಲ್ಲಿ ನಡೆದ ಮೊದಲ ಚುನಾವಣೆಯಲ್ಲಿ ಪಿ.ರಾಮಮೂರ್ತಿಯವರನ್ನು ಜೈಲಿನಿಂದಲೇ ಆಯ್ಕೆ ಮಾಡಿ ಅಮೋಘ ಜಯಭೇರಿ ಮೊಳಗಿಸಿತ್ತು. ಮತ್ತು ಅಂದಿಗೆ ಅಸೆಂಬ್ಲಿಯಲ್ಲಿ ಕಮ್ಯೂನಿಸ್ಟ್ ಪಕ್ಷವೇ ಬಹುದೊಡ್ಡ ಪಕ್ಷವಾಗಿ ಹೊರಹೊಮ್ಮಲು ಕಾರಣವಾಗಿದ್ದು ಈ ಜನಬೆಂಬಲದಿಂದ.

ಎಲ್ಲವೂ ಅರಿಯುತ ಮಹಾಧಿವೇಶನದಲ್ಲಿ ಕರ್ನಾಟಕದ ಸಂಗಾತಿಗಳು ಭಾಗವಹಿಸಿದೆವು. ಎಲ್ಲವನ್ನೂ ತಿಳಿದುಕೊಳ್ಳುವ ದಾಹ ಇಮ್ಮಡಿಗೊಳ್ಳ ತೊಡಗಿದ್ದು ಸುಳ್ಳಲ್ಲ.

**ಮಧುರೈ ಮೀನಾಕ್ಷಿ ಮಂದಿರ**

ಮಧುರೈ ಎಂದರೆ ಮೀನಾಕ್ಷಿ ಮತ್ತವಳ ಮೂಗಿನಲ್ಲಿ ಹೊಳೆಯುವ ನತ್ತು ಎಲ್ಲರನ್ನೂ ತನ್ನೆಡೆ ಸೆಳೆಯುವುದು ಸಹಜ. ಹದಿನೈದು ಎಕರೆಯಲ್ಲಿ ಬೆರಗುಗೊಳಿಸುವ ಶಿಲ್ಪಕಲಾಕೃತಿಯನ್ನು ಹೊಂದಿದ ಅತಿಭವ್ಯತೆಯ ಮೀನಾಕ್ಷಿ ಮಂದಿರವು ಎರಡುವರೆ ಸಾವಿರ ವರ್ಷಗಳ ಇತಿಹಾಸ ಹೊಂದಿದೆ. ಬೆಳಗು ಮುಂಜಾನೆದ್ದು ಜನಜಂಗುಳಿಯಿಲ್ಲದ ಗಳಿಗೆಯಲ್ಲಿ ಮಂದಿರದ ಇತಿಹಾಸ ಮತ್ತು ಪುರಾಣದ ಕಥನಗಳನ್ನು ಕೇಳಿಸಿಕೊಂಡು ಬಂದೆವು. ಓಹ್ ಎಂತಹ ರೋಮಾಂಚನಕಾರಿ ಸಂಕಥನ ಹೊಂದಿದೆ ಈ ನೆಲ. ಶೈವ–ವೈಷ್ಣವರ ಭಯಂಕರ ಸಂಘರ್ಷದ ಬೆಳವಣಿಗೆ ಬಹು ದೀರ್ಘ ಹಿನ್ನೆಲೆಯಿದೆ. ಮತ್ತು ಮೀನಾಕ್ಷಿಗೆ ಪ್ರತಿ ಬಾರಿ ಮದುವೆಯ ತಯಾರಿ ನಡೆಯುವುದು ಮತ್ತು ಮದುವೆ ಆಗುವುದೇ ಇಲ್ಲ. ಇರಲಿ ಈ ಕತೆಯನ್ನು ಮತ್ತೆ ಕೇಳೋಣ. ಮಧುರೈ ಅಂದರೆ ಈ ಮೀನಾಕ್ಷಿಯ ಭವ್ಯ ಮಂದಿರವೇ ನೆನಪಲ್ಲಿ ಉಳಿಯಬಹುದು ಎಂದುಕೊಂಡವರು ಬಹಳ ಜನ. ಆದರೆ ಹಾಗಾಗಲೇ ಇಲ್ಲ. ಐದು ದಿನಗಳ ಕಾಲ ಮಹಾಧಿವೇಶನದ ಕಲಾಪಗಳು ನಮ್ಮನ್ನು ಇನ್ನಿಲ್ಲದಂತೆ ಸೆಳೆಯತೊಡಗಿದವು.

**ಎಲ್ಲಿ ಎಡವುತ್ತಿದ್ದೇವೆ?**

ಕಾಂ. ಪ್ರಕಾಶ್ ಕಾರತ್ ಮಂಡಿಸಿದ ರಾಜಕೀಯ ವಿಮರ್ಶಾ ವರದಿ ರಾಜಕೀಯ ತಂತ್ರಾತ್ಮಕ ಧೋರಣೆಯ ವರದಿಯು ನಮ್ಮನ್ನು ಬಹು ಚಿಂತೆಗೀಡು ಮಾಡಿತು. ಪಕ್ಷವು ಕಳೆದ ಮಹಾಧಿವೇಶನದಲ್ಲಿ ಕೈಗೊಂಡ ತೀರ್ಮಾನಗಳನ್ನು ಮೂರು ವರ್ಷ ಜಾರಿ ಮಾಡಿದ ಅನುಭವಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಣೆ ಮಾಡಿ ಮಂಡಿಸಲಾಯಿತು. ನಮ್ಮ ರಾಜಕೀಯ ತಂತ್ರಾತ್ಮಕ ಧೋರಣೆಯಲ್ಲಿ ತಪ್ಪಿದೆಯೆ? ಪಕ್ಷವು ಯಾಕೆ ವಿಕಸನವಾಗುತ್ತಿಲ್ಲ. ಚುನಾವಣೆಯಲ್ಲಿ ಮತಗಳ ಕುಸಿತು. ಯುವಜನರೇ ಎತ್ತಿ ಹಿಡಿದ ಬಾವುಟದಲ್ಲಿ ಈ ಪಕ್ಷವು ಬೆಳೆದು ಬಂದಿದೆ. ವಿದ್ಯಾರ್ಥಿಗಳ ಅಧ್ಯಯನ ಮತ್ತು ಹೋರಾಟದಲ್ಲಿ ಮುಂದೆ ಸಾಗಿದೆ. ಈಗೆಲ್ಲಿ ಇರುವರು ವಿದ್ಯಾರ್ಥಿ–ಯುವಜನರು? 1938ರಲ್ಲಿಯೇ ಕೇರಳದಲ್ಲಿ ಮಕ್ಕಳು ಕೆಂಬಾವುಟದೆಡೆಗೆ ಹರಿದು ಬಂದ ಪರಂಪರೆ ಇದೆ. ಮಕ್ಕಳೆಂದರೆ ಮಕ್ಕಳು. ಅವರು ನೀಲಿಯಾಕಾಶದ ಕೆಳಗೆ ವಿಶಾಲ ಭೂಮಿಯ ಮೇಲೆ ವಿಜ್ಞಾನವನ್ನು ಅರಿಯುತ, ಹಾಡುಗಳನ್ನು ಹಾಡುತ, ಕುಣಿಯುತ, ನಲಿಯುತ, ಜಾತಿಧರ್ಮಗಳ ಹಂಗಿನಲ್ಲಿರದೆ, ಹಕ್ಕಿಯಂತೆ ಹಾರುತ ಸ್ನೇಹ–ಪ್ರೇಮದ ಹಾಡು ಮೊಳಗಿಸುತ ಬೆಳೆಯಲು ಬಾಲ ಸಂಘವು ನಡೆದು ಬಂದಿದೆ. ಸಮರ ಧೀರ ರೈತ ಹೋರಾಟಗಳು, ಕಾರ್ಮಿಕರ ಪ್ರತಿಭಟನೆಗಳು, ತಾರತಮ್ಯ ಪೋಷಿಸುವ ಜಾತಿ ಗೋಡೆ ಕೆಡವಿದ ಪರಂಪರೆ, ಮಹಿಳೆಯರ ಮೇಲಿನ ದೌರ್ಜನ್ಯ ಅತ್ಯಾಚಾರಗಳ ತಡೆಗಾಗಿ ಪಕ್ಷದ ಶ್ರಮ, ಪರಿಸರ ಸಂರಕ್ಷಣೆಗಾಗಿ ಚಳುವಳಿ, ಕಾರ್ಪೋರೆಟ್ ಮತ್ತು ಕೋಮುವಾದಿಗಳ ಸಖ್ಯತೆಯಲ್ಲಿ ದೇಶದ ಆರ್ಥಿಕತೆಯನ್ನೇ ಲೂಟಿಗೈದು ನಿರುದ್ಯೋಗ ಬಡತನ ಸಾಲದಲ್ಲಿ ದೇಶವನ್ನೇ ದೂಡಿದ್ದಕ್ಕೆ ಎದುರಾಗಿ ಪಕ್ಷವು ಹೋರಾಡಿದ ಪ್ರತಿಭಟನಾ ಹಿನ್ನೆಲೆ ಎಲ್ಲವೂ ಇದ್ದಾಗಲೂ ಪಕ್ಷವು ಯಾಕೆ ವಿಕಸನಗೊಳ್ಳುತ್ತಿಲ್ಲ. ಎಲ್ಲಿ ಎಡವುತ್ತಿದ್ದೇವೆ? ಮಾವನೀಯತೆಯನ್ನು ಬಿತ್ತಿ ಬೆಳೆಯುವ ಸಮತಾ ಸಮಾಜದ ಗುರಿಯು ನಮ್ಮದಾಗಿದೆ. ಇದನ್ನು ದೃಢವಾಗಿ ಕಟ್ಟಲು ಮುನ್ನಡೆಸಲು ಮಹಾಧಿವೇಶನವು ಮಾರ್ಗದರ್ಶನ ಮಾಡಬೇಕೆಂದು ಕೇಂದ್ರ ಸಮಿತಿಯು ಸುದೀರ್ಘವಾದ ವರದಿಯನ್ನು ಮಂಡಿಸಿತು. ಫ್ಯಾಸಿಸ್ಟ್ ಅಜೆಂಡಾ ಹೊಂದಿದ ಆರ್‌ಎಸ್‌ಎಸ್, ಬಿಜೆಪಿಯ ಒಕ್ಕೂಟ ಸರಕಾರದ ಮೂಲಕ ಭಾರತದಲ್ಲಿ ನವಫ್ಯಾಸಿಜಂ ಅನ್ನು ತರಲು ಹೊರಟಿರುವುದನ್ನು ವಿವರಿಸಲಾಯಿತು. ಈಚೆಗೆ ಫ್ಯಾಸಿಜಂ ಬಗ್ಗೆ ಪಕ್ಷದ ವಿಶ್ಲೇಷಣೆ ಕುರಿತು ಅನೇಕ ತಿರುಚುವಿಕೆಯ ಅಭಿಪ್ರಾಯಗಳು ಸಾಮಾಜಿಕ ಜಾಲತಾಣದಲ್ಲಿ ವ್ಯಕ್ತವಾಗಿದ್ದವು. ನಿರ್ದಿಷ್ಟ ಪರಿಸ್ಥಿತಿಯನ್ನು ನಿರ್ದಿಷ್ಟವಾಗಿಯೇ ವಿಶ್ಲೇಷಿಸಬೇಕು. ಉತ್ಪ್ರೇಕ್ಷೆ ಮತ್ತು ಕೀಳಂದಾಜು ಎರಡೂ ತಪ್ಪು ಫಲಿತಾಂಶ ಕೊಡುತ್ತವೆ. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಫ್ಯಾಸಿಜಂನ ಸ್ವರೂಪ, ಎದುರಿಸುವ ಬಗೆ ಎಲ್ಲವೂ ➚



ಚರ್ಚೆಗೊಳಗಾದವು. ಫ್ಯಾಸಿಸ್ಟ್ ಲಕ್ಷಣಗಳನ್ನು ಹಿಮ್ಮೆಟ್ಟಿಸಲು ದೃಢವಾಗಿ ತುಳಿಯಬೇಕಾದ ದಾರಿಯಲ್ಲಿ ಬೆಳಕು ಚಲ್ಲಲಾಯಿತು. ಜನಮಾನಸವನ್ನು ಕೋಮು ಪ್ರಚೋದನಾತ್ಮಕವಾಗಿ ಬೆಳೆಸುತ್ತಿರುವ ವಿದ್ಯಮಾನಗಳನ್ನು ಹಿಮ್ಮೆಟ್ಟಿಸಲು ಬಹುಸಾಂಸ್ಕೃತಿಕ ಪರಂಪರೆಯನ್ನು ವಿಸ್ತರಿಸುವ, ಗಟ್ಟಿಗೊಳಿಸುವ ಅಗತ್ಯತೆಯನ್ನು ಗುರುತಿಸಿದರು. ಈಗಾಗಲೇ ಪಕ್ಷವು ತನ್ನೆಲ್ಲ ಶಕ್ತಿ ಸಾಮರ್ಥ್ಯದಲ್ಲಿ ಭಾರತದ ಸಾರ್ವಭೌಮತೆಯನ್ನು ಕಾಪಾಡಲು, ಜಾತ್ಯಾತೀತತೆಯನ್ನು ಉಳಿಸಲು ಶ್ರಮಿಸುತ್ತಿದೆ. ವಿವಿಧ ರಾಜ್ಯಗಳಿಂದ ಪ್ರತಿನಿಧಿಗಳು ಎರಡೂ ವಿಷಯಗಳ ಮೇಲೆ ಮನಬಿಚ್ಚಿ ಮಾತನಾಡಿದರು.

**ಸಮ್ಮೇಳನವೇ ಉನ್ನತ ವೇದಿಕೆ**

ಸಿಪಿಐ(ಎಂ)ಗೆ ಸಮ್ಮೇಳನವೇ ಉನ್ನತವಾದ ವೇದಿಕೆ. ತಳಹಂತದಿಂದ ಸಮ್ಮೇಳನದ ಉತ್ಪಾದನೆ, ಉತ್ಪಾದನಾ ಸಂಬಂಧಗಳು, ಉತ್ಪಾದನಾ ಶಕ್ತಿಗಳು ಎಲ್ಲವನ್ನೂ ವಿಶ್ಲೇಷಿಸುವತ್ತ ಮನವು ಹರಿಯಿತು.

ಸತತವಾಗಿ ಒಂದುವರೆ ದಿನಗಳ ಕಾಲ ಪ್ರತಿನಿಧಿಗಳು ಮಾತನಾಡಿದರು. ಕೇಂದ್ರ ಸಮಿತಿಯು ಎಲ್ಲವನ್ನೂ ಅಲ್ಲಮನಂತೆ ಕೇಳಿಸಿಕೊಳ್ಳತೊಡಗಿತು. ಅಧ್ಯಕ್ಷೀಯ ಮಂಡಳಿಯು ನಿರ್ವಹಣೆಯ ಹೊಣೆ ಹೊತ್ತು ನಡೆಸುತ್ತಿತ್ತು. ಪಶ್ಚಿಮ ಬಂಗಾಲದಲಿ ಇನ್ನೇನು ಕಮ್ಯೂನಿಸ್ಟ್ ಚಳುವಳಿಯನ್ನೇ ಇಲ್ಲದಂತಾಯಿತು ಎಂದು ಬಂಡವಾಳಶಾಹಿಯು ಬೀಗುವ ಹೊತ್ತಲ್ಲಿಯೇ ಬೂದಿಯಿಂದ ಜಿಗಿದ್ವಾರುವ ಫಿನಿಕ್ಸ್ ನಂತೆ ಯುವಜನರು ಲಕ್ಷದೋಪಾದಿಯಲ್ಲಿ ಬರತೊಡಗಿರುವರು. ಕೆಂಬಾವುಟವು ಮತ್ತೆ ಹಾರಾಡತೊಡಗಿದೆ. ಈ ಪ್ರಕ್ರಿಯೆಯಲ್ಲಿ ಯುವತಿಯೊಬ್ಬಳು ಅಂಜದೆ, ಅಳುಕದೆ ಅತ್ಯಂತ



ಮೂಲಕ ಆಯ್ಕೆಯಾಗಿ ಬಂದ ಪ್ರತಿನಿಧಿಗಳೇ ನಿರ್ಣಾಯಕರು. ಅವರ ನಿರ್ಣಯದ ಬೆಳಕಿನಲ್ಲಿ ಮೂರು ವರ್ಷಗಳ ದಾರಿ ನಡೆಯಬೇಕಾಗುತ್ತದೆ. ಅದಕ್ಕಾಗಿ ಹಿಂದಿನ ಮಹಾಧಿವೇಶನದಲ್ಲಿ ಕೈಗೊಂಡ ನಿರ್ಣಯಗಳನ್ನು ಮೂರು ವರ್ಷಗಳ ಕಾಲ ಹೇಗೆ ಜಾರಿ ಮಾಡಲಾಯಿತೆಂದು ಈ ಮಹಾಧಿವೇಶನದಲ್ಲಿ ಮಂಡಿಸಲಾಗುವುದು. ಮತ್ತೂ ಈ ಮಹಾಧಿವೇಶನದಲ್ಲಿ ಸಮಗ್ರ ಚರ್ಚೆ, ವಿಮರ್ಶೆ, ಸ್ವವಿಮರ್ಶೆ, ವಿಶ್ಲೇಷಣೆಯ ಆಧಾರದಲ್ಲಿ ನಿರ್ಣಯಗಳಾಗುತ್ತವೆ. ಮತ್ತು ಕೈಗೊಂಡ ನಿರ್ಣಯಗಳನ್ನು ದೃಢತೆಯಿಂದ ಜಾರಿ ಮಾಡಲು ಸಮಿತಿ ಆರಿಸಲಾಗುತ್ತದೆ. ಮುಂದಿನ ಮೂರು ವರ್ಷದ ಹೊಣೆಯನ್ನು ಅವರ ಹೆಗಲಿಗೆ ಕೊಡುವ ಅಧಿಕಾರವು ಮಹಾಧಿವೇಶನ ಹೊಂದಿದೆ. ಆದ್ದರಿಂದಲೇ ಹಿಂದಿನ ಸಮಿತಿಯು ಸ್ವವಿಮರ್ಶೆಯ ಮೂಲಕವೇ ವಿಮರ್ಶಾತ್ಮಕ ವರದಿಯನ್ನು ಮಂಡಿಸುವುದು. ಇದು ಪ್ರಜಾಪ್ರಭುತ್ವದ ಅಮಿತ ಸೌಂದರ್ಯವಾಗಿದೆ.

**ಆಂತರಿಕ ಪ್ರಜಾಪ್ರಭುತ್ವ**

ಈ ಆಂತರಿಕ ಪ್ರಜಾಪ್ರಭುತ್ವವನ್ನು ಭೂಮಾಲಕ ಬಂಡವಾಳಶಾಹಿ ಪಕ್ಷಗಳಲ್ಲಿ ನೋಡಲಾಗದು. ನಾನು ಚಂಡೀಗಢನಲ್ಲಿ ನಡೆದ 15ನೇ ಮಹಾಧಿವೇಶನದಲ್ಲಿ ಭಾಗವಹಿಸಿದಾಗ ಈ ಪ್ರಜಾಪ್ರಭುತ್ವದ ಸೌಂದರ್ಯಕ್ಕೆ ಬೆರಗಾಗಿದ್ದೆ. ಹೀರೋಗಿರಿಗೆ ಇಲ್ಲಿ ಯಾವ ಅವಕಾಶವೂ ಇಲ್ಲ. ಸಮಷ್ಠಿ ಪ್ರಜ್ಞೆಯನ್ನು ಎತ್ತರಿಸುವ, ವಿಸ್ತರಿಸುವ ಬಗೆಬಗೆಯ ಆಯಾಮಗಳು ಸಂಗಾತಿ ಸಂಸ್ಕೃತಿಗೆ ಬಲಿಷ್ಠ ತಳಹದಿಯನ್ನು ಹಾಕುತ್ತವೆ. ಶ್ರಮ ಸಂಸ್ಕೃತಿಯ ಭವ್ಯತೆಯನ್ನು ಮಹತಿಯನ್ನು ಕಟ್ಟಿಕೊಡುತ್ತವೆ. ಇಂತಹ ಭವ್ಯತೆಯ ಅರಿವಿನ ಲೋಕದೆದುರು ಮಧುರೈನ ಮೀನಾಕ್ಷಿಯ ಮಂದಿರದ ಭವ್ಯತೆಯು ಮಸುಕಾಗತೊಡಗಿತು. ಆದರೆ ಭವ್ಯತೆಯ ಮೋಹತ್ವದ ಬದಲಿಗೆ ಅದರೊಳಗೆ ಅಡಗಿದ ರಾಜಶಾಹಿತ್ವ, ಅದರ ಚಲನೆ, ಕಾಲಕಾಲಕ್ಕೆ ಆದ ಆರ್ಥಿಕ ಸಾಮಾಜಿಕ ಬದಲಾವಣೆ, ಅವುಗಳು ಸಾಂಸ್ಕೃತಿಕ ಸಾಹಿತ್ಯಕದ ಮೇಲೆ ಮಾಡಿದ ಪರಿಣಾಮಗಳು, ಶ್ರಮ, ದೃಢತೆಯಿಂದ ಸಂಗಾತಿಗಳೊಡಗೂಡಿ ಪಕ್ಷದಲ್ಲಿ ಮುಂಚೂಣಿಯಲ್ಲಿರುವವಳು ಕಾಂ.ಮೀನಾಕ್ಷಿ ಮುಖರ್ಜಿ. ಈ ಯುವತಿಯು ಅಧ್ಯಕ್ಷೀಯ ಮಂಡಳಿಯಲ್ಲಿ ಒಬ್ಬಳು.

**ಸಂಗಾತಿಯು ಪಂಚ ಸೂತ್ರಗಳನ್ನು ಜಾರಿ ಮಾಡಬೇಕಾಗುತ್ತದೆ**

ಮರುದಿನಕ್ಕೆ ಸಂಜೆ ಹೊತ್ತಿಗೆ ಪಿಬಿ ಸದಸ್ಯರಾದ ಕಾಂ.ಬಿ.ವಿ.ರಾಘವಲು ಅವರು ಪಕ್ಷದ ಸಂಘಟನಾ ವರದಿ ಮಂಡಿಸಿದರು. ಪಕ್ಷಕ್ಕೆ ಸದಸ್ಯರಾಗುವುದು ಸುಮ್ಮನೇ ಅಲ್ಲ. ಸಾಮೂಹಿಕ ಸಂಘಟನೆಯಲ್ಲಿ ಜನಸ್ನೇಹಿಯಾಗಿ, ಶ್ರಮಿಕ ಲೋಕದ ಸಂಸ್ಕೃತಿಯನ್ನೊಳಗೊಳ್ಳುವ ತೆರದಲ್ಲಿ ಕೆಲಸ ಮಾಡಬೇಕು. ಪಕ್ಷದಲ್ಲಿರುವ ಹಿರಿಯ ಸಂಗಾತಿಗಳಿಗೆ ಎಲ್ಲವನ್ನೂ ಗ್ರಹಿಸುವ ಸೂಕ್ಷ್ಮ ಕಣ್ಣೋಟವು ಇದ್ದೇ ಇರುವುದು. ಪಕ್ಷಕ್ಕೆ ತಕ್ಕುದಾದ ತಾತ್ವಿಕತೆಯು ಇದ್ದಲ್ಲಿ ದುಡಿಯುವ ವರ್ಗ ಪರವಾಗಿ ಹೋರಾಡುವ ಧೈರ್ಯ, ಪ್ರಾಮಾಣಿಕತೆ ಇದ್ದಲ್ಲಿ ಸಹಾಯಕ ಗುಂಪಿನಲ್ಲಿ ಒಂದು ವರ್ಷದ ಕಾಲ ಪ್ರವೇಶ ಇದ್ದೇ ಇರುವುದು. ಅಷ್ಟರಲ್ಲಿಯೇ ಚಾರಿತ್ರಿಕ ಭೌತವಾದ, ದ್ವಂದ್ವಮಾನ ಭೌತವಾದ, ರಾಜಕೀಯ ಅರ್ಥಶಾಸ್ತ್ರ, ಕಮ್ಯೂನಿಸ್ಟ್ ಚಳುವಳಿ ಹೀಗೆ ಎಲ್ಲವೂ ಮನನ ಮಾಡಿಕೊಳ್ಳುವ ಅವಕಾಶದ ಬಾಗಿಲು ತೆರೆದೇ ಇರುತ್ತದೆ. ಮನಸು ಹೃದಯ ಇತ್ತ ಒಲಿದರೆ ಬಹಳ ಕಠಿಣವೇನಲ್ಲ. ಸಮಾಜವು ತಂತಾನೇ ಬದಲಾಗಿ ಸಮತೆಯ ನಾಡನ್ನು ಕೊಟ್ಟು ಬಿಡುವುದೇನು..? ಹಾಗಾಗುವುದಿಲ್ಲ. ಅದಕ್ಕಾಗಿ ಸಮಾಜದ ವಿಶ್ಲೇಷಣೆ, ಬದಲಾಗಲು ಬೇಕಾದ ಸಾಂಘಿಕ ಶಕ್ತಿ ಎಲ್ಲವೂ ಅಗತ್ಯವಿರುತ್ತದೆ. ರಾಜಕೀಯ ಧೋರಣೆಯುಳ್ಳ ಬಲಿಷ್ಠವಾದ ಸಂಘಟನೆ ಬೇಕಾಗುವುದು. ಅದಕ್ಕಾಗಿ ಪೂರ್ಣ ಜ್ಞಾನದೆಡೆಗೆ ಚಲಿಸುತ, ಹೋರಾಟಕ್ಕೆ ಒಡ್ಡಿಕೊಳ್ಳುತ ಮುನ್ನಡೆಯಬೇಕಾಗುತ್ತದೆ. ಇದಕ್ಕಾಗಿ ಪಕ್ಷದಲ್ಲಿ ಸದಸ್ಯರಾಗ ಬಯಸುವ ಸಂಗಾತಿಯು ಪಂಚ ಸೂತ್ರಗಳನ್ನು ಜಾರಿ ಮಾಡಬೇಕಾಗುತ್ತದೆ. ನೀರೊಳಗಣ ಮೀನಂತೆ ಜನತೆಯ ಮಧ್ಯದಲ್ಲಿ ಇದ್ದು ಸಂಘಟನೆ ಕಟ್ಟುವ ಜವಾಬ್ದಾರಿ ಪ್ರದಾನವಾದದ್ದು. ಪಕ್ಷಕ್ಕೆ ತನ್ನ ಪುಟ 10 ಕ್ಕೆ



# ಕೆಂಪು ಬಾವುಟವೇ ಭವಿಷ್ಯ

## ವಿಶ್ವದ ಶೇಕಡ 25ರಷ್ಟು ಜನರು ಈಗಾಗಲೇ ಸಮಾಜವಾದದ ನೆರಳಿನಲ್ಲಿದ್ದಾರೆ

### ಬೃಹತ್ ಸಾರ್ವಜನಿಕ ಸಭೆಯಲ್ಲಿ ಎಂ.ಎ. ಬೇಬಿ

### ಉತ್ಸಾಹದೊಂದಿಗೆ ಮುಕ್ತಾಯವಾದ ಸಿಪಿಐ(ಎಂ)ನ 24 ನೇ ಮಹಾಧಿವೇಶನ

ಕೆಂಪು ಬಾವುಟವೇ ಭವಿಷ್ಯ ಎಂದು ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ನೂತನ ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ ಹೇಳಿದರು. ಏಪ್ರಿಲ್ 6ರಂದು ಮದುರೈನ ಎನ್.ಶಂಕರಯ್ಯ ಮೈದಾನ (ರಿಂಗ್ ರೋಡ್ ಮೈದಾನ)ದಲ್ಲಿ ನಡೆದ ಬೃಹತ್ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ನಂತರ ಮೊದಲ ಬಹಿರಂಗ ಸಭೆ ಉದ್ದೇಶಿಸಿ ಅವರು ಮಾತನಾಡಿ, ವಿಶ್ವದ ಜನಸಂಖ್ಯೆಯ ಶೇಕಡಾ 25ರಷ್ಟು ಜನರು ಈಗಾಗಲೇ ಸಮಾಜವಾದದ ನೆರಳಿನಲ್ಲಿದ್ದಾರೆ, ಪ್ರಗತಿಪರ ಶಕ್ತಿಗಳಿಂದ ಆಳಲ್ಪಡುವ ದೇಶಗಳ ಜನಸಂಖ್ಯೆಯನ್ನೂ ಸೇರಿಸಿದರೆ ಈ ಸಂಖ್ಯೆ ಇನ್ನೂ ಹೆಚ್ಚಾಗಿದೆ. ಇದಕ್ಕೆ ಸಂಬಂಧಿಸಿದ ಅಂಕಿಅಂಶಗಳು ಸಹ ನಮ್ಮ ಬಳಿ ಇವೆ ಎಂದು ಹೇಳಿದರು. ಇದಕ್ಕೂ ಮೊದಲು, ಏಪ್ರಿಲ್ ಎರಡರಿಂದ ಐದು ದಿನಗಳ ಕಾಲ ಸ್ಥಳೀಯ ಸೀತಾರಾಮ್ ಯೆಚೂರಿ ನಗರದಲ್ಲಿ ನಡೆದ ಸಿಪಿಐ(ಎಂ)ನ 24ನೇ ಅಖಿಲ ಭಾರತ ಸಮ್ಮೇಳನವು ಏಪ್ರಿಲ್ 6ರಂದು ಭಾನುವಾರ ಅತ್ಯುತ್ಸಾಹದೊಂದಿಗೆ ಮುಗಿಯಿತು.

**ಲಕ್ಷಾಂತರ ಜನರು ಭಾಗಿ**

ಸಮ್ಮೇಳನ ಮುಗಿದ ನಂತರ, ಸ್ಥಳೀಯ ಮಧುರೈ ಪಾಂಡಿ ಗುಡಿ ಸೆಂಟರ್‌ನಿಂದ ಬೃಹತ್ ಮೆರವಣಿಗೆಯನ್ನು ಆಯೋಜಿಸಲಾಗಿತ್ತು. ತಮಿಳುನಾಡು, ಕೇರಳ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದಿಂದ ಲಕ್ಷಾಂತರ ಜನರು ಈ ಪ್ರದರ್ಶನದಲ್ಲಿ ಭಾಗವಹಿಸಿದ್ದರು. ಪ್ರದರ್ಶನದ ಮುಂಚೂಣಿಯಲ್ಲಿ ಕೆಂಪು ಅಂಗಿ ಧರಿಸಿದ ಸಾವಿರಾರು ಸ್ವಯಂಸೇವಕರು ಕವಾಯತು ನಡೆಸಿದರು. ಇದರ ಪರಿಣಾಮವಾಗಿ ಮೆರವಣಿಗೆ ನಡೆದ ಸುತ್ತಮುತ್ತಲಿನ ಪ್ರದೇಶಗಳು ಕೆಂಪು ಸಮುದ್ರದಂತೆ ಕಾಣುತ್ತಿದ್ದವು. ನಂತರ ನಡೆದ ಸಾರ್ವಜನಿಕ ಸಭೆಗೆ ಸಿಪಿಐ(ಎಂ) ತಮಿಳುನಾಡು ರಾಜ್ಯ ಕಾರ್ಯದರ್ಶಿ ಪಿ.ಷಣ್ಮುಗಂ ಅಧ್ಯಕ್ಷತೆ ವಹಿಸಿದ್ದರು. ಶಂಕರಯ್ಯ ಮೈದಾನ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಲಕ್ಷಾಂತರ ಜನರಿಂದ ತುಂಬಿ ತುಳುಕುತ್ತಿದ್ದವು. ತಮ್ಮ ಭಾಷಣದ ಆರಂಭದಲ್ಲಿ ಬೇಬಿಯವರು ಈ ವಿಷಯವನ್ನು ಪ್ರಸ್ತಾಪಿಸುತ್ತ, ಐತಿಹಾಸಿಕವಾಗಿ ಪ್ರಸಿದ್ಧವಾದ ಮಧುರೈ ನಗರ ಸುಂದರವಾದ ಕೆಂಪು ಬಣ್ಣಕ್ಕೆ ತಿರುಗುತ್ತಿರುವಂತೆ ಕಾಣುತ್ತಿದೆ ಎಂದು ಹೇಳಿದರು. ಪ್ರಧಾನ ಕಾರ್ಯದರ್ಶಿಯಾಗಿ ಅವರ ಮೊದಲ ಭಾಷಣವು ಕಾವ್ಯಾತ್ಮಕವಾದ ಹೋಲಿಕೆಗಳು ಮತ್ತು ಉದಾಹರಣೆಗಳಿಂದ ತುಂಬಿತ್ತು. ಕೇರಳ ಮತ್ತು ತಮಿಳುನಾಡಿಗೆ ಸೇರಿದ ಹಲವಾರು ಪ್ರಸಿದ್ಧ ಬರಹಗಾರರು ಮತ್ತು ಕವಿಗಳ ಕೃತಿಗಳನ್ನು ಅವರು ಉಲ್ಲೇಖಿಸಿದರು.

**ಅನಿರೀಕ್ಷಿತ ಮಳೆ**

ಬೇಬಿಯವರ ಮಾತುಗಳಿಗೆ ಬಹಿರಂಗ ಸಭೆಯಲ್ಲಿ ಸೇರಿದ್ದ ಜನರು ಜೋರಾಗಿ ಹರ್ಷೋದ್ಗಾರ ಮಾಡಿದರು. ಭಾಷಣ ನಡೆಯುತ್ತಿರುವ ಸಮಯದಲ್ಲಿಯೇ ಅನಿರೀಕ್ಷಿತವಾಗಿ ಮಳೆ ಪ್ರಾರಂಭವಾಗಿ ಬಹಿರಂಗ ಪುಟ 10 ಕ್ಕೆ



## ಕೆಂಪು ಬಾವುಟವೇ ಭವಿಷ್ಯ...... ಪುಟ 9 ರಿಂದ

ಸಭೆಯಲ್ಲಿ ಕೆಲ ಕಾಲ ಗೊಂದಲ ಉಂಟಾಯಿತು. ಕೆಲವರು ಸಭೆಯಿಂದ ಹೊರನಡೆಯಲು ಪ್ರಾರಂಭಿಸಿದರು.

ಆಗ ಎಂ.ಎ.ಬೇಬಿಯವರು, “ಈಗ ನಮ್ಮ ಮುಂದೆ ಎರಡು ಮಾರ್ಗಗಳಿವೆ. ಒಂದು ಸಭೆಯನ್ನು ಅರ್ಧಕ್ಕೆ ಮುಗಿಸಿ ಹೊರಡುವುದು, ಎರಡನೆಯದು, ಯಾವುದೇ ಅಡೆತಡೆಗಳು ಎದುರಾದರೂ ಸಭೆಯನ್ನು ನಿಲ್ಲಿಸದೆ ಮುನ್ನಡೆಸುವುದು. ಸಭೆಯನ್ನು ಇಲ್ಲಿಗೇ ಮುಗಿಸಿ ಹೋದರೆ ಮಳೆಗೆ ಭಯಪಟ್ಟು ಹೊರಟುಹೋದರು ಎನ್ನುತ್ತಾರೆ. ಏನು ಮಾಡೋಣ?... ಯಾವುದೇ ತ್ಯಾಗಕ್ಕೂ ಸಿದ್ಧರಿದ್ದೇವೆ ಎಂದು ಹೇಳುವ ನಾವು, ಈ ಸಣ್ಣ ಮಳೆಗೆ ಹೆದರುತ್ತೇವೆಯೇ? ನಮಗೆ ಭಯವಿಲ್ಲ. ಯಾವುದೇ ಶಕ್ತಿಗಳು ನಮ್ಮನ್ನು ಎದುರಿಸಲು ಸಾಧ್ಯವಿಲ್ಲ. ಎಷ್ಟೇ ಕಷ್ಟ ಬಂದರೂ, ಎಷ್ಟೇ ನಷ್ಟಗಳು ಬಂದರೂ ನಮ್ಮ ಪ್ರಯಾಣ ಮುಂದೆ ಹೋಗುತ್ತದೆ..." ಎಂದರು. ಈ ಮಾತುಗಳಿಗೆ ಸಭಿಕರು ಸ್ಪಂಧಿಸಿ ಎಲ್ಲಿದ್ದರೋ ಅಲ್ಲೇ ನಿಂತುಬಿಟ್ಟರು. ತಾವು ಕುಳಿತಿದ್ದ ಕುರ್ಚಿಗಳನ್ನೇ ತಲೆಯ ಮೇಲೆ ಅಡ್ಡವಾಗಿ ಇಟ್ಟುಕೊಂಡು ಬೇಬಿಯವರ ಭಾಷಣವನ್ನು ಕೊನೆಯವರೆಗೂ ಆಲಿಸಿದರು.

**ಜನರು ಪರ್ಯಾಯಕ್ಕಾಗಿ ಕಾಯುತ್ತಿದ್ದಾರೆ**

ಬೇಬಿ ತಮ್ಮ ಭಾಷಣವನ್ನು ಮುಂದುವರಿಸುತ್ತಾ ಕ್ಯೂಬಾ, ಉತ್ತರ ಕೊರಿಯಾ ಮತ್ತು ಚೀನಾ ಮತ್ತಿತರ ದೇಶಗಳನ್ನು ಉಲ್ಲೇಖಿಸಿದರು. ಹಲವು ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಎಡಪಂಥೀಯ ನೀತಿಗಳನ್ನು ಅನುಸರಿಸುವ ಪಕ್ಷಗಳು ಅಧಿಕಾರಕ್ಕೆ ಬಂದಿವೆ. ನಮ್ಮ ನೆರೆಯ ದೇಶವಾದ ಶ್ರೀಲಂಕಾದಲ್ಲೂ ಎಡಪಂಥೀಯರು ಅಧಿಕಾರಕ್ಕೆ ಬಂದಿದ್ದಾರೆ. ನೇರವಾಗಿ ಕಮ್ಯುನಿಸ್ಟ್ ಪಕ್ಷಗಳು, ಎಡಪಂಥೀಯ ಸಿದ್ಧಾಂತದ ಮೂಲಕ ಅಧಿಕಾರದಲ್ಲಿರುವ ದೇಶಗಳಲ್ಲಿನ ಜನರನ್ನು ಸೇರಿಸಿದರೆ, ಜಗತ್ತಿನ ಜನಸಂಖ್ಯೆಯ ಶೇಕಡಾ 25ಕ್ಕಿಂತ ಹೆಚ್ಚು ಜನರು ಸಮಾಜವಾದದ ನೆರಳಿನಲ್ಲಿದ್ದಾರೆ. ಬಂಡವಾಳಶಾಹಿಯ ಬಿಕ್ಕಟ್ಟಿನಿಂದಾಗಿ, ಅನೇಕ ದೇಶಗಳ ಜನರು ಪರ್ಯಾಯಕ್ಕಾಗಿ ಕಾಯುತ್ತಿದ್ದಾರೆ ಎಂದು ಅವರು ವಿವರಿಸಿದರು.

**ವಿಶ್ವದ ಮುಂದೆ ಬಯಲಾದ ಬಂಡವಾಳಶಾಹಿ**

ಅಮೆರಿಕ ಅಧ್ಯಕ್ಷ ಟ್ರಂಪ್ ಅನುಸರಿಸುತ್ತಿರುವ ರಕ್ಷಣಾತ್ಮಕ ನೀತಿಗಳು ಬಂಡವಾಳಶಾಹಿ ನೀತಿಗಳ ನಿಜವಾದ ಸ್ವಭಾವವನ್ನು ಮತ್ತು ಅದರಲ್ಲಿರುವ ಭಯವನ್ನು ವಿಶ್ವದ ಜನರ ಮುಂದೆ ಬಟಾಬಯಲು ಮಾಡುತ್ತಿವೆ ಎಂದು ಹೇಳಿದ ಬೇಬಿಯವರು, ಇದಕ್ಕೆ ಭಿನ್ನವಾಗಿ, ಚೀನಾ ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಸಾಧಿಸಿ ಮುನ್ನುಗ್ಗುತ್ತ, ವಿಶ್ವದ ಜನರಿಗೆ ಹೊಸ ಮಾರ್ಗವನ್ನು ತೋರಿಸುತ್ತಿದೆ ಎಂದು ಹೇಳಿದರು.

ಅದೇ ಸಮಯದಲ್ಲಿ, ಕಮ್ಯುನಿಸ್ಟ್ ಚಳುವಳಿಯಲ್ಲಿನ ದೌರ್ಬಲ್ಯಗಳನ್ನು ಸಹ ಅವರು ಉಲ್ಲೇಖಿಸಿದರು. "ಈ ಮಾತುಗಳನ್ನು ನಾವು ಹೇಳುತ್ತಿದ್ದೇವೆಂದರೆ, ಇದರರ್ಥ ಎಲ್ಲವೂ ಸರಿಯಾಗಿದೆ ಎಂದರ್ಥವಲ್ಲ. ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿ ಕೆಲವು ವರ್ಷಗಳಿಂದ ಬಲಹೀನಗೊಂಡಿದೆ. ಹಿನ್ನಡೆಗಳನ್ನು ಅನುಭವಿಸಲಾಗಿದೆ. ನಾವು ಇದನ್ನು ಒಪ್ಪಿಕೊಳ್ಳಬೇಕು. ಕೇರಳದಲ್ಲಿ ಸತತ ಚುನಾವಣೆಗಳನ್ನು ಗೆಲ್ಲುವ ಮೂಲಕ ಇತಿಹಾಸ ಸೃಷ್ಟಿಸಿದ್ದೇವೆ. ಅದೇ ಸಮಯದಲ್ಲಿ, ಬಂಗಾಳ, ತ್ರಿಪುರ ರಾಜ್ಯಗಳಲ್ಲಿ ನಾವು ಹಿನ್ನಡೆಯನ್ನು ಎದುರಿಸಿದೆವು. ಇವುಗಳನ್ನು ಗುರುತಿಸಿ ಸರಿಪಡಿಸಿಕೊಂಡು ಮುಂದಕ್ಕೆ ಸಾಗಲು ಅಲ್ಲಿ ನಮ್ಮ ಸಂಗಾತಿಗಳು ಹೋರಾಡುತ್ತಿದ್ದಾರೆ.” ಎಂದು ಹೇಳಿದರು.

ದೇಶದಲ್ಲಿ ಪ್ರಸ್ತುತ ಪ್ರತಿಗಾಮಿ ಶಕ್ತಿಗಳಾದ ಕೋಮುವಾದಿ ಮತ್ತು ಕಾರ್ಪೊರೇಟ್ ಶಕ್ತಿಗಳ ಕೂಟವು ಅಧಿಕಾರದಲ್ಲಿದೆ ಎನ್ನುತ್ತ, ನವ–ಫ್ಯಾಸಿಸ್ಟ್ ನೀತಿಗಳನ್ನು ದೇಶದ ಮೇಲೆ ಹೇರುತ್ತ, ಭಯೋತ್ಪಾದನೆಯ ವಾತಾವರಣವನ್ನು ಸೃಷ್ಟಿಸುತ್ತಿದೆ. ಈ ನೀತಿಗಳ ವಿರುದ್ಧ ಜನರನ್ನು ಸಂಘಟಿಸಲು ಮುಂದಾಗಬೇಕೆಂದು 24ನೇ ಮಹಾಧಿವೇಶನ ಕರೆ ನೀಡಿದೆ. ಆ ಗುರಿಗಳನ್ನು ಸಾಧಿಸಲು ಸಿಪಿಐ(ಎಂ) ಮತ್ತು ಎಡ ಪಕ್ಷಗಳನ್ನು ಬಲಪಡಿಸಬೇಕು ಎಂದು ಹೇಳಿದರು.

ತಮ್ಮ ಭಾಷಣದಲ್ಲಿ ಇತ್ತೀಚೆಗೆ ನಿಧನರಾದ ಸೀತಾರಾಮ್ ಯೆಚೂರಿ, ಕೊಡಿಯೇರಿ ಬಾಲಕೃಷ್ಣನ್ ಮತ್ತು ಬುದ್ಧದೇಬ್ ಭಟ್ಟಾಚಾರ್ಯರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ತಮಿಳುನಾಡಿನೊಂದಿಗಿನ ತಮಗಿರುವ ಸಂಬಂಧವನ್ನು ಅವರು ನೆನಪಿಸಿಕೊಂಡರು.

## ಬೆವರ ಲೋಕದೆಡೆಗೆ ಸೆಳೆದ ಜನಮಾನಸ...... ಪುಟ 9 ರಿಂದ

ಆದಾಯದ ಒಂದು ಭಾಗ (ಕೇಂದ್ರ ಸಮಿತಿಯ ನಿರ್ಣಯದಂತೆ) ಲೆವಿ ಕೊಡುವುದು. ಪಕ್ಷವನ್ನು ಮುನ್ನಡೆಸಲು ಜನಸಮೂಹವನ್ನು ಹೋರಾಟಕ್ಕೆ ಅಣಿಗೊಳಿಸಲು, ಶ್ರಮಿಕ ಪರವಾದ ಅಭಿಪ್ರಾಯ ಪಸರಿಸಲು ಪಕ್ಷದ ಪತ್ರಿಕೆಯನ್ನು ಸಾಹಿತ್ಯವನ್ನು ಓದಬೇಕು. ಪತ್ರಿಕೆಗೆ ಚಂದಾದಾರಗಾಬೇಕು ಮತ್ತು ಮಾಡಿಸಬೇಕು. ಪಕ್ಷದ ಸಭೆಗಳು ಬಹಳ ಮುಖ್ಯ. ಆದ್ದರಿಂದ ಸಭೆಗಳಿಗೆ ಬಾಗವಹಿಸಬೇಕು.

**ಸಾಮೂಹಿಕ ತೀರ್ಮಾನ, ವೈಯಕ್ತಿಕ ಜವಾಬ್ದಾರಿ**

ವ್ಯಕ್ತಿ ಕೇಂದ್ರಿತವಲ್ಲ. ಸಮಷ್ಠಿಕೇಂದ್ರಿತವಾದ ಚಿಂತನೆಗಳಿಂದ ಬದಲಾವಣೆ ಸಾಧ್ಯ. ಸಭೆಯಲ್ಲಿ ಕೈಗೊಂಡ ತೀರ್ಮಾನಗಳನ್ನು ವೈಯಕ್ತಿಕವಾಗಿ ಜಾರಿಗೊಳಿಸಲು ಜವಾಬ್ದಾರಿ ಹೊರಬೇಕು. ‘ಸಾಮೂಹಿಕ ತೀರ್ಮಾನ, ವೈಯಕ್ತಿಕ ಜವಾಬ್ದಾರಿ’. ಇವುಗಳಿಗೆ ಬದ್ಧರಾಗಿದ್ದಲ್ಲಿ ಪಕ್ಷದ ಸದಸ್ಯರಾಗಿರಲು ಸಾಧ್ಯ. ಕಾಲಕಾಲಕ್ಕೆ ನಡೆಯುವ ತರಗತಿಗಳಲ್ಲಿ ಇನ್ನಷ್ಟು ಅರಿವನ್ನು ಹೆಚ್ಚಿಸಿಕೊಳ್ಳಬೇಕು. ಸಾಮೂಹಿಕ ಸಂಘಟನೆಗಳು ಸ್ವತಂತ್ರ. ಆದರೆ ಅವುಗಳನ್ನು ಪ್ರಜಾಸತ್ತಾತ್ಮಕವಾಗಿ ಮುನ್ನಡೆಸಬೇಕಾದ ಜವಾಬ್ದಾರಿ ಪಕ್ಷದ ಸದಸ್ಯರದ್ದು. ಸಾಮೂಹಿಕ ಸಂಘಟನೆಗಳನ್ನು ನಡೆಸುವ ಮತ್ತು ಅಲ್ಲಿಂದ ಪಕ್ಷಕ್ಕೆ ಸದಸ್ಯರನ್ನು ತರುವುದಕ್ಕಾಗಿ ಮಾರ್ಗದರ್ಶನವು ಪಕ್ಷದ ಮೇಲ್ಸಮಿತಿ ಮಾಡುವುದು. ಫ್ರ್ಯಾಕ್ಷನ್ ಮತ್ತು ಉಪಸಮಿತಿಗಳು ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳ ನಡುವಿನ ಸೇತುವೆಯಾಗಿರುತ್ತವೆ. ಇವುಗಳು ನಿರಂತರವಾಗಿ ಸಭೆ ಸೇರುವ ಕ್ರಮಬದ್ಧವಾದ ಕಾರ್ಯನಿರ್ವಹಣೆಯಲ್ಲಿ ಇರಬೇಕಾದ ಅಗತ್ಯವಿರುತ್ತದೆ. ಆಗಲೇ ಪಕ್ಷದ ಮತ್ತು ಸಾಮೂಹಿಕ ಸಂಘಟನೆಗಳ ಬೆಳವಣಿಗೆಯು ತಾತ್ವಿಕ ನೆಲೆಯಲ್ಲಿ ಇರುವುದು. ಈ ಜವಾಬ್ದಾರಿ ಪ್ರತಿ ಸದಸ್ಯರು ನಿರ್ವಹಿಸಬೇಕು. ಇದಾಗಿದೆಯೆ? ಕಳೆದ ಮೂರು ವರ್ಷಗಳಲ್ಲಿ ಪಕ್ಷದ ಸಂಘಟನೆಯನ್ನು ಕ್ವಾಲಿಟಿಯಲ್ಲಿಯೂ ಕ್ವಾಂಟಿಟಿಯಲ್ಲಿಯೂ ಎಷ್ಟು ಬೆಳವಣಿಗೆಯಾಗಿದೆ? ಇದಕ್ಕಾಗಿ ಇರುವ ಎಲ್ಲ ಹಂತಗಳ ಸಮಿತಿಗಳು ಹೇಗೆ ಕಾರ್ಯ ನಿರ್ವಹಿಸಿವೆ? ಕಚೇರಿ, ವಾಚನಾಲಯ, ಸಾಹಿತ್ಯ ರಚನೆ ಮುಂತಾದ ಎಲ್ಲ ಅಂಶಗಳ ಮೇಲೆ ಪ್ರತಿನಿಧಿಗಳು ಮಾತನಾಡಿದರು. ಎಲ್ಲ ರಾಜ್ಯಗಳ ಅನುಭವವು ವಿಶಿಷ್ಟ ಬಗೆಯಿಂದ ಕೂಡಿತ್ತು. ನನಗೆ ಬಹಳ ಆಸಕ್ತಿ ಇರುವ ವಿಷಯ ಪಕ್ಷದ ಸಂಘಟನೆಯಾಗಿದೆ.

**ಮಹತ್ವದ ನಿರ್ಣಯಗಳು**

ಸಮ್ಮೇಳನವು 22 ಪ್ರಮುಖ ನಿರ್ಣಯಗಳನ್ನು ಪಾಸು ಮಾಡಿತು. ಒಂದಕ್ಕಿಂತ ಒಂದು ಮಹತ್ವದ ನಿರ್ಣಯಗಳು. ನಾನು ಮಿಡಿಯುವ ಜನಸಮುದಾಯಗಳಲ್ಲಿ ಟ್ರಾನ್ಸ್ ಜೆಂಡರ್ ಸಹ ಒಂದು. ಅವರನ್ನು ಕೋರ್ಟು ಮೂರನೇ ಲಿಂಗಿಗಳೆಂದು ಕರೆಯುತ್ತದೆ. ಸಮಾಜವು ಅನೇಕ ಹೆಸರುಗಳನ್ನು ನಾಮಕರಣ ಮಾಡಿದೆ. ಆದರೆ ನನ್ನ ಪಾಲಿಗೆ ಅವರು ಮಹಿಳೆಯರು. ಮಾನವರ ಉಗಮ ವಿಕಾಸದ ಯಾವ ಹಂತದಲ್ಲಿ ಲಿಂಗವನ್ನು ಆರೋಪಿಸಲಾಗಿದೆ ಎಂಬುದು ದೊಡ್ಡ ಇತಿಹಾಸವಿದೆ. ವಚನಕಾರರು ಸರಳವಾಗಿ ಹೇಳಿದ್ದು ಹೀಗೆ;

ಮೊಲೆ ಮೂಡಿ ಬಂದರೆ ಹೆಣ್ಣೆಂಬರು/ಗಡ್ಡ ಮೀಸೆ ಬಂದರೆ ಗಂಡೆಂಬರು/ನಡುವೆ ಸುಳಿವಾತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ ರಾಮನಾಥ/ ಎಂದು ಹೇಳಿದ್ದು ಜೇಡರ ದಾಸಿಮಯ್ಯ.

ಇದಷ್ಟು ಸಾಕಲ್ಲವೆ ವೈಜ್ಞಾನಿಕವಾಗಿ ಜೀವ ಸಂಕುಲವನ್ನು ಅರಿಯಲು. ಅವರ ಹಕ್ಕುಗಳ ರಕ್ಷಣೆಗಾಗಿ ಕಾಯ್ದೆ ತಿದ್ದುಪಡಿ, ಆರೋಗ್ಯ ಸೇವೆಗಳ ಖಚಿತತೆಗಾಗಿ, ಬಜೆಟ್ ಹಂಚಿಕೆಯಲ್ಲಿ ಗಣನೀಯ ಪ್ರಮಾಣ ಮತ್ತು ವಾಸಯೋಗ್ಯ ವಸತಿಗಳಿಗಾಗಿ, ಅವರ ಗುರುತಿಸುವಿಕೆಗಾಗಿ ಮತ್ತು ರಕ್ಷಣೆಗಾಗಿ ಶಾಸನ ಮಾಡಲು ಮತ್ತು ಅವರನ್ನು ಸಮಾನವಾಗಿ ಪರಿಗಣಿಸಲು ಇತ್ಯಾದಿ ಹಕ್ಕೊತ್ತಾಯಗಳನ್ನು ಸಿಪಿಐಎಂ ಪಕ್ಷದ 24ನೇ ಮಹಾಧಿವೇಶನವು ನಿರ್ಣಯ ಪಾಸು ಮಾಡಿತು.

ಅಂಗವಿಕಲರ ಘನತೆ ಮತ್ತು ನ್ಯಾಯ ಖಚಿತತೆಗಾಗಿ ನಿರ್ಣಯ ಪಾಸು ಮಾಡಲಾಯಿತು. ಖಾಸಗಿ ವಲಯದಲ್ಲಿ ಉದ್ಯೋಗಗಳಲ್ಲಿ ಅಂಗವಿಕಲರ ಮೀಸಲಾತಿ ವಿಸ್ತರಣೆಗಾಗಿ, ಸಾಂದರ್ಭಿಕ ಮತ್ತು ಒಪ್ಪಂದದ ಉದ್ಯೋಗಗಳಿಗೆ ಶೇ.4%ರಷ್ಟು ಉದ್ಯೋಗ ಮೀಸಲಾತಿಗಾಗಿ, ಪಂಚಣಿ ಹಕ್ಕು ಕಾಯ್ದೆ ಜಾರಿಗಾಗಿ, ಪಿಂಚಣಿಯ ಪ್ರಮಾಣವನ್ನು ತಿಂಗಳಿಗೆ ರೂ.5000 ಗಳಿಗೆ ಹೆಚ್ಚಿಸಲಿಕ್ಕಾಗಿ, ಎಲ್ಲಾ ಅಂಗವಿಕಲರಿಗೆ ಎಎವಾಯ್ ಕಾರ್ಡುಗಳ ವಿತರಣೆಗಾಗಿ ಮತ್ತು ಆರೋಗ್ಯ–ಆರೈಕೆ ಭತ್ಯೆನ್ನು ಒದಗಿಸಲು ಆಗ್ರಹಿಸಿ ನಿರ್ಣಯ ಮಾಡಲಾಯಿತು.

ಆರ್‌ಎಸ್‌ಎಸ್, ಬಿಜೆಪಿ ಮತ್ತು ಸಂಘ ಪರಿವಾರ ಪೈಶಾಚಿಕ ದಾಳಿಗಳನ್ನು ಹಿಮ್ಮೆಟ್ಟಿಸಲು ಪರಿಣಾಮಕಾರಿ ಅಭಿಯಾನಗಳನ್ನು ನಡೆಸುವಂತೆ ಪಕ್ಷದ ಘಟಕಗಳಿಗೆ ಕರೆ ಕೊಡಲಾಯಿತು. ಈ ದಾಳಿಗಳನ್ನು ಬಲವಾಗಿ ಹಿಮ್ಮೆಟ್ಟಿಸಲು ದೊಡ್ಡ ಪ್ರಮಾಣದಲ್ಲಿ ಜನರು ಅಣಿನೆರೆಸಲು, ಜಾತ್ಯಾತೀತ ಪ್ರಜಾಪ್ರಭುತ್ವ ಸಂಘಟನೆಗಳನ್ನು ಒಟ್ಟುಗೂಡಿಸಿ ಅಭಿಯಾನಗಳಲ್ಲಿ ತೊಡಗಿಸಲು ಪಕ್ಷವು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡಬೇಕೆಂದು 24ನೇ ಮಹಾಧಿವೇಶನವು ಕರೆ ನೀಡಿತು.

ಮೇ 20 ರಂದು ದೇಶದಾದ್ಯಂತ ನಡೆಯುವ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲಿಸಿ ನಿರ್ಣಯ ಮಾಡಲಾಯಿತು. 24ನೇ ಮಹಾಧಿವೇಶನವು ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸುವಂತೆ ಒತ್ತಾಯಿಸಿ ಕಾರ್ಮಿಕ ವರ್ಗದ ಐಕ್ಯ ಹೋರಾಟವನ್ನು ಸಂಪೂರ್ಣ ಬೆಂಬಲಿಸಿ ನಿರ್ಣಯ ಪಾಸು ಮಾಡಲಾಯಿತು. ಮೇ 20 ರಂದು ನಡೆಯುವ ಸಾರ್ವತ್ರಿಕ ಮುಷ್ಕರಕ್ಕೆ ಸಕ್ರಿಯವಾಗಿ ಬೆಂಬಲಿಸುವಂತೆ ತನ್ನ ಎಲ್ಲಾ ಸಮಿತಿಗಳಿಗೂ ಶಾಖೆಗಳಿಗೂ ಕರೆ ನೀಡಿತು. ಬಂಡವಾಳಶಾಹಿ ವರ್ಗದ ಪರವಾಗಿ ಕಾರ್ಮಿಕ ಕಾಯ್ದೆಗಳನ್ನು ತಿದ್ದುಪಡಿ ಮಾಡಿ ನವ ಉದಾರವಾದವನ್ನು ಜಾರಿಗೊಳಿಸುವ ಪ್ರಯತ್ನಗಳನ್ನು ಮಹಾಧಿವೇಶನವು ತೀವ್ರವಾಗಿ ವಿರೋಧಿಸಿತು.

ಕೇರಳದ ಎಡ ಪ್ರಜಾಸತ್ತಾತ್ಮಕ ರಂಗ ಸರ್ಕಾರವನ್ನು ರಕ್ಷಿಸಲು ನಿರ್ಣಯ ಮಾಡಲಾಯಿತು. ಸ್ವಾತಂತ್ರ್ಯ ಸಮಗ್ರತೆ ಮತ್ತು ಪಾರದರ್ಶಕತೆಗಾಗಿ ಧ್ವನಿ ಎತ್ತಲು, ಜಾತಿ ಜನಗಣತಿ ಸೇರಿದಂತೆ ಸಾಮಾನ್ಯ ಜನಗಣತಿ ತಕ್ಷಣವೇ ನಡೆಸಲು, ಮೋದಿ ಸರಕಾರದ ‘ಒಂದು ರಾಷ್ಟ್ರ ಒಂದು ಚುನಾವಣೆ’ ಅಭಿಯಾನವನ್ನು ವಿರೋಧಿಸಲು, ಪ್ಯಾಲೆಸ್ತೇನ್ ಮೇಲಿನ ಇಸ್ರೇಲ್ ನ ಜನಾಂಗೀಯ ದಾಳಿಯನ್ನು ಖಂಡಿಸಿ, ವಿಭಜಕ ಮತ್ತು ಅನ್ಯಾಯದ ವಕ್ಫ್ ತಿದ್ದುಪಡಿ ಕಾಯ್ದೆಯನ್ನು ತಕ್ಷಣ ಹಿಂತೆಗೆದುಕೊಳ್ಳಲು, ಸಮಾಜವಾದಿ ಕ್ಯೂಬಾದೊಂದಿಗೆ ಒಗ್ಗಟ್ಟಿನೊಂದಿಗೆ ನಿಲ್ಲುವುದು, ಜಮ್ಮು ಮತ್ತು ಕಾಶ್ಮೀರದಲ್ಲಿ ಪೂರ್ಣ ರಾಜ್ಯತ್ವ ಮತ್ತು ಪ್ರಜಾಪ್ರಭುತ್ವವನ್ನು ಪುನ:ಸ್ಥಾಪಿಸಲು, ಕೃಷಿ ಮಾರುಕಟ್ಟೆ ಕುರಿತ ರಾಷ್ಟ್ರೀಯ ನೀತಿ ಚೌಕಟ್ಟು ಕರಡನ್ನು ಹಿಂತೆಗೆದುಕೊಳ್ಳಲು, ಮೂಲಭೂತ ಅಗ್ಯಗಳನ್ನು ಮೂಲಭೂತ ಹಕ್ಕುಗಳೆಂದು ಗುರುತಿಸಲು, ಎಸ್ ಸಿ, ಎಸ್ ಟಿ ಮತ್ತು ಓಬಿಸಿ ಗಳಿಗೆ ಮೀಸಲಾತಿಯನ್ನು ಖಾಸಗಿ ವಲಯಗಳಿಗೂ ವಿಸ್ತರಿಸಲು ಆಗ್ರಹಿಸಿ, ಸಾರ್ವಜನಿಕ ವಿದ್ಯುತ ಕ್ಷೇತ್ರದ ಮೇಲಿನ ಖಾಸಗೀಕರಣ ದಾಳಿಯನ್ನು ವಿರೋಧಿಸಿ, ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಕರಡು ನಿಯಮಗಳನ್ನು ವಿರೋಧಿಸಿ, ಮಹಿಳೆ ಮತ್ತು ಮಕ್ಕಳ ಮೇಲೆ ಹೆಚ್ಚುತ್ತಿರುವ ದೌರ್ಜನ್ಯದ ವಿರುದ್ಧ, ಭಾರತ ಸರ್ಕಾರದ ಆಳ ಸಮುದ್ರ ಗಣಿಗಾರಿಕೆ ನೀತಿಗೆ ವಿರೋಧಿಸಿ ಮತ್ತು ಯುವಜನರಲ್ಲಿ ಮಾದಕ ವ್ಯಸನದ ವಿರುದ್ಧ ಹೋರಾಡಲು ಮುಂತಾದ ಜ್ವಲಂತ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರಕ್ಕಾಗಿ 24ನೇ ಮಹಾಧಿವೇಶನವು ನಿರ್ಣಯಗಳನ್ನು ಪಾಸು ಮಾಡಿತು.

ವರದಿಗೆ, ನಿರ್ಣಯಗಳಿಗೆ ತಿದ್ದುಪಡಿಗಳನ್ನು ಆಹ್ವಾನಿಸಲಾಯಿತು. ಮತ್ತು ಬಂದ ಎಲ್ಲ ತಿದ್ದುಪಡಿಗಳನ್ನೂ ಪ್ರತಿನಿಧಿಗಳ ಮುಂದೆ ತರಲಾಯಿತು. ಒಪ್ಪಿಕೊಂಡಿರುವುಗಳನ್ನೂ ತಿರಸ್ಕರಿಸಿದವುಗಳನ್ನೂ ವಿವರಿಸಿಲಾಯಿತು. ಮತ್ತೆ ಅಭಿಪ್ರಾಯಗಳನ್ನು ಕೇಳಲಾಯಿತು. ನಂತರದಲ್ಲಿ ಸರ್ವಾನುಮತದಿಂದ ವರದಿಗಳನ್ನೂ ಮತ್ತು ನಿರ್ಣಯಗಳನ್ನು ಪಾಸು ಮಾಡಲಾಯಿತು. ಒಟ್ಟೂ ಪ್ರಕ್ರಿಯೆಯಲ್ಲಿ ವಿವೇಕಪೂರ್ಣವಾದ ಪ್ರಜಾಪ್ರಭುತ್ವದ ಸೌಂದರ್ಯದ ಪ್ರಭಾವಳಿಯು ಯಾರನ್ನಾದರೂ ಬೆರಗು ಮೂಡಿಸುವಂತಹದ್ದಾಗಿತ್ತು.

85 ಜನ ಸದಸ್ಯರನ್ನೊಳಗೊಂಡ ಕೇಂದ್ರ ಸಮಿತಿಯನ್ನು ಆಯ್ಕೆಯಾಯಿತು. ಕಾಂ. ಎಂ.ಎ.ಬೇಬಿಯವರನ್ನು ಕೇಂದ್ರ ಸಮಿತಿಯು ಪ್ರಧಾನ ಕಾರ್ಯದರ್ಶಿಯನ್ನಾಗಿ ಚುನಾಯಿಸಿದೆ. ಇಬ್ಬರು ಮಹಿಳೆಯರನ್ನೊಳಗೊಂಡ 18 ಜನ ಸಂಗಾತಿಗಳ ಪಾಲಿಟ್ ಬ್ಯೂರೋವನ್ನು ಕೇಂದ್ರ ಸಮಿತಿಯು ಆರಿಸಿದರು. ಈ ಬಾರಿ 17% ಮಾತ್ರ ಮಹಿಳೆಯರನ್ನು ಒಳಗೊಳ್ಳಲಾಗಿದೆ. ಆದರೆ ಮುಂದಿನ ಮಹಾಧಿವೇಶನದವರೆಗೂ 20% ಮಹಿಳೆಯರು ಒಳಗೊಳ್ಳುವಂತಾಗುವ ಗುರಿ ನಮ್ಮದಾಗಿದೆ ಎಂದು ಮಹಾಧಿವೇಶನವು ನುಡಿಯಿತು.

**ಮಹಾ ಮೆರವಣಿಗೆ–ವರ್ಣ ರಂಜಿತ ರ್‍ಯಾಲಿ**

ಮೂರು ಲಕ್ಷ ಶ್ರಮಜೀವಿಗಳ ಮಹಾ ಮೆರವಣಿಗೆಯಲ್ಲಿ ಭಾಗವಹಿಸುದೆಂದರೆ ಅದು ಸುಮ್ಮನೇ ಅಲ್ಲ. ಅದೊಂದು ವಿಭಿನ್ನ ಅನುಭವಜನ್ಯವಾದ ಭಾವಪೂರ್ಣ ಸಂದರ್ಭ. ಕೆಂಪು ಯೋಧರ ಗತ್ತಿನ ನಡಿಗೆ, ಮುಗಿಲೆಗ್ಹಾರಿದ ಕೆಂಬಾವುಟ, ದೊಡ್ಡ ಬಾವುಟಗಳಲ್ಲಿ ಜಗದ ಜಂಗಮ ಚೇಗುವೆರಾ ಮುಂತಾದ ಉತ್ಸಾಹದಾಯಕವಾದ ಮೆರವಣಿಗೆಯ ನಡುವಲ್ಲಿ ಸಮುದ್ರದೊಂದು ಹನಿಯಂತೆ ಮುಷ್ಠಿ ಎತ್ತುತ್ತಿದ್ದ ಪುಟ್ಟ ಪುಟ್ಟ ಕಂದಮ್ಮಗಳ ಭವಿಷ್ಯದ ನಕ್ಷತ್ರಗಳಂತೆ ಮಿಂಚು ಮಿಣುಕು. ಯುವಜನಾಂಗದ ಉದ್ಘೋಷ. ಸಮಾಜವಾದವೇ ಪರ್ಯಾಯವೆಂಬುದಕ್ಕೆ ಸಾಕ್ಷಿಯಾಗಿ ನೆಲಕ್ಕೆ ಬರೆಯುತ್ತಿರುವ ಬೆವರ ಹನಿಗಳ ಎಂದೂ ಅಳಿಸಲಾಗದ ಬರವಣಿಗೆ.

**24ನೇ ಅಖಿಲ ಭಾರತ ಮಹಾಧಿವೇಶನದ ಕೊನೆಯ ದಿನವಾದ ಏಪ್ರಿಲ್ 6ರಂದು, ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ವು 85 ಸದಸ್ಯರೊಂದಿಗೆ ಹೊಸ ಕೇಂದ್ರ ಸಮಿತಿಯನ್ನು ಆಯ್ಕೆ ಮಾಡಿತು. ಹೊಸ ಕೇಂದ್ರ ಸಮಿತಿಯು ಎಂ.ಎ. ಬೇಬಿ ಅವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ, 18 ಸದಸ್ಯರ ಪಾಲಿಟ್‌ಬ್ಯೂರೋವನ್ನು ಆಯ್ಕೆ ಮಾಡಿತು. ಪಾಲಿಟ್‌ಬ್ಯೂರೋ ಸದಸ್ಯರಲ್ಲಿ ಎಂಟು ಮಂದಿ ಹೊಸಬರು. 75 ವರ್ಷ ವಯಸ್ಸಿನ ಮಿತಿ ಮಾನದಂಡದ ಅನ್ವಯ ಕೆಲವು ಅನುಭವಿ ನಾಯಕರು ಕೇಂದ್ರ ಸಮಿತಿಗೆ ಆಯ್ಕೆಯಾಗಿಲ್ಲ. ಹಲವು ಜನಪರ ಹೋರಾಟಗಳ ಸಾರಥಿಗಳಾಗಿದ್ದ ಇವರ ಬಗ್ಗೆ ಸಂಕ್ಷಿಪ್ತವಾಗಿ ತಿಳಿದುಕೊಳ್ಳೋಣ.**

# ಕೇಂದ್ರ ಸಮಿತಿಯಿಂದ ಬಿಡುಗಡೆಯಾದ ಹಿರಿಯ ಸಂಗಾತಿಗಳು



## ಬೃಂದಾ ಕಾರತ್: ಪ್ರತಿಭಟನೆಗೆ ಮತ್ತೊಂದು ಹೆಸರು

ಬೃಂದಾ ಕಾರತ್ ಎಂಬುದು ರಾಜಿಯಿಲ್ಲದ ಹೋರಾಟಕ್ಕೆ ಮತ್ತೊಂದು ಹೆಸರು. ಬೃಂದಾ ಸಿಪಿಐ(ಎಂ)ನ ಪಾಲಿಟ್‌ಬ್ಯೂರೋದಲ್ಲಿ ಮೊದಲ ಮಹಿಳೆ. ಚಳುವಳಿಗಳ ಮುಂಚೂಣಿಯಲ್ಲಿದ್ದರೂ, ವಯಸ್ಸಿನ ನಿರ್ಬಂಧಗಳಿಂದಾಗಿ ಅವರು ಕೇಂದ್ರ ಸಮಿತಿಗೆ ಆಯ್ಕೆಯಾಗಿಲ್ಲ. ದೆಹಲಿಯ ಜಹಾಂಗೀರ್‌ಪುರಿಯ ಕೊಳೆಗೇರಿಗಳನ್ನು ಕೆಡವಲು ಬುಲ್ಡೋಜರ್‌ಗಳ ಕಾರ್ಯಾಚರಣೆಯನ್ನು ತಡೆಯಲು ಧಾವಿಸುತ್ತಿರುವ ಅವರ ಚಿತ್ರವು ದೇಶಕ್ಕೆ ಒಂದು ಅಪರೂಪದ ದೃಶ್ಯ. ಅವರು ಕೈಗೆತ್ತಿಕೊಂಡ ಅಸಂಖ್ಯಾತ ಹೋರಾಟಗಳಲ್ಲಿ ಇದೂ ಒಂದು. ದಾಳಿಗೆ ಒಳಗಾದವರ ಕಣ್ಣೀರು ಒರೆಸಲು ಅವರು ದೇಶದ ವಿವಿಧ ದೂರದ ಭಾಗಗಳಿಗೆ ಪ್ರಯಾಣ ಬೆಳೆಸಿದರು. ಇತ್ತೀಚೆಗೆ ರಾಜಸ್ಥಾನದಲ್ಲಿ ಎರಡು ವರ್ಷದ ಮಗುವನ್ನು ಪೊಲೀಸರು ತಮ್ಮ ಬೂಟುಗಳಿಂದ ತುಳಿದು ಕೊಂದ ದುರಂತ ಘಟನೆಯನ್ನು ರಾಷ್ಟ್ರೀಯ ಚರ್ಚೆಯನ್ನಾಗಿ ಪರಿವರ್ತಿಸಿದ್ದು ಅವರ ಧೈರ್ಯ. ರಾಜ್ಯಸಭೆಯ ಸದಸ್ಯರಾಗಿದ್ದ ಸಮಯದಲ್ಲಿಯೂ ಸಹ, ಅವರು ತಮ್ಮ ಸಂಸದೀಯ ಕೆಲಸವನ್ನು ಜನತೆಯ ಹೋರಾಟವಾಗಿ ಪರಿವರ್ತಿಸಿದರು.

ವಿಯೆಟ್ನಾಂ ಯುದ್ಧದ ಸಮಯದಲ್ಲಿ ಜಗತ್ತನ್ನು ವ್ಯಾಪಿಸಿದ್ದ ಯುದ್ಧ ವಿರೋಧಿ ಚಳುವಳಿಯಿಂದ ಅವರು ಎಡಪಂಥೀಯ ರಾಜಕೀಯದತ್ತ ಆಕರ್ಷಿತರಾದರು. ಏರ್ ಇಂಡಿಯಾದ ಲಂಡನ್ ಕಚೇರಿಯಲ್ಲಿ ಉದ್ಯೋಗಿಯಾಗಿದ್ದ ಬೃಂದಾ, ಬ್ರಿಟನ್‌ನಲ್ಲಿ ಯುದ್ಧ ವಿರೋಧಿ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದರು. 1970ರಲ್ಲಿ ಅವರು ತಮ್ಮ ಏರ್ ಇಂಡಿಯಾ ಕೆಲಸಕ್ಕೆ ರಾಜೀನಾಮೆ ನೀಡಿ, ಕೋಲ್ಕತ್ತಾಗೆ ಬಂದು ಸಿಪಿಐ(ಎಂ) ಕಾರ್ಯಕರ್ತರಾದರು. 1975ರಲ್ಲಿ ತಮ್ಮ ಕಾರ್ಯಾಚರಣೆಗಳನ್ನು ದೆಹಲಿಗೆ ಸ್ಥಳಾಂತರಿಸಿದರು. ಜವಳಿ ಮತ್ತು ಕೈಮಗ್ಗ ಕಾರ್ಮಿಕರನ್ನು ಸಂಘಟಿಸಿ, ಟ್ರೇಡ್ ಯೂನಿಯನ್ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಅವರು 1978ರಲ್ಲಿ ಸಂಘದ ಕಾರ್ಯದರ್ಶಿಯಾದರು. 1979ರಲ್ಲಿ ಮಹಿಳೆಯರನ್ನು ಸಂಘಟಿಸಿ, ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ(ಎಐಡಿಡಬ್ಲ್ಯೂಎ)ದ ದೆಹಲಿ ಶಾಖೆಯನ್ನು ರಚಿಸಿದರು.

1978ರಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿಗೆ ಸೇರಿದರು. 1992ರಲ್ಲಿ, ಎಐಡಿಡಬ್ಲ್ಯೂಎ ದ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. 12 ವರ್ಷಗಳ ಕಾಲ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಬೃಂದಾ, ಮಹಿಳಾ ಸಂಘಟನೆಯನ್ನು ಬಲವಾದ ಸಂಘಟನೆಯಾಗಿ ನಿರ್ಮಿಸಿದರು. 1995ರಲ್ಲಿ ಚಂಡೀಗಢದಲ್ಲಿ ನಡೆದ ಪಕ್ಷದ ಮಹಾಧಿವೇಶನದಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿಗೆ ಆಯ್ಕೆಯಾದರು. ಅವರಿಗೆ 2005ರಲ್ಲಿ ಪಾಲಿಟ್‌ಬ್ಯೂರೋದಲ್ಲಿ ಸ್ಥಾನ. ಈಗ ಬೃಂದಾ ಕಾರತ್ ಅವರು ಕೇಂದ್ರಸಮಿತಿಗೆ ವಿಶೇಷ ಆಹ್ವಾನಿತರಾಗಿರುತ್ತಾರೆ.

1947ರ ಅಕ್ಟೋಬರ್ 17ರಂದು ಕೋಲ್ಕತ್ತಾದಲ್ಲಿ ಸೂರಜ್ ಲಾಲ್ ದಾಸ್ ಮತ್ತು ಓಶ್ರುಕೋನ ಮಿತ್ರ ದಂಪತಿಗಳಿಗೆ ಬೃಂದಾ ಜನಿಸಿದರು. ಅವರು ಕೋಲ್ಕತ್ತಾ, ಡೆಹ್ರಾಡೂನ್ ಮತ್ತು ದೆಹಲಿಯಲ್ಲಿ ವಿದ್ಯಾಭ್ಯಾಸ ಮಾಡಿದರು. ಬೃಂದಾ ಮತ್ತು ಪ್ರಕಾಶ್ ಕಾರಟ್ ತುರ್ತು ಪರಿಸ್ಥಿತಿಯ ಸಮಯದಲ್ಲಿ ವಿವಾಹವಾದರು.

## ಮಾಣಿಕ್ ಸರ್ಕಾರ್: ಸರಳ ಜೀವನದ ಸಂಕೇತ

ಮಾಣಿಕ್ ಸರ್ಕಾರ್ ಹೆಸರು ಕೇಳಿದಾಗ ಸರಳ ಜೀವನ ನೆನಪಿಗೆ ಬರುತ್ತದೆ. 20 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದರೂ, ಅವರ ಸರಳವಾದ ಜೀವನಶೈಲಿ ಯುವಕರಿಗೆ ಸ್ಫೂರ್ತಿ ನೀಡುತ್ತದೆ. ಇದು ರಾಜಕೀಯ ನಾಯಕರಿಗೆ ಮಾದರಿಯಾಗಿ ನಿಲ್ಲುತ್ತದೆ. ಪಾಲಿಟ್‌ಬ್ಯೂರೋ ಸದಸ್ಯರಾಗಿ 27 ವರ್ಷಗಳ ಕಾಲ ರಾಷ್ಟ್ರೀಯ ಮಟ್ಟದಲ್ಲಿ ಪಕ್ಷದ ಚಟುವಟಿಕೆಗಳನ್ನು ಮುನ್ನಡೆಸಿದ ನಂತರ, ಮಾಣಿಕ್ ಸರ್ಕಾರ್ ಹೊಸ ಪೀಳಿಗೆಗೆ ಮಾರ್ಗದರ್ಶಕರಾಗಿದ್ದಾರೆ. ಅವರು 1998ರಲ್ಲಿ 49ನೇ ವಯಸ್ಸಿನಲ್ಲಿ ಮೊದಲ ಬಾರಿಗೆ ಪಾಲಿಟ್‌ಬ್ಯೂರೋ ಸದಸ್ಯರಾಗಿ ಆಯ್ಕೆಯಾದರು. ಅದೇ ವರ್ಷ ಅವರು ತ್ರಿಪುರಾದ ಮುಖ್ಯಮಂತ್ರಿಯಾಗಿಯೂ ಆಯ್ಕೆಯಾದರು.

ಮಾಣಿಕ್ ಸರ್ಕಾರ್ ವಿದ್ಯಾರ್ಥಿ ಚಳವಳಿಯ ಮೂಲಕ ರಾಜಕೀಯಕ್ಕೆ ಪ್ರವೇಶಿಸಿದರು. 1968ರಲ್ಲಿ, 19ನೇ ವಯಸ್ಸಿನಲ್ಲಿಯೇ ಅವರು ಸಿಪಿಐ(ಎಂ) ಸೇರಿದರು. ತ್ರಿಪುರಾದಲ್ಲಿ ಕಾಂಗ್ರೆಸ್ ಆಡಳಿತದ



ವಿರುದ್ಧ ಹಲವಾರು ವಿದ್ಯಾರ್ಥಿ ಚಳುವಳಿಗಳಿಗೆ ನಾಯಕತ್ವ ನೀಡಿದರು. ತನ್ನ 23ನೇ ವಯಸ್ಸಿನಲ್ಲಿ ಪಕ್ಷದ ರಾಜ್ಯ ಸಮಿತಿಯ ಸದಸ್ಯರಾದರು. 1972ರ ಪಕ್ಷದ ಮಹಾಧಿವೇಶನದಿಂದ ಆರಂಭಗೊಂಡು, ನಂತರದ ಪ್ರತಿಯೊಂದು ಮಹಾಧಿವೇಶನದಲ್ಲಿಯೂ ಅವರು ಪ್ರತಿನಿಧಿಯಾಗಿದ್ದಾರೆ. ಮಾಣಿಕ್ ಸರ್ಕಾರ್ ಅವರ ಸರಳತೆಯು ರಾಷ್ಟ್ರದ ಗಮನ ಸೆಳೆಯಿತು. ರಾಷ್ಟ್ರೀಯ ಮಾಧ್ಯಮಗಳು ಅವರನ್ನು ಅತ್ಯಂತ ಬಡ ಮುಖ್ಯಮಂತ್ರಿ ಎಂದು ಬಣ್ಣಿಸಿದವು. ಇನ್ನು ಮುಂದೆ ಕೇಂದ್ರ ಸಮಿತಿಗೆ ವಿಶೇಷ ಆಹ್ವಾನಿತರಾಗಿ, ಅವರು ಸಿಪಿಐ(ಎಂ) ಚಟುವಟಿಕೆಗಳಿಗೆ ನಾಯಕತ್ವ ವಹಿಸುತ್ತಾರೆ.

## ಜಿ. ರಾಮಕೃಷ್ಣನ್: ತಮಿಳರ ಹೋರಾಟ

ಜಿ. ರಾಮಕೃಷ್ಣನ್ ತಮಿಳರ ಹೋರಾಟಗಳಲ್ಲಿ ಚಿರಪರಿಚಿತರು. ತಮಿಳುನಾಡಿನಲ್ಲಿ ಪಕ್ಷವನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. 2015ರಲ್ಲಿ, ವಿಶಾಖಪಟ್ಟಣಂ ನಲ್ಲಿ ನಡೆದ ಪಕ್ಷದ ಮಹಾಧಿವೇಶನದಲ್ಲಿ ಪಾಲಿಟ್ ಬ್ಯೂರೋ ಸದಸ್ಯರಾದರು. ಇವರು ವಯಸ್ಸಿನ ನಿರ್ಬಂಧಗಳಿಂದಾಗಿ ಕೇಂದ್ರ ಸಮಿತಿಗೆ ಆಯ್ಕೆಯಾಗಿಲ್ಲ. ಈಗ ಪಕ್ಷದ ಕೇಂದ್ರ ನಿಯಂತ್ರಣ ಆಯೋಗದಲ್ಲಿದ್ದಾರೆ. ವಿವಿಧ ಕಾರ್ಮಿಕ ಹೋರಾಟಗಳು, ಜಾತಿ ವಿರೋಧಿ ಹೋರಾಟಗಳಿಗೆ



ಅವರು ನಾಯಕತ್ವ ವಹಿಸಿದ್ದರು.

ಜಿ. ರಾಮಕೃಷ್ಣನ್ ಅವರು ಜೂನ್ 6, 1949 ರಂದು ವಿಲ್ಲುಪುರಂ ಜಿಲ್ಲೆಯ ಮೇಮಲೂರಿನಲ್ಲಿ ಜನಿಸಿದರು. ಅವರು ವಕೀಲರು. ವಿದ್ಯಾರ್ಥಿ ಚಳವಳಿಯ ಮೂಲಕ ಸಿಪಿಐ(ಎಂ) ಸೇರಿದರು. ಕಾನೂನು ಅಧ್ಯಯನಕ್ಕಾಗಿ ಮದ್ರಾಸ್‌ಗೆ ಬಂದ ನಂತರ ಎಸ್‌ಎಫ್‌ಐನ ಭಾಗವಾದರು. 1969ರಲ್ಲಿ ಸಿಪಿಐ(ಎಂ) ಸೇರಿದರು. ಎಂಟು ವರ್ಷಗಳ ಕಾಲ ಕಡಲೂರು ನ್ಯಾಯಾಲಯದಲ್ಲಿ ಪ್ರಾಕ್ಟೀಸ್ ಮಾಡಿದರು. 1981ರಲ್ಲಿ ಪೂರ್ಣಾವಧಿ ಸದಸ್ಯರಾದರು. 2008ರಲ್ಲಿ ಕೇಂದ್ರ ಸಮಿತಿಗೆ ಸೇರಿದರು.

## ಸೂರ್ಯಕಾಂತ ಮಿಶ್ರಾ: ಹೋರಾಟದ ಕಿಚ್ಚು ಹೊತ್ತಿಸಿದ ಆರೋಗ್ಯ ಕಾರ್ಯಕರ್ತ

ಆರೋಗ್ಯ ಕ್ಷೇತ್ರದಲ್ಲಿ ತಮ್ಮ ಕೆಲಸದ ಜೊತೆಗೆ ಕಾರ್ಮಿಕರನ್ನು ಸಂಘಟಿಸುವಲ್ಲಿ ತೊಡಗಿಸಿಕೊಂಡಿದ್ದ ಸೂರ್ಯಕಾಂತ ಮಿಶ್ರಾ ಅವರು ಪಶ್ಚಿಮ ಬಂಗಾಳದಲ್ಲಿ ಪ್ರತಿಭಟನೆಗಳಲ್ಲಿ ಸಕ್ರಿಯರಾಗಿದ್ದರು. ವಯಸ್ಸಿನ ನಿರ್ಬಂಧಗಳಿಂದಾಗಿ ಕೇಂದ್ರ ಸಮಿತಿಗೆ ಆಯ್ಕೆಯಾಗಿಲ್ಲ.

ಅವರು ಪಶ್ಚಿಮ ಮಿಡ್ನಾಪುರ ಜಿಲ್ಲೆಯ ನಾರಾಯಣಗಢ ನಿವಾಸಿ. ವಿದ್ಯಾರ್ಥಿ ಚಳವಳಿಯ ಮೂಲಕ ಸಾರ್ವಜನಿಕ ಕ್ಷೇತ್ರವನ್ನು ಪ್ರವೇಶಿಸಿದರು. ಕಟಕ್ ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಎಸ್‌ಎಫ್‌ಐ ಒಡಿಶಾ ರಾಜ್ಯ ಸಮಿತಿಗೆ ಸೇರಿದರು. ವಿದ್ಯಾಭ್ಯಾಸದ ನಂತರ, ಅವರು ತಮ್ಮ ಸ್ವಗ್ರಾಮಕ್ಕೆ ಮರಳಿ ಬಂದು ಯುವಜನ ಚಳವಳಿಯಲ್ಲಿ




ಸಕ್ರಿಯವಾಗಿ ಭಾಗವಹಿಸಿದರು. ವೈದ್ಯಕೀಯ ಸೇವೆಯ ಜೊತೆಗೆ, ಪ್ರಜೆಗಳ ಸೇವೆಯಲ್ಲೂ ಭಾಗವಹಿಸಿದರು. 1977ರಲ್ಲಿ ವಿಧಾನಸಭೆಗೆ ಸ್ಪರ್ಧಿಸಿ ಸೋತರು. ಅವರು ಮಿಡ್ನಾಪುರ ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾದರು. ನಂತರ ಐದು ಬಾರಿ ವಿಧಾನಸಭೆಗೆ ಚುನಾಯಿತರಾದರು. 1996ರಿಂದ 2011 ರವರೆಗೆ ಪಶ್ಚಿಮ ಬಂಗಾಳದ ರಾಜ್ಯ ಸಚಿವ ಸಂಪುಟದ ಸದಸ್ಯರಾಗಿದ್ದರು. 2011 ರಿಂದ 2016 ರವರೆಗೆ ವಿರೋಧ ಪಕ್ಷದ ನಾಯಕರಾಗಿದ್ದರು. 2002ರಲ್ಲಿ ಕೇಂದ್ರ ಸಮಿತಿಗೆ ಮತ್ತು 2012ರಲ್ಲಿ ಪಾಲಿಟ್‌ಬ್ಯೂರೋಗೆ ಸೇರಿದರು. ಅವರ ಪತ್ನಿ ಉಷಾ ಮಹಿಳಾ ಸಂಘದ ಕಾರ್ಯಕರ್ತೆ. ಅವರಿಗೆ ಇಬ್ಬರು ಮಕ್ಕಳಿದ್ದಾರೆ.

## ಎ.ಕೆ. ಬಾಲನ್: ಪ್ರತಿಭಟನೆಗಳ ಮೂಲಕ ನಾಯಕತ್ವಕ್ಕೆ

ಪ್ರತಿಭಟನೆಗಳ ಮೂಲಕ ನಾಯಕತ್ವಕ್ಕೆ ಏರಿದ ಎ.ಕೆ.ಬಾಲನ್, ದಶಕದ ಕಾಲ ಸಿಪಿಐ(ಎಂ) ಕೇಂದ್ರ ಸಮಿತಿಯಲ್ಲಿ ಕೆಲಸ ಮಾಡಿದ ನಂತರ, ವಯಸ್ಸಿನ ನಿರ್ಬಂಧದ ಕಾರಣದಿಂದ ಕೇಂದ್ರ ಸಮಿತಿಗೆ ಆಯ್ಕೆಯಾಗಿಲ್ಲ.

ಎ.ಕೆ.ಬಾಲನ್ ವಿದ್ಯಾರ್ಥಿ ಚಳವಳಿಯ ಮೂಲಕ ರಾಜಕೀಯ ಪ್ರವೇಶಿಸಿ, ಕೇರಳ ರಾಜ್ಯ ವಿದ್ಯಾರ್ಥಿ ಒಕ್ಕೂಟ ಸಮಿತಿಯ (ಎಸ್‌ಎಫ್‌ಐ) ರಾಜ್ಯ ಅಧ್ಯಕ್ಷರಾಗಿ ಮತ್ತು ಕಾರ್ಯದರ್ಶಿಯಾಗಿ ಜವಾಬ್ದಾರಿ ನಿರ್ವಹಿಸಿದರು. 1968ರಲ್ಲಿ ತಲಶ್ಶೇರಿಯಲ್ಲಿ ನಡೆದ ವಿದ್ಯಾರ್ಥಿಗಳ ಪ್ರತಿಭಟನೆಯಲ್ಲಿ ಭಾಗವಹಿಸಿದ್ದಕ್ಕಾಗಿ ಅವರನ್ನು ಪೊಲೀಸರು ದಾರುಣವಾಗಿ ಥಳಿಸಿದರು. ಅವರು 'ಭೂ ಚಳವಳಿ'ಯಲ್ಲಿ ಭಾಗವಹಿಸಿದ್ದಕ್ಕಾಗಿ ಕಣ್ಣೂರು ಕೇಂದ್ರ ಕಾರಾಗೃಹದಲ್ಲಿ 30 ದಿನಗಳ ಕಾಲ ಜೈಲು ಶಿಕ್ಷೆ ಅನುಭವಿಸಿದರು.

ಅವರು ಪಾಲಕ್ಕಾಡ್ ಜಿಲ್ಲಾ ಕೌನ್ಸಿಲ್ ಅಧ್ಯಕ್ಷರು. ನಾಲ್ಕು ಬಾರಿ ಶಾಸಕರಾಗಿ ಚುನಾಯಿತರಾದರು. 2006 ಮತ್ತು 2016ರಲ್ಲಿ ರಾಜ್ಯ ಸಚಿವ ಸಂಪುಟದ ಸದಸ್ಯರಾದರು. ವಿದ್ಯುತ್ ಮತ್ತು ಕಾನೂನಿನಂತಹ ಇಲಾಖೆಗಳನ್ನು ನಿರ್ವಹಿಸಿದರು. 1980ರಲ್ಲಿ ಒಟ್ಟಪಾಲಂ ಕ್ಷೇತ್ರದಿಂದ ಲೋಕಸಭೆಗೆ ಚುನಾಯಿತರಾದರು. 1997ರಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿಯ ಸದಸ್ಯರಾದರು. 2005ರಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿಯಲ್ಲಿ ಸೇರಿದರು.



2015ರಲ್ಲಿ ಕೇಂದ್ರ ಸಮಿತಿಯನ್ನು ಸೇರಿದರು.

ಕೋಝಿಕೋಡ್‌ನ ಸರ್ಕಾರಿ ಕಾನೂನು ಕಾಲೇಜಿನಿಂದ ಕಾನೂನು ಪದವಿ ಪಡೆದರು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಪ್ರೊಬೇಷನರಿ ಅಧಿಕಾರಿಯಾದರು. ಸಂಘಟನಾ ಕೆಲಸಕ್ಕಾಗಿ ತಮ್ಮ ಉದ್ಯೋಗವನ್ನು ತೊರೆದರು.

ಅವರು ಆಗಸ್ಟ್ 3, 1948ರಂದು ತುನೇರಿಯ ನಾದಪುರಂನಲ್ಲಿ ಕೇಳಪ್ಪನ್ ಮತ್ತು ಕುಂಜಿ ದಂಪತಿಗೆ ಜನಿಸಿದರು. ಅವರು ಸಣ್ಣಪುಟ್ಟ ಕೂಲಿ ಕೆಲಸಗಳನ್ನು ಮಾಡುವ ಮೂಲಕ ಅಧ್ಯಯನ ಮಾಡಲು ಒಂದು ಮಾರ್ಗವನ್ನು ಕಂಡುಕೊಂಡರು. ಕಲ್ಲಾಚ್ಚಿ ಶಾಲೆಯಲ್ಲಿ ವಿದ್ಯಾರ್ಥಿ ನಾಯಕರಾಗಿ ಮತ್ತು ತಲಶ್ಶೇರಿಯ ಬ್ರೆನ್ನನ್ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದರು.

# ಸಿಪಿಐ(ಎಂ)ನ 24ನೇ ಮಹಾಧಿವೇಶನದಲ್ಲಿ ಆಯ್ಕೆಯಾದ ಹೊಸ ಕೇಂದ್ರ ಸಮಿತಿ

1. ಪಿಣರಾಯಿ ವಿಜಯನ್
2. ಬಿ.ವಿ. ರಾಘವುಲು
3. ಎಂ.ಎ. ಬೇಬಿ
4. ತಪನ್ ಸೇನ್
5. ನೀಲೋತ್ಪಾಲ್ ಬಸು
6. ಮಹಮ್ಮದ್ ಸಲೀಂ
7. ಎ. ವಿಜಯರಾಘವನ್
8. ಅಶೋಕ್ ಧವಳೆ
9. ರಾಮಚಂದ್ರ ಡೋಮ್
10. ಎಂ. ವಿ. ಗೋವಿಂದನ್
11. ವಿ. ಶ್ರೀನಿವಾಸ ರಾವ್
12. ಸುಪ್ರಕಾಶ್ ತಲುಕ್ದರ್
13. ಇಸ್ಫಖಿರ್ ರೆಹಮಾನ್
14. ಲಲ್ಲನ್ ಚೌಧುರಿ
15. ಅವ್ಧೇಶ್ ಕುಮಾರ್
16. ಪ್ರಕಾಶ್ ವಿಪ್ಲವ್
17. ಯೂಸುಫ್ ತರಿಗಾಮಿ
18. ಪಿ. ಕೆ. ಶ್ರೀಮತಿ (ಮಹಿಳೆ)
19. ಇ. ಪಿ. ಜಯರಾಜನ್
20. ಥಾಮಸ್ ಐಸಾಕ್
21. ಕೆ. ಕೆ. ಶೈಲಜಾ (ಮಹಿಳೆ)
22. ಎಲಮರಮ್ ಕರೀಂ
23. ಕೆ. ರಾಧಾಕೃಷ್ಣನ್
24. ಕೆ. ಎನ್. ಬಾಲಗೋಪಾಲ್
25. ಪಿ. ರಾಜೀವ
26. ಪಿ. ಸತೀದೇವಿ (ಮಹಿಳೆ)
27. ಸಿ. ಎಸ್. ಸುಜಾತಾ (ಮಹಿಳೆ)
28. ಜಸ್ವಿಂದರ್ ಸಿಂಗ್
29. ಸುಖ್ವಿಂದರ್ ಸಿಂಗ್ ಸೆಖೋನ್
30. ಅಮ್ರ ರಾಮ್
31. ಕೆ. ಬಾಲಕೃಷ್ಣನ್
32. ಯು. ವಾಸುಕಿ (ಮಹಿಳೆ)
33. ಪಿ. ಸಂಪತ್
34. ಪಿ. ಷಣ್ಮುಗಂ
35. ಟಿ. ವೀರಭದ್ರಂ
36. ಜಿತೇಂದ್ರ ಚೌಧುರಿ
37. ಹೀರಾಲಾಲ್ ಯಾದವ್
38. ಶ್ರೀದೀಪ್ ಭಟ್ಟಾಚಾರ್ಯ
39. ಸುಜನ್ ಚಕ್ರವರ್ತಿ
40. ಅಭಾಸ್ ರಾಯ್ ಚೌಧರಿ
41. ಸಮಿಕ್ ಲಾಹಿರಿ
42. ಸುಮಿತ್ ದೇ
43. ಡೆಬ್ಲಿನಾ ಹೆಂಬ್ರಾಮ್ (ಮಹಿಳೆ)
44. ಕೆ. ಹೇಮಲತಾ (ಮಹಿಳೆ)
45. ರಾಜೇಂದ್ರ ಶರ್ಮಾ
46. ಎಸ್. ಪುಣ್ಯವತಿ (ಮಹಿಳೆ)
47. ಮುರಳೀಧರನ್
48. ಅರುಣ್ ಕುಮಾರ್
49. ವಿಜೂ ಕೃಷ್ಣನ್
50. ಮರಿಯಮ್ ಧವಳೆ (ಮಹಿಳೆ)
51. ಎ. ಆರ್. ಸಿಂಧು (ಮಹಿಳೆ)
52. ಆರ್. ಕರುಮಲೈಯನ್
53. ಕೆ. ಎನ್. ಉಮೇಶ್ (ಕರ್ನಾಟಕ)
54. ವಿಕ್ರಮ್ ಸಿಂಗ್

**ಹೊಸ ಸೇರ್ಪಡೆಗಳು:**

55. ಅನುರಾಗ್ ಸಕ್ಸೇನಾ
56. ಎಚ್. ಐ. ಭಟ್
57. ಪ್ರೇಮ್ ಚಂದ್
58. ಸಂಜಯ್ ಚೌಹಾಣ್
59. ಕೆ. ಪ್ರಕಾಶ್ (ಕರ್ನಾಟಕ)
60. ಟಿ. ಪಿ. ರಾಮಕೃಷ್ಣನ್
61. ಪುತಲತ್ ದಿನೇಶ
62. ಸಲೀಖಾ (ಮಹಿಳೆ)
63. ಅಜಿತ್ ನವಲೆ
64. ವಿನೋದ್ ನಿಕೋಲ್
65. ಸುರೇಶ್ ಪಾಣಿಗ್ರಹಿ
66. ಕಿಶನ್ ಪರೀಕ್
67. ಗುಣಶೇಖರನ್
68. ಜಾನ್ ವೆಸ್ಲಿ
69. ಎಸ್. ವೀರಯ್ಯ
70. ದೇಬಬ್ರತಾ ಘೋಷ್
71. ಸೈಯದ್ ಹುಸೇನ್
72. ಕೊನಿನಿಕಾ ಘೋಷ್ (ಮಹಿಳೆ)
73. ಮೀನಖಿ ಮುಖರ್ಜಿ (ಮಹಿಳೆ)
74. ಸಮನ್ ಪಾಥಕ್
75. ಮಾಣೆಕ್ ದೇ
76. ನರೇಶ್ ಜಮಾಟಿಯಾ
77. ರತನ್ ಭೌಮಿಕ್
78. ಕೃಷ್ಣ ರಕ್ಷಿತ್ (ಮಹಿಳೆ)
79. ಲೋಕನಾಥಂ
80. ಕೆ. ಬಾಲಭಾರತಿ (ಮಹಿಳೆ)
81. ರಮಾ ದೇವಿ (ಮಹಿಳೆ)
82. ಟಿ. ಜ್ಯೋತಿ (ಮಹಿಳೆ)
83. ರಾಜೇಂದ್ರ ಸಿಂಗ್ ನೇಗಿ
84. ಸಾಯಿಬಾಬು
85. ಖಾಲಿ

**ಕೇಂದ್ರ ಸಮಿತಿಯ ಖಾಯಂ ಆಹ್ವಾನಿತರು**

1. ಸುದೀಪ್ ದತ್ತಾ
2. ಬಾಲ್ ಸಿಂಗ್
3. ಜಾನ್ ಬ್ರಿಟಾಸ್
4. ಸುಧನ್ವ ದೇಶಪಾಂಡೆ

**ವಿಶೇಷ ಆಹ್ವಾನಿತರು:**

1. ಮಾಣಿಕ್ ಸರ್ಕಾರ್
2. ಪ್ರಕಾಶ್ ಕಾರಟ್
3. ಬೃಂದಾ ಕಾರಟ್ (ಮಹಿಳೆ)
4. ಸುಭಾಷಿಣಿ ಅಲಿ (ಮಹಿಳೆ)
5. ಎಸ್. ರಾಮಚಂದ್ರನ್ ಪಿಳ್ಳೈ
6. ಬಿಮನ್ ಬಸು


ಕೆ. ಪ್ರಕಾಶ್


ಕೆ. ಎನ್. ಉಮೇಶ್


ಯು. ಬಸವರಾಜು

7. ಹನ್ನನ್ ಮೊಲ್ಲಾ

**ಹೊಸದಾಗಿ ಆಯ್ಕೆಯಾದ ಕೇಂದ್ರ ಸಮಿತಿಯು 18 ಸದಸ್ಯರ ಪಾಲಿಟ್ ಬ್ಯೂರೋವನ್ನು ಆಯ್ಕೆ ಮಾಡಿದೆ:**

1. ಪಿಣರಾಯಿ ವಿಜಯನ್
2. ಎಂ.ಎ. ಬೇಬಿ
3. ಬಿ.ವಿ. ರಾಘವುಲು
4. ತಪನ್ ಸೇನ್
5. ನೀಲೋತ್ಪಲ್ ಬಸು
6. ಎ. ವಿಜಯರಾಘವನ್
7. ಮೊಹಮ್ಮದ್ ಸಲೀಂ
8. ಅಶೋಕ್ ಧವಳೆ
9. ರಾಮಚಂದ್ರ ಡೋಮ್
10. ಎಂ.ವಿ. ಗೋವಿಂದನ್
11. ಜಿತೇನ್ ಚೌಧುರಿ
12. ಕೆ. ಬಾಲಕೃಷ್ಣನ್
13. ಯು. ವಾಸುಕಿ (ಮಹಿಳೆ)
14. ಆಮ್ರಾ ರಾಮ್
15. ಶ್ರೀದೀಪ್ ಭಟ್ಟಾಚಾರ್ಯ
16. ವಿಜೂ ಕೃಷ್ಣನ್
17. ಮರಿಯಮ್ ಧವಳೆ (ಮಹಿಳೆ)
18. ಆರ್. ಅರುಣ್ ಕುಮಾರ್

ಕೇಂದ್ರ ಸಮಿತಿಯು **ಎಂ.ಎ.ಬೇಬಿ** ಅವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿತು.

**ಮಹಾಧಿವೇಶನವು ಈ ಕೆಳಗಿನ ಕೇಂದ್ರ ನಿಯಂತ್ರಣ ಆಯೋಗವನ್ನು ಆಯ್ಕೆ ಮಾಡಿದೆ:**

1. ಜಿ. ರಾಮಕೃಷ್ಣನ್
2. ಎಂ. ವಿಜಯಕುಮಾರ್
3. ಯು. ಬಸವರಾಜು (ಕರ್ನಾಟಕ)
4. ರಾಬಿನ್ ದೆಬ್
5. ಜೋಗೇಂದ್ರ ಶರ್ಮಾ
6. ರಮಾ ದಾಸ್ (ಮಹಿಳೆ)

ಕೇಂದ್ರ ನಿಯಂತ್ರಣ ಆಯೋಗವು ತನ್ನ ಮೊದಲ ಸಭೆಯಲ್ಲಿ **ಜಿ. ರಾಮಕೃಷ್ಣನ್** ಅವರನ್ನು ಅದರ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ.

## 18 ಸದಸ್ಯರ ಸಿಪಿಐ(ಎಂ) ಪಾಲಿಟ್ ಬ್ಯೂರೋ


ಎಂ.ಎ. ಬೇಬಿ


ಪಿಣರಾಯಿ ವಿಜಯನ್



ಬಿ.ವಿ. ರಾಘವುಲು


ತಪನ್ ಸೇನ್



ನೀಲೋತ್ಪಲ್ ಬಸು



ಮೊಹಮ್ಮದ್ ಸಲೀಂ


ಎ. ವಿಜಯರಾಘವನ್


ಅಶೋಕ್ ಧವಳೆ


ರಾಮಚಂದ್ರ ಡೋಮ್


ಎಂ.ವಿ. ಗೋವಿಂದನ್


ಆಮ್ರಾ ರಾಮ್


ವಿಜೂ ಕೃಷ್ಣನ್


ಮರಿಯಮ್ ಧವಳೆ


ಯು. ವಾಸುಕಿ


ಕೆ. ಬಾಲಕೃಷ್ಣನ್


ಜಿತೇನ್ ಚೌಧುರಿ


ಶ್ರೀದೀಪ್ ಭಟ್ಟಾಚಾರ್ಯ


ಆರ್. ಅರುಣ್ ಕುಮಾರ್



**ನವ-ಉದಾರವಾದ ಸೃಷ್ಟಿಸಿರುವ ಬಂಡವಾಳಶಾಹಿಯ ಆರ್ಥಿಕ ಬಿಕ್ಕಟ್ಟಿನ ಸಮಯಯಲ್ಲಿ ದೊಡ್ಡ ಬಂಡವಾಳದ ಪ್ರಾಬಲ್ಯವನ್ನು ಕಾಯ್ದುಕೊಳ್ಳುವುದಕ್ಕಾಗಿ, ಜನಗಳ ಗಮನವನ್ನು ಅವರನ್ನು ಬಾಧಿಸುವ ಜ್ವಲಂತ ಪ್ರಶ್ನೆಗಳಿಂದ ಬೇರೆಡೆಗೆ ತಿರುಗಿಸುವ ಕಥನವನ್ನು ಸೃಷ್ಟಿಸಲಾಗುತ್ತಿದೆ. ನವ-ಫ್ಯಾಸಿಸ್ಟ್ ಪಕ್ಷಗಳು ಇದಕ್ಕೆ ದೇಶದ ಒಳಗಿನ ಯಾವುದೋ ಒಂದು ಜನಾಂಗೀಯ ಅಥವ ಧಾರ್ಮಿಕ ಗುಂಪಿನ ಅನುಯಾಯಿಗಳನ್ನು "ಅನ್ಯ"ರೆಂದು ಗುರುತಿಸಿ, ಅವರ ವಿರುದ್ಧ ದ್ವೇಷವನ್ನು ಹುಟ್ಟುಹಾಕಿದರೆ, ಈ ನವ-ಉದಾರವಾದವನ್ನು ಸ್ವತಃ ಜಾರಿಗೆ ತಂದಿರುವ ಮಧ್ಯಮ-ಮಾರ್ಗೀ ರಾಜಕೀಯ ಪಕ್ಷಗಳು ಒಂದು ಬಾಹ್ಯ "ಶತ್ರು"ವಿನ ವಿರುದ್ಧ ದ್ವೇಷವನ್ನು ಹುಟ್ಟುಹಾಕುವ ಮೂಲಕ ಪ್ರಯತ್ನಿಸುತ್ತವೆ. ಯುರೋಪಿನ ಈ ರಾಜಕೀಯ ನಾಯಕರುಗಳಿಗೆ ರಷ್ಯಾವೇ ಈ ಬಾಹ್ಯ "ಶತ್ರು". ರಷ್ಯಾದಿಂದ ಬೆದರಿಕೆ ಇದೆ ಎಂದು ತೋರಿಸಿ ಒಂದೆಡೆಯಲ್ಲಿ ಶಸ್ತ್ರಾಸ್ತ್ರಗಳ ಮೇಲಿನ ವೆಚ್ಚವನ್ನು ಹೆಚ್ಚಿಸಿಕೊಳ್ಳಬಹುದು, ಇನ್ನೊಂದೆಡೆಯಲ್ಲಿ, ಯುರೋಪಿನಲ್ಲಿ ಇನ್ನೂ ಸ್ವಲ್ಪ ಮಟ್ಟಿಗೆ ಉಳಿದುಕೊಂಡಿರುವ ಎರಡನೇ ಮಹಾಯುದ್ಧಾನಂತರದ ಕಲ್ಯಾಣ ಪ್ರಭುತ್ವದ ಅಂಶಗಳನ್ನು ಹೆಚ್ಚಿನ ಪ್ರತಿರೋಧಗಳಿಲ್ಲದೆ ಕಳಚಿ ಹಾಕಬಹುದು ಎಂದು ಯುರೋಪಿನ ಆಳುವ ವಲಯಗಳು ಭಾವಿಸಿದಂತಿದೆ.**

**ಪ್ರೊ. ಪ್ರಭಾತ್ ಪಟ್ನಾಯಕ್ ಅನು:ಕೆ.ಎಂ.ನಾಗರಾಜ್**

# ಯುರೋಪಿನಲ್ಲಿ ರಷ್ಯಾ ವಿರೋಧಿ ಯುದ್ಧೋನ್ಮಾದ ಏಕೆ?




ರಷ್ಯಾದ ವಿರುದ್ಧ ಯುರೋಪ್ ಇಂದಿನ ದಿನಗಳಲ್ಲಿ ತೋರುತ್ತಿರುವ ಯುದ್ಧೋನ್ಮಾದವು ವಿಶ್ವ ಬಂಡವಾಳಶಾಹಿಯ ಗೊಂದಲಮಯ ವಿದ್ಯಮಾನಗಳಲ್ಲಿ ಒಂದು. ಯುರೋಪಿನ ದೇಶಗಳತ್ತ ರಷ್ಯಾವು ಸಾಮ್ರಾಜ್ಯಶಾಹಿ ಹವಣಿಕೆಯನ್ನು ಹೊಂದಿದೆ ಎಂದು ಯುರೋಪಿನ ಆಳುವ ವಲಯಗಳು ಪದೇ ಪದೇ ಹೇಳುತ್ತಿವೆ. ಇದೊಂದು ಅಸಂಬದ್ಧ ಹೇಳಿಕೆಯೇ ಸರಿ. ಹಾಗೆ ನೋಡಿದರೆ, ನ್ಯಾಟೋವನ್ನು (ಉತ್ತರ ಅಟ್ಲಾಂಟಿಕ್ ದೇಶಗಳ ಮಿಲಿಟರಿ ಕೂಟವನ್ನು) ರಷ್ಯಾದ ದಿಕ್ಕಿನಲ್ಲಿ ಒಂದಿಂಚಿನಷ್ಟೂ ವಿಸ್ತರಿಸುವುದಿಲ್ಲ ಎಂಬುದಾಗಿ ಈ ಕೂಟದ ಅಧಿನಾಯಕ ಅಮೆರಿಕವು ರಷ್ಯಾದ ಅಂದಿನ ಅಧ್ಯಕ್ಷ ಗೊರ್ಬಚೆವ್‌ಗೆ ಕೊಟ್ಟಿದ್ದ ಭರವಸೆಯನ್ನು ಮುರಿಯಲಾಗಿದೆ ಮತ್ತು ರಷ್ಯಾವನ್ನು ಕೆರಳಿಸುವ ಉದ್ದೇಶದಿಂದಲೇ ನ್ಯಾಟೋವನ್ನು ರಷ್ಯಾದ ಗಡಿಯವರೆಗೂ ವಿಸ್ತರಿಸಲಾಗಿದೆ. ರಷ್ಯಾ-ಉಕ್ರೇನ್ ಯುದ್ಧವನ್ನು ತಡೆಯಬಹುದಾಗಿದ್ದ ಮಿನ್ಸ್ಕ್ ಒಪ್ಪಂದವನ್ನು (2014ರಲ್ಲಿ ರಷ್ಯಾ ಮತ್ತು ಉಕ್ರೇನ್ ಎರಡೂ ದೇಶಗಳು ಮಾಡಿಕೊಂಡ ಒಪ್ಪಂದವನ್ನು) ಇಂಗ್ಲೆಂಡ್ ಮತ್ತು ಅಮೆರಿಕ ತಲೆಕೆಳಗು ಮಾಡಿದವು. ಬೋರಿಸ್ ಯೆಲ್ಸಿನ್ ರಷ್ಯಾದ ಅಧ್ಯಕ್ಷರಾಗಿದ್ದ ಸಮಯದಲ್ಲಿ ಪಾಶ್ಚಾತ್ಯ ಸಾಮ್ರಾಜ್ಯಶಾಹಿಯು ಸ್ವಲ್ಪ ಕಾಲ ಆ ದೇಶದೊಂದಿಗೆ ಬೆಳೆಸಿಕೊಂಡಿದ್ದ ಸಂಬಂಧವನ್ನು ಮರುನಿರ್ಮಿಸಿಕೊಂಡು, ರಷ್ಯಾವನ್ನು ಕಬ್ಜಾ ಮಾಡಿಕೊಳ್ಳುವುದು ಮತ್ತು ಅದರ ವಿಪುಲ ನೈಸರ್ಗಿಕ ಸಂಪನ್ಮೂಲಗಳನ್ನು ನಿಯಂತ್ರಿಸುವುದೇ ನ್ಯಾಟೋದ ಉದ್ದೇಶವಾಗಿತ್ತು. ಸೋವಿಯತ್ ಒಕ್ಕೂಟವು ಯುರೋಪನ್ನು ಅಡಿಯಾಳಾಗಿಸಲು ಬಯಸಿತ್ತು ಎಂಬ ಹಿಂದಿನ ಶೀತಲ ಸಮರದ ಆಪಾದನೆಯ ರೀತಿಯಲ್ಲೇ, ಯುರೋಪನ್ನು ಅತಿಕ್ರಮಿಸಲು ರಷ್ಯಾ ಬಯಸುತ್ತಿದೆ ಎಂಬ ಈಗಿನ ದಾವೆ ಅದೆಷ್ಟು ಅಸಂಬದ್ಧವಾಗಿದೆ ಎಂದರೆ, ಬಹುತೇಕ ಅದು ಬಾಲಿಶವೇ ಸರಿ.

ಉಕ್ರೇನ್ ಯುದ್ಧವನ್ನು ಕೊನೆಗೊಳಿಸಲು ಅಮೆರಿಕವು ನಿರ್ಧರಿಸಿದ ನಂತರ ಮತ್ತು ಆ ಮೂಲಕ ರಷ್ಯಾವು ಈ ಯುದ್ಧದಲ್ಲಿ ಆಕ್ರಮಣಕಾರಿಯಾಗಿ ತೊಡಗಲಿಲ್ಲ ಎಂಬುದನ್ನು ಸೂಚ್ಯವಾಗಿ ಒಪ್ಪಿಕೊಂಡ ನಂತರವೂ, ಅದೇ ಹಳೆಯ ಮಿಥ್ಯೆಯನ್ನೇ ಇನ್ನೂ ಏಕೆ ಯುರೋಪ್ ಪ್ರಚಾರ ಮಾಡುತ್ತಿದೆ? ಇದೊಂದು ಯಕ್ಷ ಪ್ರಶ್ನೆಯೇ. ಜರ್ಮನಿಯ ಸಂದರ್ಭದಲ್ಲಿ ಈ ಪ್ರಶ್ನೆಯು ಹೆಚ್ಚು ಪ್ರಸ್ತುತವಾಗಿದೆ. ರಷ್ಯಾದ ವಿರುದ್ಧ ನಿರ್ಬಂಧಗಳನ್ನು ಹೇರಿದ ಪರಿಣಾಮವಾಗಿ ಜರ್ಮನಿಯು ಅಪಾರ ನಷ್ಟಗಳನ್ನು ಅನುಭವಿಸಿದೆ. ರಷ್ಯಾದಿಂದ ಮಾಡಿಕೊಳ್ಳುತ್ತಿದ್ದ ಅಗ್ಗದ ಅನಿಲ ಆಮದಿನ ಬದಲಿಗೆ ದುಬಾರಿ ಬೆಲೆಯ ಅನಿಲವನ್ನು ಅಮೆರಿಕದಿಂದ ಆಮದು ಮಾಡಿಕೊಳ್ಳುವಂತೆ ಒತ್ತಾಯಕ್ಕೆ ಒಳಗಾದ ಕಾರಣದಿಂದಾಗಿ ಜರ್ಮನಿಯ ಖರ್ಚು ವೆಚ್ಚಗಳು ಬಹಳವಾಗಿ ಹೆಚ್ಚಿವೆ. ಜೀವನ ನಿರ್ವಹಣೆಯ ವೆಚ್ಚಗಳು ಹೆಚ್ಚಿವೆ. ಕಾರ್ಮಿಕರು ಹೆಚ್ಚಿನ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಮಾತ್ರವಲ್ಲ, ಇಂಧನ ವೆಚ್ಚಗಳ ಅತಿಯಾದ ಏರಿಕೆಯಿಂದಾಗಿ ಅಲ್ಲಿನ ಕೈಗಾರಿಕೆಗಳು ತಮ್ಮ ಉತ್ಪಾದನಾ ಘಟಕಗಳನ್ನು ಬೇರೆಡೆಗೆ ಸ್ಥಳಾಂತರಿಸುವ ಪ್ರಕ್ರಿಯೆಗೆ ಮತ್ತು ಆ ಮೂಲಕ ಜರ್ಮನಿಯ ಅಪ-ಕೈಗಾರಿಕೀಕರಣ ಪ್ರಕ್ರಿಯೆಗೆ ಪ್ರೋತ್ಸಾಹ ಕೊಟ್ಟಂತಾಗಿದೆ. ಹಾಗಾಗಿ, ಉಕ್ರೇನ್ ಯುದ್ಧದ ಅಂತ್ಯವನ್ನು ಸ್ವಾಗತಿಸುವುದು ಜರ್ಮನಿಗೆ ಸಹಜವಾದ ಒಂದು ಕೆಲಸವಾಗಬೇಕಿತ್ತು ಮತ್ತು ಆ ಮೂಲಕ ತನ್ನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬಹುದಿತ್ತು. ಆದರೆ, ಜರ್ಮನಿಯು ತನ್ನ ಯುದ್ಧಕೋರತನವನ್ನು ಇನ್ನೂ ಮುಂದುವರಿಸುತ್ತಿದೆ, ಏಕೆ?

ಯುರೋಪ್ ಮತ್ತು ಯುಎಸ್ ನಡುವಿನ ಈ ಭಿನ್ನಾಭಿಪ್ರಾಯವನ್ನು ಅಂತರ-ಸಾಮ್ರಾಜ್ಯಶಾಹಿ ಪೈಪೋಟಿಯ ಮರುಹುಟ್ಟು ಎಂದು ಹೇಳಲಾಗದು. ಈ ಭಿನ್ನಾಭಿಪ್ರಾಯವು ರಷ್ಯಾದ ವಿರುದ್ಧ ಸಾಮ್ರಾಜ್ಯಶಾಹಿಯ ರಣತಂತ್ರದಲ್ಲಿ ವಿಭಿನ್ನತೆ ಇದೆ ಎಂಬುದಕ್ಕೆ ಸಂಬಂಧಿಸಿದೆ. ಈ ವಿಭಿನ್ನತೆ ಹಾಗೂ ಪ್ರತಿಸ್ಪರ್ಧಿ ಹಣಕಾಸು ಕೂಟಗಳ ನಡುವಿನ ವೈರುಧ್ಯದಿಂದ ಉತ್ತೇಜಿತವಾದ ಅಂತರ್-ಸಾಮ್ರಾಜ್ಯಶಾಹಿ ಪೈಪೋಟಿ, ಇವೆರಡೂ ಒಂದೇ ಅಲ್ಲ. ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಜಗತ್ತಿನಲ್ಲಿ, ಯಾವುದನ್ನು ಲೆನಿನ್ "ಆರ್ಥಿಕ ಪ್ರದೇಶ" ಎಂದು ಕರೆದಿದ್ದರೋ, ಅದರ ಮೇಲಿನ ಪೈಪೋಟಿಯು ಇನ್ನೂ ತಣ್ಣಗಾಗಿಯೇ ಇದೆ. ಜೊತೆಗೆ, ನಾವು ಈಗಷ್ಟೇ ಕಂಡಂತೆ, ಜರ್ಮನಿ ಮತ್ತು ಯುರೋಪಿನ ಹಿತಾಸಕ್ತಿಗಳು ಸಾಮಾನ್ಯವಾಗಿ ರಷ್ಯಾದೊಂದಿಗೆ ಮುಖಾಮುಖಿಯಾಗುವ ಬದಲು ಶಾಂತಿಯನ್ನು ಬಯಸಬೇಕಿತ್ತು. ವಿಶೇಷವಾಗಿ, ಯುದ್ಧದಲ್ಲಿ ರಷ್ಯಾವನ್ನು ಉಕ್ರೇನ್ ಸೋಲಿಸಲಾಗದು ("ಸೋಲು" ಎಂಬ ಪದ ಹೊಂದಿರುವ ಯಾವುದೇ ಅರ್ಥದಲ್ಲಿ) ಎನ್ನುವ ಪರಿಸ್ಥಿತಿಯಲ್ಲಿ.



**'ರಷ್ಯಾ-ಭೀತಿ'ಯ ನೆಪ**

ಸಾಮ್ರಾಜ್ಯಶಾಹಿಗಳ ನಡುವೆ ಯಾವುದೇ ಪೈಪೋಟಿಯೂ ತೀವ್ರಗೊಳ್ಳದೇ ಇದ್ದರೂ, ಈವರೆಗೂ ಅಮೆರಿಕ ಒದಗಿಸಿದ "ಭದ್ರತೆ"ಯ ರಕ್ಷಣೆಯನ್ನು ಹಿಂತೆಗೆದುಕೊಳ್ಳುವ ಬೆದರಿಕೆಯನ್ನು ಎದುರಿಸುತ್ತಿರುವ ಯುರೋಪಿಯನ್ ದೇಶಗಳು, ತಾವು "ಹಿಂದೆ ಬೀಳುವಂತಿಲ್ಲ" ಎನ್ನುವ ನೆಲೆಯಲ್ಲಿ ಶಸ್ತ್ರಾಸ್ತ್ರಗಳನ್ನು ಹೊಂದುವ ಸಲುವಾಗಿ ತಮ್ಮ ವೆಚ್ಚವನ್ನು ಹೆಚ್ಚಿಸಿಕೊಳ್ಳಲು ಉತ್ಸುಕವಾಗಿವೆ ಎಂದು ಹೇಳಬಹುದು. ಈ ಉದ್ದೇಶಕ್ಕಾಗಿ ಬೇಕಾಗುವ ಹಣವನ್ನು ಭಾಗಶಃ ಹೆಚ್ಚು ವಿತ್ತೀಯ ಕೊರತೆಯ ಮೂಲಕ ಮತ್ತು ಭಾಗಶಃ ಯುದ್ಧಾನಂತರದ ಅವಧಿಯಲ್ಲಿ ಯುರೋಪ್ ಮಾಡುತ್ತಿದ್ದ ಜನ ಕಲ್ಯಾಣ ವೆಚ್ಚಗಳನ್ನು ಕಡಿತಗೊಳಿಸುವ ಮೂಲಕ ಹೊಂದಿಸಿಕೊಳ್ಳಬಹುದು ಮತ್ತು ರಷ್ಯಾದ ಬೆದರಿಕೆಯಿದೆ ಎಂದು ಹೇಳುವ ಮೂಲಕ ಈ ಎರಡೂ ವಿಧಾನಗಳನ್ನು ಬಳಸಿಕೊಳ್ಳುವುದು ಸುಲಭವಾಗುತ್ತದೆ ಎಂದು ಅವು ಭಾವಿಸಿದಂತಿದೆ.

ಜಾಗತೀಕರಣಗೊಂಡ ಹಣಕಾಸು ಬಂಡವಾಳವು ಸರ್ಕಾರಗಳು ಬೃಹತ್ ವಿತ್ತೀಯ ಕೊರತೆಗಳನ್ನು ಹೊಂದುವುದನ್ನು ವಿರೋಧಿಸುತ್ತದೆ. ಏಕೆಂದರೆ, ಇಂಥಹ ಕೊರತೆಗಳ ಮೂಲಕ ಹೊಂದಿಸಿಕೊಂಡ ಹಣವನ್ನು ಸರ್ಕಾರವು ತನ್ನ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳಲು ಮತ್ತು ಉದ್ಯೋಗ ಸೃಷ್ಟಿಗಾಗಿ ಬಳಸಿಕೊಂಡಾಗ ಬಂಡವಾಳಶಾಹಿ ನಗಣ್ಯಗೊಳ್ಳುತ್ತದೆ. ಆದರೆ, ಇದೇ ಹಣವನ್ನು ಒಂದು ಬಾಹ್ಯ ಬೆದರಿಕೆಯನ್ನು ಎದುರಿಸುವ ಕಾರಣದ ಮೇಲೆ ಶಸ್ತ್ರಾಸ್ತ್ರಗಳನ್ನು ಕೊಳ್ಳಲು ಬಳಸಿದಾಗ ಹಾಗಾಗುವುದಿಲ್ಲ ಎಂದು ನಂಬಲಾಗಿದೆ. ಆಗಲೂ ಅದನ್ನು ಸರಕಾರದ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಲು ಮತ್ತು ಹೆಚ್ಚು ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಲು ಬಳಸಿಕೊಳ್ಳಬಹುದು ಎಂಬುದು ಬೇರೆ ಮಾತು. ಬೇರೆ ರೀತಿಯಲ್ಲಿ ಹೇಳುವುದಾದರೆ, ಬೃಹತ್ ವಿತ್ತೀಯ ಕೊರತೆಗೆ ಎದುರಾಗುವ ವಿರೋಧವನ್ನು ರಷ್ಯಾದ ಬೆದರಿಕೆಯನ್ನು ತೋರುವ ಮೂಲಕ ತಗ್ಗಿಸಬಹುದು. ಒಂದು ಬೃಹತ್ ಮೊತ್ತದ ಸಾಲವನ್ನು ಎತ್ತಲು ಅನುವಾಗುವಂತೆ ಜರ್ಮನಿಯ ಸರ್ಕಾರವು ಇತ್ತೀಚೆಗೆ ಮಾಡಿದ ಒಂದು ಸಾಂವಿಧಾನಿಕ ತಿದ್ದುಪಡಿಯು ಈ ಆಶಯವನ್ನು ಹೊಂದಿದೆ. ಅದೇ ರೀತಿಯಲ್ಲಿ, ರಷ್ಯಾದ ಬೆದರಿಕೆ ನಿಜಕ್ಕೂ ಗಂಭೀರ ಎಂದು ಜನತೆ ನಂಬಿದರೆ, ಜನ ಕಲ್ಯಾಣ ವೆಚ್ಚಗಳನ್ನು ಕಡಿತಗೊಳಿಸುವ ಮತ್ತು ಎರಡನೇ ಮಹಾಯುದ್ಧಾನಂತರದ ಕಲ್ಯಾಣ-ಪ್ರಭುತ್ವದ ಪರಿಕಲ್ಪನೆಯ ಅಳಿದುಳಿದ ಅಂಶಗಳನ್ನು ಕಳಚಿ ಹಾಕುವ ಕ್ರಮಗಳಿಗೆ ಎದುರಾಗುವ ವಿರೋಧವು ಬಹಳಷ್ಟು ತಗ್ಗುತ್ತದೆ ಎಂದೂ ನಿರೀಕ್ಷಿಸಬಹುದು. ಅಂದರೆ, ಹೊಸ ಪರಿಸ್ಥಿತಿಯಲ್ಲಿ ಯುರೋಪಿನ ಆಳುವ ವಲಯಗಳು ಶಸ್ತ್ರಾಸ್ತ್ರಗಳ ವೆಚ್ಚವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಬಯಸುತ್ತಿದ್ದು, ಅದನ್ನು ಸಮರ್ಥಿಸಿಕೊಳ್ಳುವದಕ್ಕಾಗಿ ರಷ್ಯಾದಿಂದ ಬೆದರಿಕೆಯಿದೆಯೆಂದು ಅವು ತೋರಿಸಬೇಕಾಗಿದೆ.

ಈ ವಿವರಣೆ ಸ್ವಲ್ಪವಾದರೂ ತರ್ಕಸಮ್ಮತವಾಗಿದೆ ಎಂದು ಗುರುತಿಸಿದರೂ, ಅದು ಅಸಮರ್ಪಕವೇ ಎಂದು ಹೇಳಬಹುದು. ಮೊದಲಿಗೆ, ಯುರೋಪಿನ ರಷ್ಯ-ವಿರೋಧಿ ಯುದ್ಧಕೋರತನ ಇಂದು ನಿನ್ನೆಯದಲ್ಲ. ಅದು ಟ್ರಂಪ್ ಅಧಿಕಾರಕ್ಕೆ ಬರುವ ಎಷ್ಟೋ ಮೊದಲಿಂದಲೂ ಇದ್ದು, ಆ ಕಾರಣಕ್ಕಾಗಿಯೇ ಯುರೋಪಿನ ಆಳುವ ವಲಯಗಳು ಮರು-ಶಸ್ತ್ರೀಕರಣ ಅಗತ್ಯ ಎಂದು ಭಾವಿಸಿಕೊಂಡು ಬಂದಿವೆ. ಜೊತೆಗೆ, ರಷ್ಯಾ-ವಿರೋಧಿ ಅಬ್ಬರ ಉಗ್ರ ಬಲಪಂಥೀಯ, ನವ-ಫ್ಯಾಸಿಸ್ಟ್ ಪಕ್ಷಗಳಿಗಿಂತಲೂ ಹೆಚ್ಚಾಗಿ, ಮಧ್ಯಮ ಮಾರ್ಗದ ಉದಾರ-ಬೂರ್ಜ್ವಾ ರಾಜಕೀಯ ವಲಯಗಳಲ್ಲೇ ಪ್ರಬಲವಾಗಿದೆ, ಮಧ್ಯ-ಎಡಪಂಥೀಯರು ಮತ್ತು ಮಧ್ಯ-ಬಲಪಂಥೀಯರೂ ಕೂಡ ಇದರಲ್ಲಿ ಸೇರಿದ್ದಾರೆ. ಉದಾಹರಣೆಗೆ, ಉಕ್ರೇನ್ ಯುದ್ಧದ ಬಗ್ಗೆ ಜರ್ಮನಿಯ ಸೋಶಲ್ ಡೆಮಾಕ್ರೇಟರು, ಫ್ರೀ ಡೆಮಾಕ್ರೇಟರು ಮತ್ತು ಗ್ರೀನ್ಸ್ ಅಥವಾ ಹೊಸದಾಗಿ ಚುನಾಯಿತವಾಗಿರುವ ಕ್ರಿಶ್ಚಿಯನ್ ಡೆಮೋಕ್ರಾಟ್-ಕ್ರಿಶ್ಚಿಯನ್ ಸೋಶಿಯಲ್ ಯೂನಿಯನ್‌ನ ಮಧ್ಯ-ಬಲಪಂಥೀಯ ಆಳುವ ಮೈತ್ರಿಕೂಟದ ಕಟು ನಿಲುವಿಗೆ ಹೋಲಿಸಿದರೆ, ತೀವ್ರ ಬಲಪಂಥೀಯ ಜರ್ಮನ್ ಎಎಫ್‌ಡಿ ಪಕ್ಷವು ಜರ್ಮನಿಯ ಮರು-ಶಸ್ತ್ರೀಕರಣದ ಪರವಾಗಿದ್ದರೂ ಸಹ, ಅದು ಪರಮಾಣು ಅಸ್ತ್ರಗಳನ್ನು ಹೊಂದುವುದನ್ನು ಬೆಂಬಲಿಸಿದರೂ ಕೂಡ, ಅದಕ್ಕಿಂತ ಮೃದು ಎನ್ನಬಹುದಾದ ಧೋರಣೆಯನ್ನು ಹೊಂದಿದೆ. ಅದೇ ರೀತಿಯಲ್ಲಿ, ಇಟಲಿಯ ಮೆಲೋನಿ ಅಥವಾ ಹಂಗೇರಿಯ ಒರ್ಬನ್ ಅವರುಗಳನ್ನು ತೀವ್ರ ಬಲಪಂಥೀಯ ಅಥವಾ ನವ-ಫ್ಯಾಸಿಸ್ಟ್ ಎಂದು ದೃಢವಾಗಿ ವರ್ಗೀಕರಿಸಬಹುದಾದರೂ, ಅವರುಗಳು ರಷ್ಯಾ ವಿರುದ್ಧ ಸೆಡ್ಡು ಹೊಡೆದು ನಿಂತಿರುವ ಯುದ್ಧಕೋರ ಯುರೋಪಿಯನ್ ನಾಯಕರ ನಡುವೆ ಗುರುತಿಸಿಕೊಂಡಿರುವುದು ಕಂಡುಬಂದಿಲ್ಲ.

**'ಶತ್ರು': ಆಂತರಿಕ ಮತ್ತು ಬಾಹ್ಯ**

ಈ ಎಲ್ಲ ವಿವರಗಳಿಂದ ಈ ಒಂದು ನಮೂನೆಯನ್ನು ಗ್ರಹಿಸಬಹುದು: ನವ-ಫ್ಯಾಸಿಸ್ಟ್ ಪಕ್ಷಗಳು ಸಂಕಥನವನ್ನು ನಿರುದ್ಯೋಗದ ಸಮಸ್ಯೆಯಿಂದ ಮತ್ತು ಜೀವನ ಪರಿಸ್ಥಿತಿಗಳ ಸಮಸ್ಯೆಗಳಿಂದ ದೂರ ಸರಿಸಿ, ಆರ್ಥಿಕ ಬಿಕ್ಕಟ್ಟಿನ ಸಮಯಯಲ್ಲಿ ದೊಡ್ಡ ಬಂಡವಾಳದ ಪ್ರಾಬಲ್ಯವನ್ನು ಬಲಪಡಿಸುವ ಸಲುವಾಗಿ, ದೇಶದ ಒಳಗಿನ ಯಾವುದೋ ಒಂದು ದುರದೃಷ್ಟಕರ ಜನಾಂಗೀಯ ಗುಂಪನ್ನು ಅಥವಾ ಯಾವುದೋ ಒಂದು ಧಾರ್ಮಿಕ ಗುಂಪಿನ ಅನುಯಾಯಿಗಳನ್ನು "ಅನ್ಯ"ರೆಂದು ಗುರುತಿಸಿ ಅವರ ವಿರುದ್ಧ ದ್ವೇಷವನ್ನು ಹುಟ್ಟುಹಾಕಿದರೆ, ಮಧ್ಯಮ-ಮಾರ್ಗೀ ರಾಜಕೀಯ ಪಕ್ಷಗಳು ಒಂದು ಬಾಹ್ಯ "ಶತ್ರು"ವಿನ ವಿರುದ್ಧ ದ್ವೇಷವನ್ನು ಹುಟ್ಟುಹಾಕುವ ಮೂಲಕ ದೊಡ್ಡ ಬಂಡವಾಳದ ಪ್ರಾಬಲ್ಯವನ್ನು

ಪುಟ 14 ಕ್ಕೆ

# ಟ್ರಂಪ್ ನೀತಿಗಳ ವಿರುದ್ಧ 1200 ‘ಹ್ಯಾಂಡ್ಸ್ ಆಫ್’ ಪ್ರತಿಭಟನೆಗಳಲ್ಲಿ ಜನಸಾಗರ




ಅಧ್ಯಕ್ಷ ಟ್ರಂಪ್ ಅವರ ಕಲ್ಯಾಣ ಯೋಜನೆಗಳ ಕಡಿತಗಳು ಹಾಗೂ ವಿವಾದಾಸ್ಪದ ನೀತಿಗಳ ವಿರುದ್ಧ, ಏಪ್ರಿಲ್ 5ರಂದು (ಶನಿವಾರ) ಯುಎಸ್ ನ 1200 ಸ್ಥಳಗಳಲ್ಲಿ ನಡೆದ “ಹ್ಯಾಂಡ್ಸ್ ಆಫ್” (ಮುಟ್ಟಬೇಡಿ) ಪ್ರತಿಭಟನೆಗಳಲ್ಲಿ ಭಾರೀ ಸಂಖ್ಯೆಯಲ್ಲಿ ಜನಸಾಗರ ಕಂಡುಬಂದಿದೆ. ಲಕ್ಷಾಂತರ ಜನ ಪ್ರತಿಭಟನೆಗಳಲ್ಲಿ ಭಾಗವಹಿಸಿದ್ದು, ಇದು 2020ರ ನಂತರ ಅತಿ ದೊಡ್ಡ ಪ್ರತಿಭಟನೆಗಳು ಎನ್ನಲಾಗಿದೆ.

“ನಮ್ಮ ಪ್ರಜಾಪ್ರಭುತ್ವ ಮುಟ್ಟಬೇಡಿ”, “ನಮ್ಮ ಸಂವಿಧಾನ ಮುಟ್ಟಬೇಡಿ”, “ನಮ್ಮ ನಾಗರಿಕ ಹಕ್ಕುಗಳನ್ನು ಮುಟ್ಟಬೇಡಿ”, “ನಮ್ಮ ಯೂನಿಯನ್, ಉದ್ಯೋಗ ಮುಟ್ಟಬೇಡಿ”, “ನಮ್ಮ ಮೆಡಿಕೇರ್ ಯೋಜನೆ ಮುಟ್ಟಬೇಡಿ”, “ನಮ್ಮ ಪೋಸ್ಟ್ ಸೇವೆ ಮುಟ್ಟಬೇಡಿ”, “ನಮ್ಮ ಪಬ್ಲಿಕ್ ಸ್ಕೂಲ್ ಮುಟ್ಟಬೇಡಿ”, “ಬಿಲಿಯನೇರ್ ಗಳಿಗೆ ತೆರಿಗೆ ಹಾಕಿ” – ಇವು ಎಲ್ಲೆಡೆ ಕೇಳಿಬಂದ ಘೋಷಣೆಗಳು. ರಾಜಧಾನಿ



ವಾಷಿಂಗ್ಟನ್ ಡಿಸಿಯಲ್ಲಿ “ನೇಶನಲ್ ಮಾಲ್” ಪ್ರದೇಶದಲ್ಲಿ ಮುಖ್ಯ ಮತ್ತು ಅತಿ ದೊಡ್ಡ ಪ್ರತಿಭಟನೆ ನಡೆಯಿತು.




ಕೆಲವು ಸಂಸತ್ ಸದಸ್ಯರನ್ನು ಒಳಗೊಂಡು ಹಲವು ಡೆಮೋಕ್ರಾಟಿಕ್ ಪಕ್ಷದ ಪ್ರಮುಖ ಮುಖಂಡರು ಈ ಪ್ರತಿಭಟನೆಗಳಲ್ಲಿ ಭಾಗವಹಿಸಿ,ಟ್ರಂಪ್ ಆಡಳಿತದ ದುರ್ವ್ಯವಸ್ಥೆ ಹಾಗೂ ಸಂವಿಧಾನಾತ್ಮಕ ಮೌಲ್ಯಗಳಿಂದ ವಿಮುಖವಾಗುತ್ತಿರುವುದನ್ನು ತೀವ್ರವಾಗಿ ಖಂಡಿಸಿದರು. ಮೆರಿಲ್ಯಾಂಡ್‌ನ ಪ್ರತಿನಿಧಿ ಜೆಮಿ ರಾಸ್ಕಿನ್, ವಾಷಿಂಗ್ಟನ್ ಡಿಸಿಯ ನ್ಯಾಶನಲ್ ಮಾಲ್‌ನಲ್ಲಿ ಒಂದು ಲಕ್ಷಕ್ಕಿಂತ ಅಧಿಕ ಜನರನ್ನು ಉದ್ದೇಶಿಸಿ ಮಾತನಾಡುತ್ತಾ, ಟ್ರಂಪ್ ಆಡಳಿತದ ಹಲವಾರು ನೀತಿಗಳನ್ನು ಟೀಕಿಸಿ, ಪ್ರತಿ ರಾಷ್ಟ್ರದ ಮೇಲೆ ಹೇರಿದ ಆಮದು ಸುಂಕಗಳನ್ನು “ಮೂರ್ಖತನ ಮತ್ತು ಅಸಂವಿಧಾನಿಕ” ಎಂದು ಕರೆದು, ಅದನ್ನು ತಿದ್ದುಪಡಿ ಮಾಡಬೇಕೆಂದು ಒತ್ತಾಯಿಸಿದರು.

ವಾಷಿಂಗ್ಟನ್ ಡಿಸಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಹಲವರು, ತಮ್ಮ ಮಕ್ಕಳ ಮತ್ತು ಮೊಮ್ಮಕ್ಕಳ ಭವಿಷ್ಯ ಹಾಗೂ ಆರ್ಥಿಕ ಸ್ಥಿತಿಯ ಬಗ್ಗೆ ಆತಂಕ ವ್ಯಕ್ತಪಡಿಸಿದರು. "ನಾನು ಚೆನ್ನಾಗಿ ನಿದ್ರೆ ಮಾಡಲಾಗುತ್ತಿಲ್ಲ. ನನಗೆ ಭಯವಾಗುತ್ತಿದೆ," "ನಾವು ಜೀವವಿಡೀ ಉಳಿಸಿಕೊಂಡಿರುವ ನಿವೃತ್ತಿ ಹಣ, ಅದು ನಮ್ಮ ಬಳಿ ಉಳಿಯುವುದೇ ಎಂಬ ಅನುಮಾನ ಇದೆ. ಅಮೆರಿಕದ ಮಾರುಕಟ್ಟೆ ಏನೇನಾಗುತ್ತದೆ ಗೊತ್ತಿಲ್ಲ. ಮುಂಚೆ ಸ್ನೇಹಪೂರ್ಣ ಸಂಬಂಧ ಹೊಂದಿದ್ದ ದೇಶಗಳನ್ನೇ ಶತ್ರುಗಳನ್ನಾಗಿ ಮಾಡಲಾಗಿದೆ. ಎಲ್ಲವೂ ಅಸ್ಪಷ್ಟವಾಗಿದೆ." ಇಂತಹ ಆತಂಕ ಸರ್ವೇ ಸಾಮಾನ್ಯವಾಗಿತ್ತು.

ಟ್ರಂಪ್ ನಂತರ ಎಲೊನ್ ಮಸ್ಕ್ ಪ್ರತಿಭಟನೆಗಳ ಘೋಷಣೆಗಳಲ್ಲಿ ಪೋಸ್ಟರ್‌ಗಳಲ್ಲಿ ಅತ್ಯಂತ ಹೆಚ್ಚು ತೀವ್ರ ಟೀಕೆಗೊಳಗಾಗಿದ್ದರು. ಸರಕಾರಿ ದಕ್ಷತೆಯ ಹೆಸರಿನಲ್ಲಿ ಮಸ್ಕ್ ನಾಯಕತ್ವದ ಡಿಒಜಿಇ ಕೈಗೊಂಡಿರುವ ಜನ-ವಿರೋಧಿ ಕ್ರಮಗಳು (ಎಲ್ಲ ಫೆಡರಲ್ ಉದ್ಯೋಗಿಗಳ ಯೂನಿಯನ್ ಹಕ್ಕನ್ನು ರದ್ದು ಮಾಡುತ್ತಿರುವುದು, ಶಿಕ್ಷಣ ಸೇರಿದಂತೆ ಹಲವಾರು ಇಲಾಖೆಗಳನ್ನು, ಕಲ್ಯಾಣ ಯೋಜನೆಗಳನ್ನು ರದ್ದು ಮಾಡಿರುವುದು) ಅತ್ಯಂತ ತೀವ್ರ ಆಕ್ರೋಶಕ್ಕೆ ಕಾರಣವಾಗಿವೆ.

ವಾಷಿಂಗ್ಟನ್ ಡಿಸಿ ಅಲ್ಲದೆ ನ್ಯೂಯಾರ್ಕ್, ಬೋಸ್ಟನ್, ಚಿಕಾಗೋ, ಸಾನ್‌ಫ್ರಾನ್ಸಿಸ್ಕೊ, ಸಾಂಡಿಯಾಗೊ, ಒಕಲ್ಯಾಂಡ್ ಗಳಲ್ಲಿ ಅತಿ ದೊಡ್ಡ ಪ್ರತಿಭಟನೆಗಳು ನಡೆದವು.




## ಯುರೋಪಿನಲ್ಲಿ ರಷ್ಯಾ ವಿರೋಧಿ ಯುದ್ಧೋನ್ಮಾದ ಏಕೆ.......

ಪುಟ 13 ರಿಂದ

ಬಲಪಡಿಸಲು ಪ್ರಯತ್ನಿಸುತ್ತವೆ. ಯುರೋಪಿನ ಸಂದರ್ಭದಲ್ಲಿ ಈ ಬಾಹ್ಯ "ಶತ್ರು"ವನ್ನು ರಷ್ಯಾ ಎಂದು ಗುರುತಿಸಲಾಗಿದೆ.


ಇದೊಂದು ಹೊಸ ವಿದ್ಯಮಾನವೇ ಎನ್ನಬಹುದಾದರೂ. ಮಧ್ಯಮ-ಮಾರ್ಗೀ ರಾಜಕೀಯ ಪಕ್ಷಗಳು ಕೀನ್ಸ್ ಪ್ರತಿಪಾದಿಸಿದ ಬೇಡಿಕೆ ಉತ್ತೇಜನೆಯ ಪ್ರಮಾಣಿತ ವಿಧಾನಗಳ ಮೂಲಕ ಯುರೋಪಿನ ಅರ್ಥವ್ಯವಸ್ಥೆಗಳನ್ನು ಬಿಕ್ಕಟ್ಟಿನಿಂದ ಹೊರತರುವಲ್ಲಿ ಅಸಮರ್ಥವಾಗಿರುವ ಕಾರಣದಿಂದ ಈ ನವ-ಫ್ಯಾಸಿಸಂ ವಿದ್ಯಮಾನವು ಹೊರಹೊಮ್ಮಿದೆ. ಒಟ್ಟಾರೆ ಬೇಡಿಕೆಯನ್ನು ಉತ್ತೇಜಿಸಬಹುದಾದ ಸರ್ಕಾರದ ಬೃಹತ್ ವೆಚ್ಚಗಳಿಗಾಗಿ ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ವಿಧಿಸುವ ಮೂಲಕ ಅಥವಾ ಬೃಹತ್ ವಿತ್ತೀಯ ಕೊರತೆಯ ಮೂಲಕ ಹಣ ಒದಗಿಸಿಕೊಳ್ಳುವ ಈ ಎರಡೂ ವಿಧಾನಗಳಿಗೂ ಜಾಗತೀಕರಣಗೊಂಡಿರುವ ಹಣಕಾಸು ಬಂಡವಾಳದ ಆಕ್ಷೇಪಣೆಯಿಂದಾಗಿ ಈ ರಾಜಕೀಯ ಪಕ್ಷಗಳು ತೊಂದರೆಗೊಳಗಾಗಿವೆ. ದಶಕಗಳಿಂದಲೂ ಯುರೋಪಿನಲ್ಲಿ ಅಧಿಕಾರದಲ್ಲಿರುವ ಈ ಮಧ್ಯಮ-ಮಾರ್ಗೀ ರಾಜಕೀಯ ಪಕ್ಷಗಳೇ ಜನರಿಗೆ ಹೆಚ್ಚಿನ ಸಂಕಷ್ಟವನ್ನು ತಂದಿರುವ ಈ ನವ ಉದಾರವಾದಿ ಆಳ್ವಿಕೆಯನ್ನು ಪರಿಚಯಿಸಿದ ಕಾರಣದಿಂದ ಮತ್ತು ಈ ಆಳ್ವಿಕೆಯು ಅನಿವಾರ್ಯವಾಗಿಯೇ ಹೆಚ್ಚಿನ ಬಿಕ್ಕಟ್ಟಿಗೆ ಒಳಗಾಗಿ, ಅದರಿಂದಾಗಿ ಇನ್ನೂ ಹೆಚ್ಚಿನ ಸಂಕಷ್ಟವನ್ನು ತರುತ್ತಿದ್ದು, ಅದನ್ನು ನಿವಾರಿಸಲು ಸಾಧ್ಯವಾಗದ ಕಾರಣದಿಂದ ರಾಜಕೀಯ ನೆಲೆಯನ್ನು ಕಳೆದುಕೊಳ್ಳುತ್ತಿವೆ. ಚುನಾವಣೆಗಳಲ್ಲಿ ಬೆಂಬಲವನ್ನು ಕಳೆದುಕೊಳ್ಳುವ ಸಂದರ್ಭದಲ್ಲಿ ಅವು ಶಾಂತವಾಗಿ ಕೈಕಟ್ಟಿ ಕುಳಿತುಕೊಳ್ಳಲಾರವು, ಹೇಗಾದರೂ ಸರಿಯೇ, ಜನ ಬೆಂಬಲವನ್ನು ಮರಳಿ ಪಡೆಯುವ ಪ್ರಯತ್ನದಲ್ಲಿ ಅವು ತೊಡಗುತ್ತವೆ. ಅದಕ್ಕಾಗಿ ಬಾಹ್ಯ "ಶತ್ರು" ರಷ್ಯಾದ ವಿರುದ್ಧ ತಾವೇ ರಕ್ಷಕರು ಎಂದು ಬಿಂಬಿಸಿಕೊಳ್ಳುತ್ತವೆ. ಈ ರೀತಿಯಲ್ಲಿ, ದೇಶೀಯ ಚುನಾವಣಾ ಒತ್ತಡಗಳಿಂದಾಗಿ ಯುರೋಪಿನ ಮಧ್ಯಮ-ಮಾರ್ಗೀ ರಾಜಕೀಯ ಪಕ್ಷಗಳು ನವ-ಉದಾರವಾದದ ಆರ್ಥಿಕ ಬಿಕ್ಕಟ್ಟಿನ ಸನ್ನಿವೇಶದಲ್ಲಿ ರಷ್ಯಾದ ವಿರುದ್ಧ ಒಂದು ರೀತಿಯ ಭಯ ಭೀತಿಯನ್ನು ಸೃಷ್ಟಿಸುವಲ್ಲಿ ತಮ್ಮ ಕೊಡುಗೆಯನ್ನು ನೀಡುತ್ತವೆ.

ಇದರ ಜೊತೆಗೆ ಶಸ್ತ್ರಾಸ್ತ್ರ ತಯಾರಕರ ಲಾಬಿಯ ಒತ್ತಡವೂ ಕೆಲಸಮಾಡುತ್ತದೆ. ಉಕ್ರೇನ್ ಯುದ್ಧವು ಅವರಿಗೆ ಗಣನೀಯ ಪ್ರಮಾಣದ ಶಸ್ತ್ರಾಸ್ತ್ರಗಳ ಸರಬರಾಜು ಕೋರಿಕೆಯನ್ನು ಮತ್ತು ಆ ಮೂಲಕ ಅಪಾರ ಲಾಭವನ್ನೂ ತಂದಿದೆ. ಯುದ್ಧದ ಮುಂದುವರಿಕೆಯು ಈ ಲಾಭದ ಮುಂದುವರಿಕೆಯೂ ಆಗುತ್ತದೆ. ಉದಾಹರಣೆಗೆ, ಪ್ರಮುಖ ಜರ್ಮನ್ ಶಸ್ತ್ರಾಸ್ತ್ರ ಉತ್ಪಾದನಾ ಕಂಪನಿ ರೈನ್‌ಮೆಟಾಲ್, ಸಾಕಷ್ಟು ಸಮಯದವರೆಗೆ ಶಸ್ತ್ರಗಳ ಸರಬರಾಜು ಕೋರಿಕೆಯನ್ನು ಪಡೆದಿತ್ತು. ಶಸ್ತ್ರಾಸ್ತ್ರಗಳ ಮೇಲೆ ಹೆಚ್ಚು ವೆಚ್ಚಗಳನ್ನು ಕೈಗೊಳ್ಳಲು ಅನುವಾಗುವಂತೆ ಸಂವಿಧಾನವನ್ನು ಇತ್ತೀಚೆಗೆ ತಿದ್ದುಪಡಿ ಮಾಡಿದ ಜರ್ಮನಿಯ ನಿರ್ಧಾರವು, ರೈನ್‌ಮೆಟಾಲ್‌ನ ಉತ್ಪಾದನಾ ಸಾಮರ್ಥ್ಯದ ಹೆಚ್ಚಿನ ಬಳಕೆಗೆ ಕಾರಣವಾಗಿದಿದ್ದರೂ, ಅದರ ‘ಸಂತಸ’ದ ಸನ್ನಿವೇಶವಂತೂ ಮುಂದುವರಿಯುತ್ತದೆ. ಉಕ್ರೇನ್ ಯುದ್ಧ ಅಂತ್ಯಗೊಂಡರೆ ಅದರ ಸಂತಸವನ್ನು ಕೊನೆಗೊಳಿಸಬಹುದು. ಆದರೆ, ರಷ್ಯಾ-ಭೀತಿಯ ನಗಾರಿ ಬಾರಿಸುವುದು ಈ ಸಂತಸದ ಮುಂದುವರಿಕೆಯ ಸಮರ್ಥನೆಗೆ ಒಂದು ದಾರಿಯಾಗುತ್ತದೆ.

**ವಿಪರ್ಯಾಸ**

ಇಲ್ಲೊಂದು ವಿಪರ್ಯಾಸವಿದೆ. ಎರಡನೇ ಮಹಾಯುದ್ಧಾನಂತರದ ಬಂಡವಾಳಶಾಹಿಯು ತನ್ನನ್ನು ತಾನು ಒಂದು "ಕೃಪಾಳು" ವ್ಯವಸ್ಥೆಯಾಗಿ ಮರು-ರೂಪಿಸಿಕೊಂಡಿರುವುದಾಗಿ ಹೆಮ್ಮೆಪಡುತ್ತಿತ್ತು; ತನ್ನ ಇಡೀ ಪ್ರಭಾವ-ವಲಯದಲ್ಲಿ ಸಾರ್ವತ್ರಿಕ ವಯಸ್ಕ ಮತದಾನವನ್ನು (ಬ್ರಿಟನ್‌ನಲ್ಲಿ ಇದನ್ನು ಸ್ವಲ್ಪ ಮುಂಚಿತವಾಗಿ, 1928ರಲ್ಲಿ, ಮಹಿಳೆಯರಿಗೆ ಮತ ಚಲಾವಣೆ ದೊರೆತಾಗ ಸಾಧಿಸಲಾಗಿತ್ತು) ಪರಿಚಯಿಸುವ ಮೂಲಕ ಪ್ರಜಾಪ್ರಭುತ್ವವನ್ನು ಉತ್ತೇಜಿಸಿರುವುದಾಗಿ ಅದು ಹೇಳಿಕೊಂಡಿತ್ತು; ಅರ್ಥವ್ಯವಸ್ಥೆಗಳನ್ನು ಹತ್ತಿರ ಹತ್ತಿರ ಪೂರ್ಣ ಉದ್ಯೋಗದ ಸ್ಥಿತಿಯಲ್ಲಿಡಲು ಮತ್ತು ಸಾಮಾಜಿಕ ಭದ್ರತೆಯನ್ನು ಒದಗಿಸಲು ಗಣನೀಯ ಪ್ರಮಾಣದ ಕಲ್ಯಾಣ ವೆಚ್ಚವನ್ನು ಕೈಗೊಂಡಿತ್ತು, ವಿಶೇಷವಾಗಿ ಯುರೋಪಿನಲ್ಲಿ. ಮತ್ತು, ವಸಾಹತುಶಾಹಿ ಶೋಷಣೆಯ ಭಯಾನಕತೆಯ ಆರೋಪವನ್ನು ಇನ್ನು ಮುಂದೆ ಹೊರದಂತೆ ಅದು ವಸಾಹತುಶಾಹಿಯನ್ನು ಕೊನೆಗೊಳಿಸುವ ಕ್ರಮವನ್ನೂ ಕೈಗೊಂಡಿತ್ತು. ಇವುಗಳ ಆಧಾರದ ಮೇಲೆ, ಬಂಡವಾಳಶಾಹಿಯು "ಬದಲಾಗಿದೆ" ಎಂದು ಹೇಳಿಕೊಳ್ಳಲಾಯಿತು.

ಆದರೆ, ಸಮಕಾಲೀನ ಬಂಡವಾಳಶಾಹಿಯು ಈ ಪ್ರತಿಯೊಂದರಲ್ಲೂ ಹಿನ್ನಡೆಯ ವಿದ್ಯಮಾನವನ್ನು ಕಾಣುತ್ತಿದೆ. ಬಂಡವಾಳಶಾಹಿಯು ತನ್ನ ಭಯಾನಕವಾದ ಮತ್ತು ಭೂತಕಾಲದ ಅಸಲಿ ರೂಪಕ್ಕೆ ಮರಳಿದೆ. ಈ ಹಿನ್ನಡೆಯಲ್ಲಿ ಸೋಶಿಯಲ್ ಡೆಮಾಕ್ರಸಿಯೂ ಸಕ್ರಿಯವಾಗಿ ಶಾಮೀಲಾಗಿದೆ. ಬಂಡವಾಳಶಾಹಿ ಜಗತ್ತಿನ ಬಹುಭಾಗದಲ್ಲಿ ಈಗ ನವ-ಫ್ಯಾಸಿಸಂ ಹರಿಯಬಿಟ್ಟಿರುವ ದಮನವು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಯುರೋಪಿನ ಹೃದಯಭಾಗದಲ್ಲೇ ಜನ ಕಲ್ಯಾಣ ವೆಚ್ಚಗಳನ್ನು ಕಡಿತಗೊಳಿಸಿ ಶಸ್ತ್ರಾಸ್ತ್ರಗಳ ಖರ್ಚುಗಳನ್ನು ಹೆಚ್ಚಿಸುವ ಕ್ರಮವು ಕಲ್ಯಾಣ ಪ್ರಭುತ್ವದ ಪರಿಕಲ್ಪನೆಯನ್ನು ದುರ್ಬಲಗೊಳಿಸುತ್ತಿದೆ. ನವ-ಉದಾರವಾದಿ ಬಂಡವಾಳಶಾಹಿಯ ಆಳ್ವಿಕೆಯಡಿಯಲ್ಲಿ ಜಾಗತಿಕ ದಕ್ಷಿಣದ ಬಹುತೇಕ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಮುಂದುವರೆದ ಬಂಡವಾಳಶಾಹೀ ದೇಶಗಳ ನಿಯಂತ್ರಣವನ್ನು ಮತ್ತೆ ಸಾಧಿಸಲಾಗಿದೆ. ಈಗ ಇದನ್ನು ಮತ್ತಷ್ಟು ಗಟ್ಟಿಗೊಳಿಸುವ ಡೊನಾಲ್ಡ್ ಟ್ರಂಪ್‌ರ ಗ್ರೀನ್‌ಲ್ಯಾಂಡ್ ಮತ್ತು ಉಕ್ರೇನಿನ ಖನಿಜ ಸಂಪತ್ತನ್ನು ಸ್ವಾಧೀನಪಡಿಸಿಕೊಳ್ಳುವ ಮತ್ತು ಗಾಜಾವನ್ನು ರಿಯಲ್ ಎಸ್ಟೇಟ್ ಉದ್ದೇಶಗಳಿಗಾಗಿ ಮತ್ತು ಪ್ರವಾಸೋದ್ಯಮಕ್ಕಾಗಿ ಅಭಿವೃದ್ಧಿಪಡಿಸುವ ಭಂಡ ಯೋಜನೆ-ಇವೆಲ್ಲವೂ ಈ ಹಿಮ್ಮುಖ ಚಲನೆಯ ಸೂಚನೆಗಳೇ. ಹೀಗಿರುವಾಗ, ಬಂಡವಾಳಶಾಹಿಯು ತನ್ನ "ಕೃಪಾಳು" ಅವತಾರಕ್ಕೆ ಮರಳಬಹುದು ಎಂದು ನಂಬುವುದು ಒಂದು ಹುಚ್ಚು ಕಲ್ಪನೆಯಾಗುತ್ತದೆ.




# “ಗ್ರಾಮ್ಶಿ ಚಿಂತನೆಗಳು”: ನವ-ಫ್ಯಾಸಿಸಂನ ಕತ್ತಲು ಕವಿಯುತ್ತಿರುವಾಗ ಅತ್ಯಂತ ಪ್ರಸ್ತುತ

**ಭಾರತದಲ್ಲಿ ಇಂದು ನವ-ಫ್ಯಾಸಿಸಂನ ಅಪಾಯ ತೀವ್ರವಾಗುತ್ತಿರುವ ಸಂದರ್ಭದಲ್ಲಿ ಕಳೆದ ಶತಮಾನದಲ್ಲಿ ಫ್ಯಾಸಿಸಂ ಹೇಗೆ ಹುಟ್ಟಿ ಹರಡಿತು? ಅದರ ವಿರುದ್ಧದ ಸೈದ್ಧಾಂತಿಕ ಮತ್ತು ರಾಜಕೀಯ ಹೋರಾಟದಿಂದ ಈ ಸಂದರ್ಭದಲ್ಲಿ ಏನು ಕಲಿಯಬಹುದು? ಎಂಬುದು ಅತ್ಯಂತ ಪ್ರಸ್ತುತವಾದ ವಿಷಯ. ಇಟಲಿಯಲ್ಲಿ ಮುಸಲೋನಿ ನಾಯಕತ್ವದ ಫ್ಯಾಸಿಸಂ ಯಾಕೆ ಹೇಗೆ ಹುಟ್ಟಿ ಹರಡಿತು? ಮತ್ತು ಅದರ ವಿರುದ್ಧ ಪ್ರತಿರೋಧ ಒಡ್ಡಿ ಸೋಲಿಸುವುದು ಹೇಗೆ? ಈ ಪ್ರಶ್ನೆಗಳ ಕುರಿತು ಸೈದ್ಧಾಂತಿಕ ಚಿಂತನೆ ಮತ್ತು ರಾಜಕೀಯ ಹೋರಾಟ ಎರಡನ್ನೂ ನಡೆಸಿ 11 ವರ್ಷಗಳ ಕಾಲ ಫ್ಯಾಸಿಸ್ಟ್ ಜೈಲಿನಲ್ಲಿ ತನ್ನ ಕೊನೆಕಾಲ ಕಳೆದ ಅಂಟೊನಿಯೊ ಗ್ರಾಮ್ಶಿ ಅವರ ಚಿಂತನೆಗಳ ಮರುಓದು ಈ ವಿಷಯದ ಅರಿವಿಗೆ ಅನಿವಾರ್ಯವಾದ್ದು. ಪ್ರಮುಖವಾಗಿ ಗ್ರಾಮ್ಶಿ ಅವರ “ಜೈಲು ಟಿಪ್ಪಣಿಗಳು” ಕೃತಿಯನ್ನು ಆಧಾರವಾಗಿಟ್ಟುಕೊಂಡು “ಗ್ರಾಮ್ಶಿ ಚಿಂತನೆಗಳು” ಪುಸ್ತಕವನ್ನು ಬರೆಯಲಾಗಿದೆ. ಇದನ್ನು ಬರೆದವರು ಭಾರತದ ಪ್ರಮುಖ ಮಾರ್ಕ್ಸ್‌ವಾದಿ ಚಿಂತಕರು ಮತ್ತು ಕಮ್ಯುನಿಸ್ಟ್ ನಾಯಕರಾದ ಇ.ಎಂ.ಎಸ್ ನಂಬೂದಿರಿಪಾದ್ ಮತ್ತು ಪಿ.ಗೋವಿಂದ ಪಿಳ್ಳೆ. ಈ ಪುಸ್ತಕವನ್ನು ಕ್ರಿಯಾ ಮಾಧ್ಯಮ ಪ್ರಕಟಿಸಿದ್ದು, ಶಿವಮೊಗ್ಗದಲ್ಲಿ ಎಪ್ರಿಲ್ 9 ರಂದು ಗ್ರಾಮ್ಶಿ ಮತ್ತು ಫೂಕೊ ಕುರಿತ ಕಮ್ಮಟದಲ್ಲಿ ಕರ್ನಾಟಕದ ಪ್ರಮುಖ ಚಿಂತಕ ಕೆ. ಫಣಿರಾಜ್ ಅವರು ಬಿಡುಗಡೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಈ ಪುಸ್ತಕದ ಆಯ್ದ ಭಾಗಗಳ ಮೂಲಕ ಪುಸ್ತಕದ ಪರಿಚಯ.**

ಈ ಪುಸ್ತಕದ ಲೇಖಕರಾದ ಇ.ಎಂ.ಎಸ್ ನಂಬೂದಿರಿಪಾದ್ ಮತ್ತು ಪಿ. ಗೋವಿಂದ ಪಿಳ್ಳೆ ಹೇಳುವಂತೆ, ಅಂಟೋನಿಯೋ ಗಾಮ್ಶಿ ‘ಲೆನಿನ್, ರೋಸಾ, ಮಾವೋರಂತೆ ಮಾರ್ಕ್ಸ್‌ವಾದ–ಲೆನಿನ್‌ವಾದದ ಜ್ಞಾನ ಭಂಡಾರಕ್ಕೆ ಮೂಲಭೂತ ಮತ್ತು ವಿಶಿಷ್ಟ ಕೊಡುಗೆಗಳನ್ನು ನೀಡಿದ ಚಿಂತಕ ಮತ್ತು ಕ್ರಾಂತಿಕಾರಿ’. ಅಷ್ಟು ಮಾತ್ರವಲ್ಲ ಮಾರ್ಕ್ಸ್, ಏಂಗೆಲ್ಸ್, ಲೆನಿನ್ ನಂತರ ಅತ್ಯಂತ ಹೆಚ್ಚು ಚರ್ಚಿತರಾದ ಮಾರ್ಕ್ಸ್‌ವಾದಿ. ಇದಕ್ಕೆ ಅವರು ಸಮಾಜವಾದಿ ಕ್ರಾಂತಿಯ ಹೊಸ್ತಿಲಲ್ಲಿದ್ದ ಇಟಲಿಯಲ್ಲಿ ಅದನ್ನು ಕಸಿದ ಫ್ಯಾಸಿಸ್ಟರ ವಿರುದ್ಧ ಹೋರಾಡುತ್ತಾ ಜೈಲಿನಲ್ಲಿ ಪ್ರಾಣ ಬಿಟ್ಟದ್ದು ಮತ್ತು ಫ್ಯಾಸಿಸಂ–ವಿರೋಧಿ ಹೋರಾಟದ ನಾಯಕತ್ವ ವಹಿಸಿದ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದು ಮಾತ್ರ ಕಾರಣವಲ್ಲ. ಗ್ರಾಮ್ಶಿ ಮರಣಾ ನಂತರದ ದಶಕಗಳಲ್ಲಿ ಅವರ ಕೃತಿ, ಚಿಂತನೆಗಳ ಕುರಿತ ವಿಶ್ಲೇಷಣೆಗೆ ಮೀಸಲಾದ (ಸುಮಾರು 20,000) ಲೇಖನಗಳು ಮತ್ತು ಪುಸ್ತಕಗಳನ್ನು ಹಾಗೂ ಉಲ್ಲೇಖಗಳನ್ನು ನೋಡಿದರೆ ಅವರ ವಿಚಾರಗಳ ಪ್ರಖರತೆ, ಮಹತ್ವ ತಿಳಿಯುತ್ತದೆ. ಸೋವಿಯೆಟ್ ಮತ್ತು ಪೂರ್ವ ಯುರೋಪಿನ ದೇಶಗಳಲ್ಲಿ ಸಮಾಜವಾದದ ಹಿನ್ನಡೆಯ ನಂತರ ಗ್ರಾಮ್ಶಿ ಚಿಂತನೆಗಳಲ್ಲಿ ಆಸಕ್ತಿ ಇನ್ನಷ್ಟು ಹೆಚ್ಚಾಗಿದೆ.

ಈ ಆಸಕ್ತಿ ಕಮ್ಯುನಿಸ್ಟ್, ಎಡ ಚಳುವಳಿಗಳು, ಎಡ ಮತ್ತು ಮಾರ್ಕ್ಸ್‌ವಾದಿ ಬೌದ್ಧಿಕ ವಲಯಗಳಿಗೆ ಸೀಮಿತವಾಗಿಲ್ಲ. ತಮ್ಮದು ಮಾರ್ಕ್ಸೋತ್ತರ ಚಿಂತನೆ ಎಂದು ಹೇಳುವ ಪೋಸ್ಟ್–ಮಾಡರ್ನಿಸ್ಟರು (ಆಧುನಿಕೋತ್ತರವಾದಿಗಳು), ‘ಸಾಂಸ್ಕೃತಿಕ ಮಾರ್ಕ್ಸ್‌ವಾದಿಗಳು’ ಎಂದು ಕರೆದುಕೊಳ್ಳುವವರು ಗ್ರಾಮ್ಶಿಯ ಹಲವು ಪರಿಕಲ್ಪನೆಗಳನ್ನು ತಮ್ಮ ಚಿಂತನೆಗಳ ಕೇಂದ್ರದಲ್ಲಿ ಇಟ್ಟುಕೊಂಡಿದ್ದಾರೆ. ಬಲಪಂಥೀಯರು ಮತ್ತು ಉಗ್ರ ಬಲಪಂಥೀಯರಿಗೆ ಸಹ ಗ್ರಾಮ್ಶಿಯ ಕೆಲವು ಚಿಂತನೆಗಳು (ಕೆಲವೊಮ್ಮೆ ತಪ್ಪಾದ ವ್ಯಾಖ್ಯಾನಗಳಿಂದಾಗಿ) ಆಕರ್ಷಕವೆನಿಸಿವೆ. ಯುಕೆ ಶಿಕ್ಷಣ ಸಚಿವ 2013ರಲ್ಲಿ “ಗ್ರಾಮ್ಶಿ ಸಾಂಪ್ರದಾಯಿಕ ಶೈಕ್ಷಣಿಕ ವಿಧಾನಗಳನ್ನು ಸಮರ್ಥಿಸಿದ್ದಾರೆ’ ಎಂದು ಹೇಳಿದರೆ, ಉಗ್ರ ಬಲಪಂಥದ ಫ್ರೆಂಚ್ ನಾಯಕ ನೊವೆಲ್ ಡ್ರೋಯ್ಟ್ ಮತ್ತು ಬೆಲ್ಜಿಯನ್ ನಾಯಕ ಫ್ಲಾಮ್ಸ್ ಗ್ರಾಮ್ಶಿ ‘ನಮ್ಮವನು’ ಎಂದರಂತೆ! ಗ್ರಾಮ್ಶಿ ನಮ್ಮ ಕಾಲದ ಮಾರ್ಕ್ಸ್‌ವಾದಿ ಚಿಂತಕ ಮಾತ್ರವಲ್ಲ, ಎಲ್ಲರೂ ಸ್ಫೂರ್ತಿ ಪಡೆಯುವ ಚಿಂತಕರಾಗಿದ್ದರು – ಹೀಗೆಂದು ಈ ಪುಸ್ತಕದ ಇಂಗ್ಲಿಷ್ ಅನುವಾದಕ ಎಂ.ಜಿ.ರಾಧಾಕೃಷ್ಣನ್ ತಮ್ಮ ಮುನ್ನುಡಿಯಲ್ಲಿ ಹೇಳುತ್ತಾರೆ.

ಭಾರತದಲ್ಲೂ ಒಂದು ಕಡೆ ಎಡ ಮತ್ತು ಮಾರ್ಕ್ಸ್‌ವಾದಿ ಬುದ್ಧಿಜೀವಿಗಳು, ಕಮ್ಯುನಿಸ್ಟರು ಮತ್ತು ಇನ್ನೊಂದು ಕಡೆ ಪೋಸ್ಟ್–ಮಾಡರ್ನಿಸ್ಟರು ಮತ್ತು ‘ಸಾಂಸ್ಕೃತಿಕ ಮಾರ್ಕ್ಸ್‌ವಾದಿ’ ಧಾರೆಯಿಂದ ಪ್ರಭಾವಿತರಾದವರು ಗ್ರಾಮ್ಶಿ ಚಿಂತನೆಗಳನ್ನು ಭಾರತದ ಸನ್ನಿವೇಶದ ವಿಶ್ಲೇಷಣೆಗೆ ಅನ್ವಯಿಸಲು ಪ್ರಯತ್ನಿಸಿದ್ದಾರೆ. ಮಾರ್ಕ್ಸ್‌ವಾದಿ ಚಿಂತಕ ಪ್ರೊ. ಐಜಾಝ್ ಅಹಮದ್ ಅವರ “ಫ್ಯಾಸಿಸಂ ಮತ್ತು ರಾಷ್ಟ್ರೀಯ ಸಂಸ್ಕೃತಿ: ಹಿಂದುತ್ವದ ದಿನಗಳಲ್ಲಿ ಗ್ರಾಮ್ಶಿ ಓದು” ಎಂಬ ದೀರ್ಘ ಪ್ರಬಂಧ ಇಂತಹ ಒಂದು ಉತ್ತಮ ಉದಾಹರಣೆ. 1980ರ ದಶಕದಲ್ಲಿ ಗ್ರಾಮ್ಶಿಯ ಕೃತಿಗಳ ಅಧ್ಯಯನದ ನಂತರ ಇಎಂಎಸ್ ಮತ್ತು ಗೋವಿಂದ ಪಿಳ್ಳೆ ಅವರಿಗೆ “ಗ್ರಾಮ್ಶಿಯ ‘ಜೈಲು ಟಿಪ್ಪಣಿ’ಗಳನ್ನು ಕರಗತ ಮಾಡಿಕೊಳ್ಳದೆ ಇಂದಿನ ಪೀಳಿಗೆಯ ಮಾರ್ಕ್ಸ್‌ವಾದಿ–ಲೆನಿನ್‌ವಾದಿಗಳಿಗೆ ತಮ್ಮ ಕಾರ್ಯ ಚಟುವಟಿಕೆಗಳನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗಲು ಸಾಧ್ಯವಾಗುವುದಿಲ್ಲ” ಎಂದನಿಸಿತು. ಹಾಗಾಗಿ ಅವರು ಜೊತೆಯಾಗಿ ‘ಚಿಂತಾ’ ವಾರಪತ್ರಿಕೆಯಲ್ಲಿ ‘ಗ್ರಾಮ್ಶಿಯನ್ ವಿಚಾರ ವಿಪ್ಲವಂ’ ಎಂಬ ಪರಿಚಯಾತ್ಮಕ ಲೇಖನ ಸರಣಿಯನ್ನು ಬರೆದರು. 1996ರಲ್ಲಿ ಅದು ಒಂದು ಪುಸ್ತಕವಾಗಿ ಪ್ರಕಟವಾಯಿತು.

ಈ ಪುಸ್ತಕದಲ್ಲಿ ಗ್ರಾಮ್ಶಿ ಅವರ ಸಂಕಷ್ಟಮಯ ಜೀವನ, ಅವರ ಚಿಂತನೆಗಳ ಅಡಿಗಲ್ಲುಗಳು, ಸುಮಾರು ಎಂಟು ವಿಚಾರ(ಥೀಮ್)ಗಳ ಕುರಿತು ಅವರ ವಿಶ್ಲೇಷಣೆಗಳನ್ನು ಒಳಗೊಂಡ ಮೂರು ಭಾಗಗಳಿವೆ. ಎಡ–ಪ್ರಗತಿಪರ ಚಳುವಳಿಯ ಕಾರ್ಯಕರ್ತರು ಸೇರಿದಂತೆ ಎಲ್ಲ ಸಾಮಾನ್ಯ ಆಸಕ್ತರಿಗೆ ನಿಲುಕುವಂತೆ ಗ್ರಾಮ್ಶಿ ಅವರ ಸಂಕೀರ್ಣ ಚಿಂತನೆ ವಿಶ್ಲೇಷಣೆಗಳನ್ನು ನಿರೂಪಿಸಿದ ಇದು ಒಂದು ವಿಶಿಷ್ಟ ಪುಸ್ತಕ. ಫಣಿರಾಜ್ ತಮ್ಮ ಮುನ್ನುಡಿಯಲ್ಲಿ ಹೇಳುವಂತೆ “ವಿಶಾಲವಾದ ವಸ್ತು ವಿಷಯಗಳ ಕುರಿತ ಚಿಂತನೆಗಳ ಗಹನತೆಯು ತೆಳುವಾಗದ ಹಾಗೆ ಸೋಸಿದ ಸಾರ ಸಂಗ್ರಹ ರೂಪದ ಕೈಪಿಡಿ” ಇದು. ಗಹನವಾದ ದಪ್ಪದ ಕ್ಲಾಸಿಕ್ ಕೃತಿಗಳನ್ನು ಪೂರ್ತಿಯಾಗಿ ಅನುವಾದ ಮಾಡದೆಯೂ ಸಾರ ಸಂಗ್ರಹ ರೂಪದಲ್ಲಿ ಸಾಮಾನ್ಯರಿಗೆ ನಿಲುಕುವಂತೆ ಹೇಳುವುದು ಅಗತ್ಯ ಮತ್ತು ಸಾಧ್ಯ ಎಂದು ಈ ಕೃತಿ ತೋರಿಸುತ್ತದೆ. ಮಾತ್ರವಲ್ಲ ಅದಕ್ಕೆ ಒಂದು ಒಳ್ಳೆಯ ಮಾದರಿಯನ್ನು ಸಹ ಒದಗಿಸುತ್ತದೆ. ಈ ದೃಷ್ಟಿಯಿಂದಲೂ ಇದೊಂದು ವಿಶಿಷ್ಟ ಕೃತಿ.

ಈ ಪುಸ್ತಕ ಮಲಯಾಳಂ ಅವೃತ್ತಿಯ ಅನುವಾದ. ಮಲಯಾಳಂನಿಂದ ಕನ್ನಡಕ್ಕೆ ಹಲವು ಸೃಜನಶೀಲ ಮತು ಸೃಜನೇತರ ಕೃತಿಗಳ ಅನುವಾದ ಮಾಡಿರುವ ನುರಿತ ಅನುವಾದಕರಾದ ಪ್ರಭಾಕರನ್ ಕೆ. ಮಾಡಿದ್ದಾರೆ. ಅನುವಾದವನ್ನು ಪರಿಷ್ಕರಿಸಲು 2021ರಲ್ಲಿ ಪ್ರಕಟವಾದ ಇಂಗ್ಲಿಷ್ ಅನುವಾದವನ್ನು ಸಹ ಬಳಸಲಾಗಿದೆ.

ಗ್ರಾಮ್ಶಿ ಮತ್ತು ಅವರ ಚಿಂತನೆಗಳ ಕುರಿತು ಕನ್ನಡದಲ್ಲಿ ಬಹುಶಃ ಮೊದಲ ಪುಸ್ತಕ ಬರೆದ ಮತ್ತು ಕರ್ನಾಟಕದ ಪ್ರಮುಖ ‘ಗ್ರಾಮ್ಶಿ ಪಂಡಿತ’ರು ಎಂದು ಗುರುತಿಸಲಾಗುವ ಚಿಂತಕ ಲೇಖಕ ಫಣಿರಾಜ್ ಕೆ. ಇದಕ್ಕೆ ಒಂದು ಸ್ಫೂರ್ತಿದಾಯಕ ಮುನ್ನುಡಿ ಬರೆದಿದ್ದಾರೆ.

ಈ ಪುಸ್ತಕದ ಓದು ಗ್ರಾಮ್ಶಿ ಎದುರಿಸಿದ ಸವಾಲನ್ನು ನಮ್ಮ ಕಾಲದಲ್ಲಿ ಎದುರಿಸಲು ಕರ್ನಾಟಕದ ಜನತೆಯನ್ನು ತಯಾರು ಮಾಡುವ ಸಾಧ್ಯತೆಯನ್ನು ಹೊಂದಿದೆ.

**ಪುಸ್ತಕದ ಪಠ್ಯದಿಂದ**

ಇಟಲಿಯ ಕಮ್ಯೂನಿಸ್ಟ್ ಪಕ್ಷದ ಸ್ಥಾಪಕ ನೇತಾರರಲ್ಲಿ ಪ್ರಮುಖರಾಗಿದ್ದ ಗ್ರಾಮ್ಶಿ ಇಟಲಿಯ ಕ್ರಾಂತಿಯ ಚಳುವಳಿಯಲ್ಲಿ ಭಾಗವಹಿಸಿದ್ದು ಮಾತ್ರವಲ್ಲ, ಮಾಸ್ಕೊದಲ್ಲಿ ತಂಗಿದ್ದು ಯೂರೋಪಿನ ವಿವಿಧ ಕೇಂದ್ರಗಳಲ್ಲಿ ಸಂಚರಿಸುತ್ತಾ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್‌ನ ಕಾರ್ಯನಿರ್ವಾಹಕರಲ್ಲಿ ಒಬ್ಬರಾಗಿ ಕಾರ್ಯನಿರ್ವಹಿಸಿದ್ದಾರೆ. ಹಾಗೆ ಪಡೆದುಕೊಂಡ ಅನುಭವ ಸಂಪತ್ತಿನ ಮತ್ತು ಅಧ್ಯಯನದ ಬೆಳಕಿನಲ್ಲಿ ನಡೆಸಿದ ವಿಮರ್ಶೆಗಳ ಮತ್ತು ಸ್ವಯಂ–ವಿಮರ್ಶೆಗಳ ಫಲವಾದ ಜ್ಞಾನವನ್ನು ಗ್ರಾಮ್ಶಿ ತಮ್ಮ “ಜೈಲು ಟಿಪ್ಪಣಿ”ಗಳಲ್ಲಿ ಒಳಗೊಂಡಿದ್ದಾರೆ.

ಮಾರ್ಕ್ಸ್‌ವಾದ–ಲೆನಿನ್‌ವಾದದ ಜ್ಞಾನ ಭಂಡಾರಕ್ಕೆ ವಿ.ಐ.ಲೆನಿನ್ ನಂತರ ಜರ್ಮನಿಯ ರೋಸಾ ಲಕ್ಸ್‌ಂಬರ್ಗ್, ಚೈನಾದ ಮಾವೋ ತ್ಸೆ ತುಂಗ್ ಮುಂತಾದವರಂತೆ, ಮೂಲಭೂತ ಮತ್ತು ವಿಶಿಷ್ಟ ಕೊಡುಗೆಗಳನ್ನು ನೀಡಿದ ಮಾರ್ಕ್ಸ್‌ವಾದಿ ಚಿಂತಕ ಮತ್ತು ಕ್ರಾಂತಿಕಾರಿಗಳ ಸಾಲಿಗೆ ಗ್ರಾಮ್ಶಿ ಸೇರುತ್ತಾರೆ. ಮಾರ್ಕ್ಸ್, ಏಂಗೆಲ್ಸ್ ಮತ್ತು ಲೆನಿನ್ ಇವರಿಂದ ರೂಪುಗೊಂಡ ಕಾರ್ಮಿಕ ವರ್ಗದ ದರ್ಶನ, ರಾಜಕೀಯ ಮತ್ತು ಸಾಂಸ್ಕೃತಿಕ ಧೋರಣೆಗಳನ್ನು ರಾಷ್ಟ್ರ ಮೀಮಾಂಸೆ, ಸಾಂಸ್ಕೃತಿಕ ನೆಲೆಗಟ್ಟು, ಇಟಲಿ ಕ್ರಾಂತಿಯ ಅನುಭವಗಳೊಂದಿಗೆ ಪುನರ್–ಅವಿಷ್ಕಾರ ಮಾಡಿ, ಆ ಮೂಲಕ ಮಾರ್ಕ್ಸ್‌ವಾದಿ ಲೆನಿನ್‌ವಾದಿ ಅಧ್ಯಯನಗಳು ಮತ್ತು ಜ್ಞಾನಮೀಮಾಂಸೆಗಳನ್ನು ಗ್ರಾಮ್ಶಿ ಇನ್ನಷ್ಟು ಶ್ರೀಮಂತಗೊಳಿಸಿದ್ದಾರೆ. ಗ್ರಾಮ್ಶಿಯ ‘ಜೈಲು ಟಿಪ್ಪಣಿ’ಗಳನ್ನು ಕರಗತ ಮಾಡಿಕೊಳ್ಳದೆ ಇಂದಿನ ಪೀಳಿಗೆಯ ಮಾರ್ಕ್ಸ್‌ವಾದಿ–ಲೆನಿನ್‌ವಾದಿಗಳಿಗೆ ತಮ್ಮ ಕಾರ್ಯಚಟುವಟಿಕೆಗಳನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗಲು ಸಾಧ್ಯವಾಗುವುದಿಲ್ಲ.

*– ಇ.ಎಂ.ಎಸ್. ನಂಬೂದಿರಿಪಾದ್, ಪಿ. ಗೋವಿಂದ ಪಿಳ್ಳೆ*

**ವಸಂತರಾಜ ಎನ್.ಕೆ.**

**ಮುನ್ನುಡಿಯಿಂದ**

ಮಾರ್ಕ್ಸ್‌ವಾದ– ಲೆನಿನ್ ವಾದಗಳ ವೈಚಾರಿಕ ಕಣ್ಣೋಟಗಳಿಗೆ ಬದ್ಧವಾಗಿರುವ ಕಾರ್ಮಿಕ ವರ್ಗದ ಪಕ್ಷವು ತನ್ನ ಎದುರಿಗಿರುವ ಸವಾಲುಗಳನ್ನು ನಗಣ್ಯಗೊಳಿಸಿ, ಮುಂದೊಂದು ದಿನ ನಾವು ವಿಜಯಿಯಾಗುತ್ತೇವೆ ಎಂಬ ಹುಂಬ ಆಶಾವಾದದಲ್ಲಿ ಕಾಲ ತಳ್ಳದೆ, ತಾನು ನಡೆದು ಬಂದ ಹಾದಿಯಲ್ಲಿ ಎಸಗಿರುವ ತಪ್ಪುಗಳನ್ನು ವಿಮರ್ಶಿಸಿಕೊಂಡು, ಆಗಿರುವ ಹಿನ್ನಡೆಗಳನ್ನು ಒಪ್ಪಿಕೊಂಡು, ಮುಂದಿನ ಕಾರ್ಯಯೋಜನೆಗಳ ಕಡೆ ನಡೆಯಬೇಕು ಎಂಬ ಸ್ಪಷ್ಟತೆಯಲ್ಲಿ ಈ ಕಿರು ಹೊತ್ತಿಗೆಯನ್ನು ರಚಿಸಲಾಗಿದೆ.

1970ರ ನಂತರದ ಕಾಲದಲ್ಲಿ ಪಂಡಿತ ವಲಯದಲ್ಲಿ ಗ್ರಾಮ್ಶಿಯ ವಿಚಾರಗಳ ಕುರಿತು ವಿಶೇಷ ಆಸಕ್ತಿ ಕಾಣಿಸಿಕೊಂಡಿತು. ತುಂಬು ಬೌದ್ಧಿಕ ಜಿಜ್ಞಾಸೆ, ಪಾಂಡಿತ್ಯದ ಭಾಷಾ ಬಳಕೆಗಳು ಇರುವ ಅಂತಹ ಕೃತಿಗಳಲ್ಲಿ ಚಿಂತನೆಗಳಿಗೆ ಸಂಘಟನಾ ಜಾಗೃತಿಯ ಪ್ರಾಯೋಗಿಕ ಆಚರಣೆಗಳ ರೂಪ ಕೊಡುವ ತುರ್ತು ಕಾಣುವುದಿಲ್ಲ. ಪ್ರಸ್ತುತ ಪುಸ್ತಕದ ಇಬ್ಬರೂ ಲೇಖಕರು ದಶಕಗಳ ಕಾಲ ದುಡಿಯುವ ವರ್ಗವನ್ನು ಸಂಘಟಿಸುವ ಕಾರ್ಯಾಚರಣೆಯ ಭಾಗವಾಗಿ ಬೌದ್ಧಿಕ ಜ್ಞಾನ ಪಡೆದವರಾಗಿ ಇರುವುದರಿಂದ, ಇಲ್ಲಿನ ಚಿಂತನಾ ನಿರೂಪಣೆಯು ಸಂಘಟನಾ ಕಾರ್ಯಶೀಲತೆಯ ಕುಲುಮೆಯಲ್ಲಿ ಬೆಂದು, ಪ್ರಯೋಗದ ಸುತ್ತಿಗೆ ಹೊಡೆತದಲ್ಲಿ ಆಕಾರ ಪಡೆದು, ಕಾರ್ಯಕರ್ತರು ಬಳಸಬಹುದಾದ ಸಂಘಟನಾ ಸಾಧನದ ರೂಪದಲ್ಲಿ ಪ್ರಕಟವಾಗಿದೆ. ಶತಮಾನದ ಇತಿಹಾಸವಿರುವ ದುಡಿಯುವ ವರ್ಗವನ್ನು ಪ್ರತಿನಿಧಿಸುವ ರಾಜಕೀಯ ಪಕ್ಷಗಳ ಕಾರ್ಯಕ್ರಮ – ಕಾರ್ಯತಂತ್ರಗಳ ಒರೆಗಲ್ಲಿಗೆ ಉಜ್ಜಿ ಗ್ರಾಮ್ಶಿಯ ವಿಚಾರಗಳ ಮೌಲ್ಯಮಾಪನ ಮಾಡಿರುವುದು ಈ ಕಿರುಹೊತ್ತಿಗೆಯ ವಿಶೇಷ.

ಈ ಕಿರು ಹೊತ್ತಿಗೆಯ ಮುಖೇನ ಘನ ಸಮಾಜವಾದಿ ಚಿಂತಕ–ರಾಜಕಾರಣಿ ಅಂಟೋನಿಯೊ ಗ್ರಾಮ್ಶಿ ‘ನಮ್ಮ ಗ್ರಾಮ್ಶಿ’ ಆಗಲಿ ಎಂದು ಹಾರೈಸುತ್ತೇನೆ.

*–ಫಣಿರಾಜ್ ಕೆ.*

## ಹವಾನಾದಲ್ಲಿ ಕ್ಯೂಬಾ ಅಧ್ಯಕ್ಷ ಕಾಸ್ಟ್ರೊರೊಂದಿಗೆ..... ಪುಟ 16 ರಿಂದ

ಕೇರಳದಲ್ಲಿ ಶಿಕ್ಷಣವನ್ನು ಪ್ರಜಾಪ್ರಭುತ್ವೀಕರಿಸುವ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ ಪಡೆಯನ್ನು ಬೆಂಬಲಿಸುವ ಒಂದು ವ್ಯಾಪಕ ಪ್ರಯತ್ನದ ಭಾಗವಾಗಿತ್ತು.

ಕಾಂ. ಬೇಬಿ 2012ರಲ್ಲಿ ಸಿಪಿಐ(ಎಂ)ನ ಪೊಲಿಟ್‌ಬ್ಯುರೊದ ಸದಸ್ಯರಾದರು. ತುರ್ತು ಪರಿಸ್ಥಿತಿಯ ವೇಳೆಯಲ್ಲಿ ಹಲವು ಬಾರಿ ಅವರ ಬಂಧನಕ್ಕೊಳಗಾದರು. ಅಮಾನವೀಯ ಪೊಲೀಸ್ ಚಿತ್ರಹಿಂಸೆಗೂ ಗುರಿಯಾದರು.

ಬೇಬಿ ಒಬ್ಬ ರಾಜಕೀಯ ವ್ಯಕ್ತಿಯಷ್ಟೇ ಅಲ್ಲ, ಬರಹಗಾರರು ಮತ್ತು ಸಂಪಾದಕರೂ ಆಗಿದ್ದಾರೆ. ಮಲೆಯಾಳಂ ನಲ್ಲಿ ಅವರ ಮತ್ತು ಅವರು ಸಂಪಾದಿಸಿದ ಹಲವಾರು ಕೃತಿಗಳು ಪ್ರಕಟವಾಗಿವೆ. ಸಂಸ್ಕೃತಿಗೆ ಅವರ ಕೊಡುಗೆಗೆ ಮನ್ನಣೆಯಾಗಿ 2013ರಲ್ಲಿ ‘ಅಭಿನವ ರಂಗಮಂಡಳ’ ಸ್ಥಾಪಿಸಿದ ಅರ್ಜುನ್ ಸಿಂಗ್ ಪ್ರಶಸ್ತಿಯ ಮೊದಲ ಪುರಸ್ಕೃತರಾಗಿದ್ದಾರೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE April 14-20, 2025 Price: Rs. 10/- Date of Publication: 11 April 2025 RNI No. KARKAN/2006/17926 Posted on 15-04-2025
Posted at BG PSO, BG - 560026 **Posted at Periodical Rate -** Rs. 2

## ಜನತೆಯ ಮೂಲಭೂತ ಅಗತ್ಯಗಳನ್ನು ಮೂಲಭೂತ ಹಕ್ಕುಗಳೆಂದು ಮಾನ್ಯ ಮಾಡಬೇಕು: ಮಹಾಧಿವೇಶನದ ಆಗ್ರಹ

ಆಹಾರ, ವಸತಿ, ಉದ್ಯೋಗ, ಪಿಂಚಣಿ, ಶಿಕ್ಷಣ ಮತ್ತು ಆರೋಗ್ಯ ಪಾಲನೆಯಂತಹ ಅಗತ್ಯ ಸಾರ್ವಜನಿಕ ಸರಕುಗಳು ಮತ್ತು ಸೇವೆಗಳನ್ನು ಒದಗಿಸುವ ಕಲ್ಯಾಣ ಯೋಜನೆಗಳು ಔದಾರ್ಯದ ಕ್ರಮಗಳಲ್ಲ, ಬದಲಾಗಿ ಪ್ರತೀ ನಾಗರಿಕರ ಮೂಲಭೂತ ಹಕ್ಕುಗಳಾಗಿವೆ ಎಂದು ತಾನು ನಂಬುವುದಾಗಿ ಸಿಪಿಐ(ಎಂ)ನ 24ನೇ ಮಹಾಧಿವೇಶನ ಹೇಳಿದೆ.

ನಮ್ಮ ಸಂವಿಧಾನದ ಪ್ರಭುತ್ವ ನೀತಿಯ ನಿರ್ದೇಶಕ ತತ್ವಗಳು, ಸರ್ಕಾರವು ಜಾತಿ, ಧರ್ಮ ಅಥವಾ ಇತರ ವ್ಯತ್ಯಾಸಗಳನ್ನು ಲೆಕ್ಕಿಸದೆ ಎಲ್ಲಾ ನಾಗರಿಕರಿಗೆ ಒಂದು ಘನತೆಯ ಜೀವನವನ್ನು ಖಚಿತಪಡಿಸಬೇಕು ಎಂದು ಆದೇಶಿಸುತ್ತದೆ. ದುರದೃಷ್ಟವಶಾತ್, ಇವನ್ನು ಕಾನೂನಾತ್ಮಕವಾಗಿ ಜಾರಿಗೊಳಿಸಲು ಸಾಧ್ಯವಿಲ್ಲ, ಆದ್ದರಿಂದ ಅವುಗಳನ್ನು ನ್ಯಾಯಾಲಯದ ಪರಿಶೀಲನೆಗೆ ಒಳಪಡುವ ಸಾಂವಿಧಾನಿಕ ನಾಗರಿಕರ ಹಕ್ಕುಗಳಾಗಿ ಪರಿವರ್ತಿಸುವ ಅವಶ್ಯಕತೆಯಿದೆ ಎಂದು ಮಹಾಧಿವೇಶನ ಅಂಗೀಕರಿಸಿರುವ ಒಂದು ನಿರ್ಣಯ ಹೇಳಿದೆ.

ನ್ಯಾಯ ಮತ್ತು ಸಮಾನತೆಯ ಆಡಿಗಲ್ಲಾಗಿರುವ ಈ ಅತ್ಯಗತ್ಯ ಅವಶ್ಯಕತೆಗಳನ್ನು ಪಡೆಯುವ ಹಕ್ಕು ಪ್ರತೀ ನಾಗರಿಕರಿಗೂ ಇದೆ. ಸಾಮಾಜಿಕ ಪ್ರಗತಿಯಲ್ಲಿ ಆರ್ಥಿಕ ಹಕ್ಕುಗಳು



ನಿರ್ಣಾಯಕ ಪಾತ್ರ ವಹಿಸುತ್ತವೆ ಮತ್ತು ಮಾನವ ಬಂಡವಾಳದಲ್ಲಿ ಹೂಡಿಕೆಗಳಾಗಿ ಕಲ್ಯಾಣ ಕಾರ್ಯಕ್ರಮಗಳು ಕಾರ್ಯನಿರ್ವಹಿಸುತ್ತವೆ, ಇವು ಹೆಚ್ಚು ಉತ್ಪಾದಕ ಶ್ರಮಿಕ ಬಲವನ್ನು ಸೃಷ್ಟಿಸುತ್ತವೆ ಮತ್ತು ದೀರ್ಘಕಾಲೀನ ಆರ್ಥಿಕ ಬೆಳವಣಿಗೆಗೆ ಚಾಲನೆ ನೀಡುತ್ತವೆ.

ಸರ್ಕಾರಗಳು ಸಾಮಾಜಿಕ ವಲಯದಿಂದ ಹಿಂದೆ ಸರಿಯಬೇಕು ಮತ್ತು ಆರೋಗ್ಯ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಕಾರ್ಪೊರೇಟ್‌ಗಳ ಹಿತಾಸಕ್ತಿಗಾಗಿ ಖಾಸಗೀಕರಣಗೊಳಿಸಬೇಕು ಎಂಬುದು ನವ ಉದಾರವಾದಿ ನೀತಿಗಳ ಮೂಲ ಪ್ರಮೇಯವಾಗಿದೆ. ಆದ್ದರಿಂದ ನವ-ಉದಾರವಾದಿ ನೀತಿಗಳ ಆರಂಭದಿಂದ ಸಾಮಾಜಿಕ ವಲಯದ ಮೇಲೆ ಸೈದ್ಧಾಂತಿಕ ಮತ್ತು ವಿನಾಶಕಾರಿ ದಾಳಿಗಳು ಕಾಣಬಂದಿವೆ.

ಬಿಜೆಪಿ ನೇತೃತ್ವದ ಮೋದಿ ಸರ್ಕಾರವು ಈ ಕಾರ್ಯಕ್ರಮಗಳನ್ನು ಕೆಡವಿ ಬಿಡುವ ಮತ್ತು ಸಬ್ಸಿಡಿಗಳನ್ನು ಕಡಿಮೆ ಮಾಡುವ ಪ್ರಯತ್ನಗಳನ್ನು ತೀವ್ರಗೊಳಿಸಿದೆ. ಪ್ರಧಾನಿ ಮೋದಿ ಅಂತಹ ಸಾಮಾಜಿಕ ಕಲ್ಯಾಣದ ಉಪಕ್ರಮಗಳನ್ನು 'ರೆವ್ಡಿ' (ಪುಕ್ಕಟೆ ಸಿಹಿತಿಂಡಿ) ಎಂದು ಹಣೆಪಟ್ಟಿ ಹಚ್ಚುವ ಮೂಲಕ ಅವನ್ನು ಅವಹೇಳನ ಮಾಡುವಲ್ಲಿ ಮುಂಚೂಣಿಯಲ್ಲಿದ್ದಾರೆ. ಅವು ದೇಶದ ಅಭಿವೃದ್ಧಿಗೆ ಹಾನಿ ಮಾಡುತ್ತವೆ ಎಂದು ಸುಳ್ಳು ದಾವೆ ಮುಂದಿಡುತ್ತಾರೆ. ಈ ಕಥನವು ಬಿಜೆಪಿ ಕೇಂದ್ರ ಸರ್ಕಾರವು ಅನುಸರಿಸುತ್ತಿರುವ ಮಾರುಕಟ್ಟೆ-ಚಾಲಿತ, ನವ-ಉದಾರವಾದಿ ನೀತಿಗಳ ಪ್ರತಿಕೂಲ ಪರಿಣಾಮಗಳಿಂದ ದುರ್ಬಲ ವಿಭಾಗಗಳನ್ನು ರಕ್ಷಿಸುವಲ್ಲಿ ಸಾಮಾಜಿಕ ಕಲ್ಯಾಣದ ನಿರ್ಣಾಯಕ ಪಾತ್ರವನ್ನು ತಳ್ಳಿಹಾಕುತ್ತದೆ.

ಸಬ್ಸಿಡಿ ಆಧಾರಿತ ಯೋಜನೆಗಳ ಬದಲಿಗೆ ಮೋದಿ ಸರ್ಕಾರವು ತಂದಿರುವ ಕೆಲವು ನಗದು ವರ್ಗಾವಣೆ ಯೋಜನೆಗಳು ಅಂತಿಮವಾಗಿ ಅಗತ್ಯ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳನ್ನು ದುರ್ಬಲಗೊಳಿಸಲು ಮತ್ತು ನಂತರ ಕಳಚಿಹಾಕಲು ದಾರಿ ಮಾಡಿಕೊಡುತ್ತವೆ. ಇದು ಸಮಾಜದ ಅತ್ಯಂತ ದುರ್ಬಲ ವರ್ಗಗಳನ್ನು ಎಂದಿಗಿಂತಲೂ ಹೆಚ್ಚು ಅಸಹಾಯಕರನ್ನಾಗಿ ಮಾಡುತ್ತದೆ.

ಈ ವಿಧಾನವು ಸಂವಿಧಾನದ ಭಾಗವಾಗಿರುವ ಪ್ರಭುತ್ವ ನೀತಿಯ ನಿರ್ದೇಶಕ ತತ್ವಗಳ ಉಲ್ಲಂಘನೆಯಾಗಿದೆ, ಇದು ಸರ್ಕಾರವು ಜಾತಿ, ಧರ್ಮ ಅಥವಾ ಇತರ ವ್ಯತ್ಯಾಸಗಳನ್ನು ಲೆಕ್ಕಿಸದೆ ಎಲ್ಲಾ ನಾಗರಿಕರಿಗೆ ಒಂದು ಘನತೆಯ ಜೀವನವನ್ನು ಖಚಿತಪಡಿಸಬೇಕು ಎಂದು ಆದೇಶಿಸುತ್ತದೆ. ದುರದೃಷ್ಟವಶಾತ್, ಇವನ್ನು ಕಾನೂನಾತ್ಮಕವಾಗಿ ಜಾರಿಗೊಳಿಸಲು ಸಾಧ್ಯವಿಲ್ಲ, ಆದ್ದರಿಂದ ಅವುಗಳನ್ನು ನ್ಯಾಯಾಲಯ ಪರಿಶೀಲನೆಗೆ ಒಳಪಡುವ ಸಾಂವಿಧಾನಿಕ ನಾಗರಿಕರ ಹಕ್ಕುಗಳಾಗಿ ಪರಿವರ್ತಿಸುವ ಅವಶ್ಯಕತೆಯಿದೆ.

ನವ-ಉದಾರವಾದಿ ಕಾರ್ಯಸೂಚಿಗಳನ್ನು ಅನುಸರಿಸುವ ಸರ್ಕಾರಗಳು ಹಣಕಾಸಿನ ನಿರ್ಬಂಧಗಳಿಂದಾಗಿ ಈ ಹಕ್ಕುಗಳನ್ನು ಖಾತರಿಪಡಿಸಲಾಗುವುದಿಲ್ಲ ಎಂದು ವಾದಿಸುತ್ತವೆ. ಇದೊಂದು ಕಪಟ ತರ್ಕ. ಏಕೆಂದರೆ, ಕಾರ್ಪೊರೇಟ್ ತೆರಿಗೆಗಳನ್ನು ನಿರಂತರವಾಗಿ ಕಡಿತ ಮಾಡಿಕೊಂಡು ಬಂದಿರುವುದು, ಜತೆಗೆ ಕಾರ್ಪೊರೇಟ್‌ಗಳಿಂದ ಕಾನೂನುಬದ್ಧವಾಗಿ ಬರಬೇಕಾದ ತೆರಿಗೆಗಳನ್ನು ಸಂಗ್ರಹಿಸಲು ನಿರಾಕರಿಸುವುದು ಅವರ ಹಣಕಾಸು ನೀತಿಯ ಪ್ರಮುಖ ಭಾಗವಾಗಿದೆ. ಬಿಜೆಪಿ ಸರ್ಕಾರವು ತನ್ನ ಅಸ್ತಿತ್ವದ ಪ್ರತಿ ವರ್ಷವೂ ಈ ತೆರಿಗೆಗಳನ್ನು ಕಡಿಮೆ ಮಾಡಿದೆ. ಒಂದು ತರ್ಕಬದ್ಧ ತೆರಿಗೆ ಸಂರಚನೆಯ ಮೂಲಕ ಎಲ್ಲಾ ನಾಗರಿಕರಿಗೆ ಎಲ್ಲಾ ಅಗತ್ಯ ಸೇವೆಗಳನ್ನು ಖಚಿತವಾಗಿ ಒದಗಿಸಲು ಸಾಧ್ಯವಿದೆ ಎಂದು ಮಹಾಧಿವೇಶನ ತನ್ನ ನಿರ್ಣಯದಲ್ಲಿ ಹೇಳಿದೆ.

ಅಸ್ತಿತ್ವದಲ್ಲಿರುವ ವಿವಿಧ ಕಲ್ಯಾಣ ಕಾರ್ಯಕ್ರಮಗಳನ್ನು ದುರ್ಬಲಗೊಳಿಸುವ ಕೇಂದ್ರ ಸರ್ಕಾರದ ಪ್ರಯತ್ನಗಳನ್ನು ದೃಢಭಾವದಿಂದ ವಿರೋಧಿಸುತ್ತಲೇ, ಆಹಾರ, ವಸತಿ, ಉದ್ಯೋಗ, ಪಿಂಚಣಿ, ಶಿಕ್ಷಣ ಮತ್ತು ಆರೋಗ್ಯ ಪಾಲನೆಯ ಮೂಲಭೂತ ಹಕ್ಕುಗಳನ್ನು ಪಡೆದುಕೊಳ್ಳುವ ಹೋರಾಟಕ್ಕೆ ಒಗ್ಗೂಡಿ ಸಜ್ಜುಗೊಳ್ಳುವಂತೆ ಸಿಪಿಐ(ಎಂ)ನ 24ನೇ ಮಹಾಧಿವೇಶನವು ದೇಶದ ಜನರಿಗೆ ಕರೆ ನೀಡಿದೆ.



## ಕಾಂ. ಎಂ.ಎ. ಬೇಬಿ
### –ಸಿಪಿಐ(ಎಂ)ನ ಹೊಸ ಪ್ರಧಾನ ಕಾರ್ಯದರ್ಶಿ

ಮಧುರೈನಲ್ಲಿ ನಡೆದ ಸಿಪಿಐ(ಎಂ)ನ 24ನೇ ಮಹಾಧಿವೇಶನ ಕಾಂ. ಎಂ.ಎ.ಬೇಬಿಯವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆರಿಸಿದೆ. ಅವರ ಹೆಸರನ್ನು ಪೊಲಿಟ್‌ಬ್ಯುರೊ ಸದಸ್ಯರಾದ ಮಹಮ್ಮದ್ ಸಲೀಂ ಸೂಚಿಸಿದರು, ಇನ್ನೊಬ್ಬ ಪೊಲಿಟ್‌ಬ್ಯುರೊ ಸದಸ್ಯರಾದ ಅಶೋಕ ಧವಳೆ ಅನುಮೋದಿಸಿದರು. ಮತ್ತೊಬ್ಬ ಪೊಲಿಟ್‌ಬ್ಯುರೊ ಸದಸ್ಯರು ಮತ್ತು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಇದನ್ನು ಅಧಿಕೃತವಾಗಿ ಪ್ರಕಟಿಸಿದರು.

ಕೇರಳದ ಪ್ರಕ್ಕುಳಂನಲ್ಲಿ 1954ರಲ್ಲಿ ಜನಿಸಿದ ಬೇಬಿಯವರು ಆರಂಭಿಕ ಶಿಕ್ಷಣವನ್ನು ಪಡೆದದ್ದು ಪ್ರಕ್ಕುಳಂ ಪಂಚಾಯತ್ ಕಿರಿಯ ಪ್ರಾಥಮಿಕ ಶಾಲೆಯಲ್ಲಿ. ನಂತರ ಎನ್‌ಎಸ್‌ಎಸ್ ಸ್ಕೂಲ್ ಮತ್ತು ಕೊಲ್ಲಂನ ಎಸ್‌ಎನ್ ಕಾಲೇಜಿನಲ್ಲಿ ಕಲಿಕೆ ಮುಂದುವರೆಸಿದರು. ಬಹು ಬೇಗನೇ ಅವರ ರಾಜಕೀಯ ಪ್ರಜ್ಞೆ ತೀಕ್ಷ್ಣಗೊಂಡಿತ್ತು. 1974ರ ವೇಳೆಗೆ ಅವರು ಎಸ್‌ಎಫ್‌ಐನ ಕೇಂದ್ರೀಯ ಕಾರ್ಯಕಾರಿ ಸಮಿತಿಯ ಅತ್ಯಂತ ಕಿರಿ ವಯಸ್ಸಿನ ಸದಸ್ಯರಾದರು. ಒಂದು ವರ್ಷದ ನಂತರ ಎಸ್‌ಎಫ್‌ಐನ ಕೇರಳ ಘಟಕದ ಅಧ್ಯಕ್ಷರಾಗಿ ಚುನಾಯಿತರಾದರು. 1977ರಲ್ಲಿ ಅವರು ಸಿಪಿಐ(ಎಂ)ನ ಕೊಲ್ಲಂ ಜಿಲ್ಲಾ ಸಮಿತಿಯ ಸದಸ್ಯರಾದರು, ಮತ್ತು 1978ರಲ್ಲಿ ಕ್ಯೂಬಾದ ಹವಾನಾದಲ್ಲಿ ನಡೆದ ವಿಶ್ವ ಯುವಜನ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿದರು.

1979ರಲ್ಲಿ ಅವರು ಎಸ್‌ಎಫ್‌ಐನ ಅಖಿಲ ಭಾರತ ಅಧ್ಯಕ್ಷರಾದರು ಮತ್ತು 1984ರಲ್ಲಿ ಸಿಪಿಐ(ಎಂ) ಕೇರಳ ರಾಜ್ಯ ಸಮಿತಿಯ ಸದಸ್ಯರಾದರು. 1986ರಲ್ಲಿ ಅವರು ರಾಜ್ಯ ಸಭೆಯನ್ನು ಪ್ರವೇಶಿಸಿದಾಗ ಭಾರತದಲ್ಲಿ ಅತಿ ಕಿರಿ ವಯಸ್ಸಿನ ಸಂಸದರಲ್ಲಿ ಒಬ್ಬರಾದರು. 1998ರ ವರೆಗೆ ರಾಜ್ಯಸಭಾ ಸದಸ್ಯರಾಗಿದ್ದಾಗ ಅವರು ಅಧ್ಯಕ್ಷ ಪ್ಯಾನೆಲ್‌ನ ಭಾಗವಾಗಿದ್ದರು ಮತ್ತು ವಿಚಾರಪೂರ್ಣ ಮತ್ತು ತತ್ವಬದ್ಧ ಮಧ್ಯಪ್ರವೇಶಗಳಿಗೆ ಹೆಸರುವಾಸಿಯಾಗಿದ್ದರು.

ಈ ನಡುವೆ 1987ರಲ್ಲಿ ಅವರು ಡಿವೈಎಫ್‌ಐನ ಅಖಿಲ ಭಾರತ ಅಧ್ಯಕ್ಷರಾದರು. 1987ರಲ್ಲಿ ಸಿಪಿಐ(ಎಂ)ನ ಕೇಂದ್ರ ಸಮಿತಿ ಸದಸ್ಯರಾಗಿ ಮತ್ತು ನಂತರ 1992ರಲ್ಲಿ ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಆಯ್ಕೆಯಾದರು. 1997ರಲ್ಲಿ ಕೇರಳ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿಯೂ ಆಯ್ಕೆಗೊಂಡರು. ಅದೇ ವರ್ಷ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾಷಣ ಮಾಡಿ ಜಾಗತಿಕ ವೇದಿಕೆಯಲ್ಲಿ ಭಾರತದ ಎಡಪಂಥದ ದನಿ ಮೊಳಗಿಸಿದರು.



**ಹವಾನಾದಲ್ಲಿ ಕ್ಯೂಬಾ ಅಧ್ಯಕ್ಷ ಕಾಸ್ಟ್ರೊರೊಂದಿಗೆ, 1992 ಆಗಿನ ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರೊಂದಿಗೆ**

2006ರಲ್ಲಿ ಕಾಂ. ಬೇಬಿ ಕುಂದರ ಕ್ಷೇತ್ರದಿಂದ ಕೇರಳ ವಿಧಾನಸಭೆಗೆ ಚುನಾಯಿತರಾದರು ಮತ್ತು ರಾಜ್ಯದ ಶಿಕ್ಷಣ ಮತ್ತು ಸಂಸ್ಕೃತಿ ಮಂತ್ರಿಯಾಗಿ ನೇಮಕಗೊಂಡರು. ಅವರ ಕಾರ್ಯಕಾಲದಲ್ಲಿ ಕೇರಳದ ಶಿಕ್ಷಣ ಮತ್ತು ಸಂಸ್ಕೃತಿ ವಲಯದಲ್ಲಿ ಹಲವು ಪ್ರಗತಿಶೀಲ ಸುಧಾರಣೆಗಳು ಜಾರಿಗೆ ಬಂದವು– ಕಲಾಮಂಡಲಂ ವಿಶ್ವವಿದ್ಯಾಲಯದ ಸ್ಥಾನಮಾನ ಪಡೆಯಿತು; ಈಗ ಜಾಗತಿಕ ಪ್ರಸಿದ್ಧಿ ಪಡೆದಿರುವ 'ಕೊಚಿ–ಮುಝಿರಿಸ್ ಬಯನಾಲೆ' ದ್ವೈವಾರ್ಷಿಕ ಉತ್ಸವದ ಆರಂಭಿಕ ಪ್ರಯತ್ನಗಳು ನಡೆದವು; ಕಲಾವಿದರ ಕಲ್ಯಾಣ ನಿಧಿ ಕಾಯದೆಯನ್ನು ತರಲಾಯಿತು; ಉನ್ನತ ಶಿಕ್ಷಣ ಮಂಡಳಿಯನ್ನು ಒಂದು ಕಾನೂನಾತ್ಮಕ ಸಂಸ್ಥೆಯಾಗಿ ಸ್ಥಾಪಿಸಲಾಯಿತು. ಇವು ಅಲ್ಲಿ–ಇಲ್ಲಿ ಕೈಗೊಂಡ ಕ್ರಮಗಳಾಗಿರದೆ,

ಪುಟ 15 ಕ್ಕೆ

**JANASHAKTHI KANNADA VARA PATRIKE:** Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **S.Y.GURUSHANTH**